ಎಂದರೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಅಭ್ಯಂತರವಿಲ್ಲ, ಅದು ಯಾವ ರೂಪದಲ್ಲಿ ನೀವು ಚರ್ಚೆಗೆ ಅವಕಾಶ ಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು ಎಂದು ಹೇಳಿದರು. ಇದನ್ನು ಯಾವ ರೂಪದಲ್ಲಿ ಚರ್ಚೆ ಮಾಡಬೇಕು ಎನ್ನುವ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ. ಈಗ ಇಲ್ಲಿ ಅಭಿನಂದನೆ ಹೇಳುವಂಥಾದ್ದು ಧನ್ಯವಾದ ಹೇಳುವಂಥಾದ್ದು ಬೇಡ. ವಿಷಯ ಬರಲಿ. ನಾನು ಬಹಳ careful ಆಗಿದ್ದೇನೆ. ನೀವು ಯಾವ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಕೊಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಇಲ್ಲಿ ಒಂದೇ ಒಂದು ಪ್ರಶ್ನೆ ಇತ್ತು. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೋ, ಇದನ್ನೂ ತೆಗೆದುಕೊಳ್ಳಬೇಕೋ ಎನ್ನುವುದಿತ್ತು ಪ್ರಶ್ನೋತ್ತರ ಆದಮೇಲೆ ಇದಕ್ಕೆ ಅವಕಾಶ ಕೊಡೋಣ ಎನ್ನುವುದು ನನ್ನ ಅಭಿಪ್ರಾಯವಾಗಿತ್ತು. ಇದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಎಂದು ಸರ್ಕಾರದ ಪರವಾಗಿ ಈಗ ಅವರು ಹೇಳಿದರು. ನೀವು ಈಗ preliminary ಯಾಗಿ start ಮಾಡಿ. ಮುಂದೆ ಅದನ್ನು ಯಾವ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೋ ಹಾಗೆ ನಾನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಒಂದು ಐತಿಹಾಸಿಕ ನಿರ್ಣಯವನ್ನು ತೆಗದುಕೊಂಡಿದ್ದೀರಿ, ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಗಮನ ಹರಿಸಬೇಕು, ನಾನು ಐತಿಹಾಸಿಕ ನಿರ್ಣಯವನ್ನೇ ಕೊಡುತ್ತೇನೆ. ಇದನ್ನು ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಿ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೀಗಾಗಿ ಈ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ತಾವು ನಿಲುವಳಿ ಸೂಚನೆಯನ್ನೇನು ತಂದಿದ್ದೀರಿ, ಇದನ್ನು Rule 69 ಗೆ convert ಮಾಡಿ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೇನೆ. ಚರ್ಚೆಯನ್ನು ಪ್ರಾರಂಭ ಮಾಡಿ.

ಆ) ನಿಯಮ 69ರ ಅಡಿಯಲ್ಲಿ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು): ನಮ್ಮ ಪ್ರಸ್ತಾವನೆ ಏನೆಂದರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ದಿ: 25-07-2008ರ ಶುಕ್ರವಾರ ಬೆಂಗಳೂರು ನಗರದಲ್ಲಿ ಸುಮಾರು 7 ಕಡೆ ಏನು ಬಾಂಬ್ ಸ್ಫೋಟವಾಗಿದೆ, ಇದರಲ್ಲಿ ಒಬ್ಬ ಮಹಿಳೆ ಮರಣ ಹೊಂದಿದ್ದಾರೆ ಮತ್ತು 5 ಜನರು ಅತ್ಯಂತ serious ಆಗಿ ಆಸ್ಪತ್ರೆಯಲ್ಲಿದ್ದು, ಅವರು ಚಿಕಿತ್ಸೆಗೊಳಪಡುತ್ತಿದ್ದಾರೆ. ಇನ್ನೂ ಹಲವಾರು ಜನರು ಸಣ್ಣಪುಟ್ಟ ಗಾಯಗಳಾಗಿ

ಚಿಕಿತ್ಸೆಯನ್ನು ಹೊರಗಡೆ ಪಡೆದುಕೊಂಡು ಹೋಗಿದ್ದಾರೆ. ಅನೇಕ ಜನ ಆಸ್ಪತ್ರೆಯಲ್ಲಿ ಉಳಿದಿಲ್ಲ. ಕಳೆದ Friday ಯನ್ನು Black Friday ಆಗಿದೆ. ಅಂದರೆ ಹೆಚ್ಚೂ ಕಡಿಮೆ ನಮ್ಮ ಪಾಲಿಗೆ, ಬೆಂಗಳೂರು ನಗರದ ಜನರ ಪಾಲಿಗೆ ಒಂದು ಕರಾಳ ಶುಕ್ರವಾರ ಆಗಿದೆ. ಇದರಿಂದ ಯಾವ ರಾಜ್ಯ ಶಾಂತಿಗೆ ಹೆಸರುವಾಸಿಯಾಗಿತ್ತೋ, ಯಾವ ರಾಜ್ಯದಲ್ಲಿ ಜನರು ವಿಶೇಷವಾಗಿ ಕಾನೂನಿನ ಸುವ್ಯವಸ್ಥೆ ಮತ್ತು ಶಾಂತಿಯುತವಾಗಿ ನಡೆಯತಕ್ಕಂಥ ರಾಜ್ಯವಾಗಿತ್ತೋ, ಆರ್ಥಿವಾಗಿ ಭಾರತ ದೇಶದಲ್ಲಿ ಮೂರನೇ ಸ್ಥಾನದಲ್ಲಿರುವಂಥ ಒಂದು ನಗರವಾಗಿದೆಯೋ, ಇಂಥ ನಗರದಲ್ಲಿ ಈ ಘಟನೆ ನಡೆದಿರುವುದು ನೋಡಿದರೆ ಇವೊತ್ತು ಇರುವ ಆತಂಕದ ವಾತಾವರಣವನ್ನು ಇಡೀ ದೇಶದಲ್ಲಿಯೇ ಅಷ್ಟೇ ಅಲ್ಲ. ಪ್ರಪಂಚದ ಜನರು ಕೂಡ ಈ ಘಟನೆಯನ್ನು condemn ಮಾಡಿರುವುದಲ್ಲದೆ, ಈ ಕಡೆ ನೋಡುತ್ತಿದ್ದಾರೆ. ಈ ಘಟನೆಗೆ ನಾವೆಲ್ಲರೂ ಕೂಡ ಒಂದಾಗಿ condemn ಮಾಡುತ್ತಿದ್ದೇವೆ. ಯಾರು ಕೂಡ ಇದರಿಂದ ಸಂತೋಷಪಟ್ಟು, ಖುಷಿಪಟ್ಟು ಅಥವಾ ಇದರ ಬಗ್ಗೆ ಕಾಳಜಿ ಇಲ್ಲದಿರುವ ಜನರು ಒಬ್ಬರೂ ಕೂಡ ಇಲ್ಲ. ಎಲ್ಲರೂ ಕೂಡ ಇದರ ಬಗ್ಗೆ ಕಾಳಜಿ ವಹಿಸಿದ್ದಾರೆ. ಎಲ್ಲರೂ ಕೂಡ ಆತಂಕಕ್ಕೊಳಗಾಗಿದ್ದಾರೆ. ಎಲ್ಲರೂ ಕೂಡ ಇದರ ಬಗ್ಗೆ ಚಿಂತನೆ ಮಾಡಿದ್ದಾರೆ. ಏಕೆ ಈ ರೀತಿಯಾಗಿ ನಡೆದಿದೆ? ಏಕೆ ಈ ಬೆಂಗಳೂರು ನಗರವನ್ನು target ಮಾಡುತ್ತಿದ್ದಾರೆ? ಇದು ಬಹಳ ಕುತೂಹಲಕಾರಿಯಾದ ಪ್ರಶ್ನೆಯಾಗಿದೆ. ಇಡೀ ದೇಶದ ವಿವಿಧ ಭಾಗಗಳಲ್ಲಿ ಕೂಡ ಇದೇ ರೀತಿಯ ಘಟನೆ ನಡೆದಿದೆ. ಅಹಮದಾಬಾದ್‌ನಲ್ಲಿ ನಡೆದಿದೆ, ಕೇರಳದಲ್ಲಿ threaten ಮಾಡತಕ್ಕಥದ್ದಾಗಿದೆ, ಅಲ್ಲಿಯೂ alert ಮಾಡಿದ್ದಾರೆ, ತಮಿಳುನಾಡಿನಲ್ಲಯೂ alert ಮಾಡಿದ್ದಾರೆ. ಹೀಗೆ, ಅನೇಕ ಕಡೆ ಇವತ್ತು alert ಮಾಡಿರತಕ್ಕಂಥದ್ದಲ್ಲದೆ, ಇಡೀ ರಾಷ್ಟ್ರದಲ್ಲಿಯೇ ಇದೊಂದು ದೊಡ್ಡ ಸಮಸ್ಯೆ ಮತ್ತು ತಲೆ ನೋವಾಗಿದೆ. ಅದಕ್ಕಾಗಿ, ಇದೊಂದು ರಾಷ್ಟ್ರೀಯ ಸಮಸ್ಯೆ ಎಂದೇ ನಾವು ತಿಳಿದುಕೊಳ್ಳಬೇಕು. ಕೇವಲ ರಾಜ್ಯದಲ್ಲಾಯಿತು, ಯಾರದೋ ಒಬ್ಬರದು failure ಅಥವಾ ಇನ್ನೊಬ್ಬರು ಮಾಡಿದ್ದಾರೆ ಎಂದು ಅದನ್ನು ನಾನು ಸೀಮಿತವಾಗಿ ಟೀಕೆ ಟಿಪ್ಪಣಿ ಮಾಡುವುದಿಲ್ಲ ರಾಷ್ಟ್ರದಲ್ಲಿ ಈ ಸಮಸ್ಯೆ ಬಂದಿದೆ. ಆದರೆ, ಇದನ್ನೆಲ್ಲ ನಾವು ಹೇಗೆ ನಿಭಾಯಿಸಬೇಕು?. ಯಾವ ರೀತಿಯಲ್ಲಿ ಇದನ್ನು ಎದರಿಸಬೇಕು? ಇದು ಆಗಿ ಮೂರು ದಿವಸಗಳಾಯಿತು. ಮೂರು ದಿವಸಗಳಾದ ಮೇಲೆ, ಅನೇಕ ಕಡೆ ನಮ್ಮ ಜನರ ಮನಸ್ಸಿನಲ್ಲಿರುವ ಹೆದರಿಕೆ, ಅಂಜಿಕೆ, ಆತಂಕ ಹೊರಟು ಹೋಗಬೇಕಾಗಿತ್ತು. ಆದರೆ, ಇನ್ನೂ ಕೂಡ ಜನರ ಮನಸ್ಸಿನಲ್ಲಿ ಹೆದರಿಕೆ, ಆತಂಕ ಇದೆಲ್ಲವೂ

ಕೂಡ ಇದೆ. ಹೀಗಾಗಿ, ವ್ಯವಹಾರದಲ್ಲಿ ತೆಗೆದುಕೊಳ್ಳಿ, ಮಕ್ಕಳು ಹೋಗತಕ್ಕ ಶಾಲೆಗಳನ್ನು ತೆಗೆದುಕೊಳ್ಳಿ, ನೌಕರರು ಅನೇ ಕಡೆ ಕಾರ್ಖಾನೆಗಳಲ್ಲಿರಬಹುದು, Corporate Office ನಲ್ಲಿರಬಹುದು ಅಥವಾ ಸರ್ಕಾರಿ ನೌಕರರು ಇರಬಹುದು. ಎಲ್ಲರೂ ಕೂಡ ಆತಂಕದ ವಾತಾವರಣದಲ್ಲಿದ್ದಾರೆ. ಇನ್ನೊಂದು ದುರ್ದೈವದ ಸಂಗತಿ ಏನೆಂದರೆ, ನಾನು ಇದರಲ್ಲಿ ರಾಜಕೀಯವನ್ನು ಬಳಸುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆಯೂ ಇಲ್ಲ ಮತ್ತು ಇಂಥ ಸಂದರ್ಭದಲ್ಲಿ ನಾವು ಒಬ್ಬರ ಮೇಲೊಬ್ಬರು ಹೇಳತಕ್ಕಂಥದ್ದು ಸರಿಯೂ ಅಲ್ಲ. ಅದನ್ನು ಯಾರಾದರೂ ಮಾಡಿದರೆ ನಾನು condemn ಮಾಡುತ್ತೇನೆ. ಆದರೆ, ಸಂಶಯ ಮೂಡಿಸುವ ರೀತಿಯಲ್ಲಿ ನಾವು ಮಾತನಾಡಿದರೆ, ಇದೇನೋ ಒಂದು ಸ್ಥಿರವಾದ ಸರ್ಕಾರವಿತ್ತು. ಇದನ್ನು destablize ಮಾಡುವುದಕ್ಕೆ ಕೆಲವು ಶಕ್ತಿಗಳು ಕಾರಣವಾಗುತ್ತವೆ ಎನ್ನುವ ಭಾವನೆ ಬರಬಾರದು. ಇಡೀ ದೇಶದಲ್ಲಿಯೇ ಈ ವಾತಾವರಣವಿದ್ದಾಗ, ನಾವು ಕೇವಲ ಸಂಕುಚಿತ ವಿಚಾರದಿಂದ ನಾವೇನೋ ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಪಕ್ಷದ ದೃಷ್ಟಿಯಿಂದಲೇ ನೀವು ಮಾತನಾಡಿಕೊಂಡು ಹೋದರೆ, ಆ ಸಮಸ್ಯೆಗೆ ನೀವು ಸ್ಪಂದಿಸಿದ ಹಾಗಿಲ್ಲವೆನ್ನುವ ಪ್ರಶ್ನೆ ಉದ್ಭವಿಸುತ್ತದೆ. ನೀವು ಸಮಸ್ಯೆಗೆ ಸ್ಪಂದಿಸಬೇಕು. ಮತ್ತು ತಪ್ಪು ಮಾಡಿದವರನ್ನು ಮಟ್ಟಹಾಕಬೇಕು, ತಪ್ಪುಮಾಡಿದವರನ್ನು ಕಂಡುಹಿಡಿಯಬೇಕು, ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಬೇಕು, ಈ ರಾಜ್ಯವನ್ನು ಅವರಿಂದ ಉಳಿಸಬೇಕೆಂದರೆ, ಎಲ್ಲ ಜನರ ಸಹಕಾರವನ್ನು ತೆಗೆದುಕೊಂಡು, ಎಲ್ಲರ ಸಹಾಯ ತೆಗೆದುಕೊಂಡು ಅಂಥ ಕೆಟ್ಟ ಜನರಿಗೆ ಶಿಕ್ಷೆ ಕೊಡುವುದನ್ನು ಮಾಡುವುದಲ್ಲದೆ, expose ಮಾಡಿ. ಇಡೀ ದೇಶದಲ್ಲಿ ಜನರಿಗೂ ಕೂಡ ಅದು ಗೊತ್ತಾಗುತ್ತದೆ. ಇಂಥಿಂಥ ರಾಷ್ಟ್ರ ವಿರೋಧಿ ಶಕ್ತಿಗಳು, ಸಮಾಜ ವಿರೋಧಿ ಶಕ್ತಿಗಳು, ಸಮಾಜಘಾತಕ ಶಕ್ತಿಗಳು ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಈ ಕೆಲಸವನ್ನು ಮಾಡುತ್ತಿವೆ, ಅದಕ್ಕಾಗಿ ಇವರಿಂದ ಹುಷಾರಾಗಿರಬೇಕೆನ್ನುವ message ಕೂಡ ಹೋಗುತ್ತದೆ. ಅದಕ್ಕೆ ಮೊನ್ನೆ 25ನೇ ತಾರೀಖಿನಲ್ಲಿ ಘಟನೆಯಾದ ಕೂಡಲೇ ಅವರು ಆಡಿದಂಥ ಮಾತುಗಳು, ಮುಖ್ಯಮಂತ್ರಿಯವರಾಗಿರಲಿ ಮತ್ತು ಒಬ್ಬರು ರಾಜಕೀಯ ಮುಖಂಡರು ಏನು ಹೇಳಿದ್ದಾರೆ, ಅವರು ಈ ಮನೆಯ ಸದಸ್ಯರಲ್ಲ, ನಾನು ಅವರ ಹೆಸರನ್ನು ಪ್ರಸ್ತಾಪ ಮಾಡುವುದಕ್ಕಿಂತಲೂ ನಿಮಗೇ ಗೊತ್ತಿದೆ, ನೀವು ತಿಳಿದುಕೊಂಡಿರಬಹುದು, ಅವರೂ ಕೂಡ ಯಾವ್ಯಾವುದೋ ಪಕ್ಷಗಳ ಹೆಸರನ್ನು ತೆಗೆದುಕೊಂಡು ಹೇಳಿದರು.

ಅದು ಸರಿಯೂ ಅಲ್ಲ. ಅದಕ್ಕಾಗಿ, ನಾವೆಲ್ಲರೂ ಸೇರಿ ಇಂಥ ಘಟನೆಗಳನ್ನು condemn ಮಾಡುವುದೊಂದೇ ಅಲ್ಲ, ಇಂಥ ಘಟನೆಗಳನ್ನು ಹತೋಟಿಯಲ್ಲಿಡುವುದಕ್ಕೋಸ್ಕರ, ನಾವು ಯಾರ್ಯಾರ ಸಹಕಾರ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಇವತ್ತು NGO's ಇರಬಹುದು, ಸಾಮಾನ್ಯ ಜನ ಇರಬಹುದು ಮತ್ತು ಅನೇಕ Agency ಗಳಿರಬಹದು ಅವರೆಲ್ಲರ ಸಹಾಯದಿಂದಲೇ ನಮ್ಮ ಕಾನೂನಿನ ಸುವ್ಯವಸ್ಥೆಯನ್ನು ಈ ರಾಜ್ಯದಲ್ಲಿ ಕಾಪಾಡಬೇಕಾಗಿದೆ. ಇವತ್ತು ನಮ್ಮಲ್ಲಿ Intelligence Wing ಇದೆ, ಆಮೇಲೆ, Anti-Terrorist squad ಇದೆ. ಈಗಂತೂ Naxalities movement ಅನ್ನು curb ಮಾಡುವ ದೃಷ್ಟಿಯಿಂದಾಗಿ ಅಥವಾ Naxalities ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಏನು ಕೆಲಸವನ್ನು ಮಾಡುತ್ತಿದ್ದಾರೋ, ಅಂಥ ಕಡೆ ನೀವು ವಿಶೇಷವಾದಂಥ ದಳವನ್ನು ಸ್ಥಾಪನೆ ಮಾಡಿ ಕಳುಹಿಸಿದ್ದೀರಿ. ಇಂಥವೆಲ್ಲ ಇದ್ದರೂ, ನಾವು ಎಲ್ಲಿ fail ಆಗಿದ್ದೇವೆ? ಏಕೆಂದರೆ, 25ನೇ ಜುಲೈನಲ್ಲಿ ಒಂದು ಘಟನೆಯಾಯಿತು. 25ನೇ ಜುಲೈಗೆ simultaneously 7 ಜಾಗಗಳಲ್ಲಿ ಈ ಘಟನೆಯಾದ ಮೇಲೆ 26ನೇ ತಾರೀಖಿನಲ್ಲಿ ಒಂದು ಕಡೆ ಯಾವ Forum Mall ನ ಪಕ್ಕದಲ್ಲಿ ಒಂದು ಘಟನೆ ನಡೆದಿತ್ತೋ, ಅದೇ Forum Mall ಹತ್ತಿರ ಇನ್ನೊಂದು ಬಾಂಬ್ ಅನ್ನು 10.30 ಗಂಟೆಗೆ ಇಟ್ಟಿದ್ದಾರೆನ್ನುವುದು ಪೋಲಿಸರಿಗೆ ಗೊತ್ತಾಯಿತು. ಮತ್ತೆ 10.30 ಗಂಟೆಗೆ ಗೊತ್ತಾಗಬೇಕಾಗಿದ್ದರೆ, ನೀವೇನು alert ಮಾಡಿದ್ದಿರಿ ಅಥವಾ red alert ಮಾಡಿದ್ದಿರಿ, ಅಂಥದ್ದರಲ್ಲಿಯೂ 10.30 ಗಂಟೆಗೆ ಅಲ್ಲಿ ಬಾಂಬ್ ಅನ್ನು ತಂದಿಡತಕ್ಕಂಥ ಧೈರ್ಯವನ್ನು ಯಾವ ವ್ಯಕ್ತಿ ಮಾಡಿದ? ಆವಾಗ ನೀವು alert ಇರಲಿಲ್ಲವೇನು? ಆವಾಗ ಹಿಂದಿನ ಘಟನೆಯಾಗಿ 24 ಗಂಟೆಯಾಗಿ ಹೋಗಿತ್ತು 24 ತಾಸು ಆಗಿ ಹೋದ ಮೇಲೂ ಆ Forum Mall ನಲ್ಲಿ ಒಂದು ದೊಡ್ಡ ಕುಂಡವನ್ನು ತಂದಿಡುವವರೆಗೂ ಪೋಲಿಸರು ಎಲ್ಲಿದ್ದರು? Forum Mall ನಲ್ಲಿ ಅಂದರೆ ನಿಮಗೆ ಗೊತ್ತಿರುವ ಹಾಗೆ ಅಲ್ಲಿ ಸಾವಿರಾರೂ ಜನರು ಅಡ್ಡಾಡುತ್ತಾರೆ, ಅಂಥ ಜಾಗದಲ್ಲೇ ಅವರು ಇಡಬೇಕಾದರೆ, naturally ನಮ್ಮ Intelligence Department ಹುಷಾರಾಗಿರಬೇಕು. ಹಿಂದಿನದಾಯಿತು. ಹಿಂದಿನದು ಗೊತ್ತಿರಲಿಲ್ಲ, ಯಾರೂ ಕೂಡ ಹೇಳಿ ಮಾಡುವುದಿಲ್ಲ. ನಿಮಗೆ ಸುಳಿವಿರಲಿಲ್ಲ ಅಥವಾ ನಿಮಗೆ ಗೊತ್ತಾಗಲಿಲ್ಲವೆಂದರೆ, ಅದೊಂದು ಮಾತು. ಆದರೆ, ಮರು ದಿವಸವೂ ಕೂಡ ಈ ಘಟನೆ ನಡೆದಾಗ ಅದನ್ನು ಸುಕುಮಾರ್‌ರವರು

ಹೋಗಿ defuse ಮಾಡಿದರೆನ್ನುವುದು ಗೊತ್ತಾಯಿತು. ಅಂದರೆ, ಇದರರ್ಥ, ಈ ಸರಣಿ ಬಾಂಬುಗಳ ಘಟನೆಗಳು ನಡೆದರೂ ಕೂಡ ಪ್ರತಿ 5 ನಿಮಿಷಕ್ಕೊಂದು ಸ್ಫೋಟ ಆಯಿತು. ಅಂದರೆ, 1.05, 1,10, 1.15, 1.16 ಈ ತರಹ ಹೆಚ್ಚುಕಡಿಮೆ every 5 minutes ಅಂತರದಲ್ಲಿ ಆಗಿದೆ. ಇವೆಲ್ಲ ಲೆಕ್ಕ ತೆಗದುಕೊಂಡರೂ ಅರ್ಧ ತಾಸಿನಲ್ಲಿ, 40 ನಿಮಿಷಗಳಲ್ಲಿ ಎಲ್ಲ ಕಡೆ ಈ ಘಟನೆಗಳು ನಡೆದಿವೆ. ಅದು ಮುಗಿದಾದ ಮೇಲೆ ಮರುದಿವಸ Forum Mall ಹತ್ತಿರ ಆಗಿದೆ. ಇದಕ್ಕೆ ಯಾರೂ ಜವಾಬ್ದಾರರು? ಇದಕ್ಕೆ ನೀವೇನು ಹೇಳುತ್ತೀರಿ? ಇದನ್ನು ನಾನೇಕೆ ಹೇಳುತ್ತಿದೆನೆಂದರೆ, alert ಎಂದು ನೀವೇನು ಹೇಳುತ್ತಿದ್ದೀರಿ, red alert ಎಂದು ಎಲ್ಲ ಕಡೆ ಘೋಷಣೆ ಮಾಡಿ ಅಥವಾ ಇಡೀ ಬೆಂಗಳೂರು ನಗರದ ಜನತೆಗೆ ಏನು ತಿಳಿಸಿದ್ದೀರಿ, ಅದನ್ನು ತಿಳಿಸಿದ ಮೇಲೂ ಇದೇಕೆ ನಡೆಯಿತು? ಇದರಲ್ಲಿ ಏನು ವ್ಯತ್ಯಾಸವಾಗಿದೆ ಎನ್ನುವ ಬಗ್ಗೆ ನೀವು ಸ್ಪಷ್ಟವಾಗಿ ಹೇಳಬೇಕು. ಅದು ಯಾರ ಲೋಪದಿಂದಾಗಿದೆ ಎನ್ನುವುದನ್ನು ಈ ಸದನದ ಮುಂದಿಡಬೇಕು. ಮೂರನೆಯದಾಗಿ, ಮೊದಲನೇ ಪ್ರಕರಣ ಮಡಿವಾಳ check post junction ನಲ್ಲಿ 1.05 ಗಂಟೆಗೆ ನಡೆಯಿತು. ಈ ಸ್ಫೋಟಕದಿಂದ ಪಾಪ ಬಸ್ಸಿಗಾಗಿ ಕಾಯುತ್ತಿದ್ದ ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದ ಅಂದರೆ ಮೂಲತ ಅರಸೀಕೆರೆಯವರಾಗಿದ್ದರೂ ಕೂಡ ಚಿಕ್ಕಮಗಳೂರಿನಲ್ಲಿರುವ ರವಿ ಎನ್ನುವವರ ಜೊತೆಯಲ್ಲಿ ಎರಡನೇ ಲಗ್ನ ಮಾಡಿಕೊಂಡು ಅವರು ಇಲ್ಲಿ ತಮ್ಮ ಹೊಟ್ಟೆ ಪಾಡಿಗಾಗಿ ಉಳಿದುಕೊಂಡು ಕೆಲಸ ಮಾಡುತ್ತಿದ್ದರು. ಆದರೆ, ಆಕೆಗೆ ಹುಷಾರಿಲ್ಲವೆಂದು ತೋರಿಸುವುದಕ್ಕೆ St. John's Hospital ಗೆ ಹೋಗುವುದಕ್ಕೆಂದು bus stand ನಲ್ಲಿ ಕುಳಿತಿದ್ದರು. ಆಗ bomb ಸ್ಫೋಟವಾಗಿ ಆಕೆ ತೀರಿಕೊಂಡಿದ್ದಾಳೆ. ರವಿಗೂ ಕೂಡ ಗಾಯವಾಗಿ NIMHANS ನಲ್ಲಿ ಇದ್ದಾನೆ. ಅಂದರೆ, ಅದು public place ಆಗಿದೆ. ಅಲ್ಲಿ junction ನಲ್ಲಿ Traffic Police ಇದ್ದಾರೆ. ಮಡಿವಾಳ bus stand ನಿಂದ junction ವರಗೆ ನಮ್ಮ Traffic police ಇಬ್ಬರು ಮೂವರು ಏನು ನಿಲ್ಲುತ್ತಾರೆ ಆ ಜಾಗಕ್ಕೆ harldly one furlong ಇರಬಹುದು. ಕೆಲವು ಕಡೆ ಈ ಘಟನೆ ನಡೆದಿದೆ. ಉದಾರಣೆಗೆ, Mallya hospital ಹತ್ತಿರ Woodlands Hotel, Ramana Shree Hotel ಇದೆ. ಆ ಕಡೆ stadium ಇದೆ. ಇಂಥ ಕಡೆ ಅವರು bomb ಇಟ್ಟು ಹೋಗಿದ್ದಾರೆ. ಅಲ್ಲಿಯೂ ಕೂಡ ಪೋಲಿಸ್‌ನವರು ಅಡ್ಡಾಡುತ್ತಾರೆ. ಅಂದರೆ, traffic police ಆಗಲಿ, regular police

ಆಗಲಿ, ಅಲ್ಲಿ ಅವರ movement ಇದೆ. ಅಂಥ ಕಡೆಯೇ ಹಗಲು ಹೊತ್ತಿನಲ್ಲಿಯೇ ಅವರು ಬಾಂಬ್ ಇಟ್ಟು ಸ್ಫೋಟಿಸಬೇಕಾದರೆ ಎಲ್ಲಿಯಾದರೂ ಒಂದು ಕಡೆ lapse ಇರಲೇಬೇಕಲ್ಲವೇ? ಆ lapse ಎಲ್ಲಿಂದಾಗಿದೆ? ಏಕೆ? ಏನು ನಿರ್ಲಕ್ಷದಿಂದಲೋ ನಿಷ್ಕಾಳಜಿಯಿಂದಲೋ ಅಥವಾ ನೀವು ಗಮನ ಕೊಡಲಿಲ್ಲವೋ ಅಥವಾ ಇದನ್ನು re-view ಮಾಡುವುದಕ್ಕೆ ನಿಮಗೆ ಪುರುಸೊತ್ತು ಇಲ್ಲವೋ? ಅಥವಾ ನಿಮ್ಮಲ್ಲಿ ಇದರ ಬಗ್ಗೆ ಕಾಳಜಿ ಇಲ್ಲವೋ ಅಥವಾ ಇಂಥ ಘಟನೆಗಳು ಸಹಜವಾಗಿ ಇಂಥ ನಗರಗಳಲ್ಲಿಯೇ ನಡೆಯುತ್ತವೆ. Home Minister ರವರು ಇದು ಸೂಕ್ಷ್ಮವಾದ ಜಾಗ ಎಂದು ಹೇಳುತ್ತಾರೆ. ಪೋಲಿಸಗೌಡನಿಗೆ ಪಗಾರವಿಲ್ಲ, ಮಾಲಿಗೌಡನ್ನ ಕೇಳುವವರಿಲ್ಲ ಎಂದು ನಮ್ಮ ಕಡೆ ಹೇಳುತ್ತಾರೆ. ಹಾಗೆ, ಪೋಲೀಸರು ಎಂದರೆ, Home Department ಎಂದರೆ ನಿಮ್ಮನ್ನು ಸಾವಿರಾರು ಜನ ಪ್ರತಿದಿನ ಭೇಟಿಯಾಗದಿದ್ದರೂ ಕೂಡ ಇಡೀ ರಾಜ್ಯ ಕಾನೂನು ಸುವ್ಯವಸ್ಥೆ ಮಾಡುವ ಜವಾಬ್ದಾರಿ ನಿಮಗಿರುತ್ತದೆ. ಅದಕ್ಕೆ ಇದರ ಬಗ್ಗೆ ನೀವೇಕೆ ಕಾಳಜಿ ವಹಿಸಲಿಲ್ಲ? ಕಾಳಜಿ ವಹಿಸಿದ್ದರೆ ಈ ತಪ್ಪುಗಳು ಆಗುತ್ತಿರಲಿಲ್ಲ. ಒಂದು ದಿವಸ ಘಟನೆ ಆಯಿತು. Next day ಪುನಃ ಏಕೆ ಆಯಿತು? ಅದರ ಬಗ್ಗೆ ಏಕೆ ಕಾಳಜಿ ವಹಿಸಲಿಲ್ಲ? ಇದನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಬೇಕು. ಆ ಜಾಗ ಬಿಟ್ಟು 4–5 ಕಿ,ಮೀ. ಬೇರೆ ಕಡೆ ಆಗಿದೆ ಎಂದರೆ ನಾವು ಒಪ್ಪಿಕೊಳ್ಳಬಹುದು. ಯಾವ ಮಡಿವಾಳ bus stand ಇದೆ. ಅದರ ಮುಂದೆ ನೀವು ಹೋದ ಮೇಲೆ ಎಲ್ಲಿ ಇನ್ನೊಂದು ಸ್ಫೋಟವಾಗಿತ್ತು, ಅದು ಆ ಜಾಗದಿಂದ hardly 300-400 feet ಇದೆ. ಅಂದರೆ ನಾವು ಎಷ್ಟರಮಟ್ಟಿಗೆ ಲಘುವಾಗಿ ಈ ಕಾನೂನು ವ್ಯವಸ್ಥೆಯನ್ನು ತೆಗೆದುಕೊಂಡಿದ್ದೇವೆನ್ನುವುದಕ್ಕೆ ಇದೇ ಸಾಕ್ಷಿ. ಹಿಂದೆ ಆಯಿತೆಂದು ನೀವು ಹೇಳಬಹುದು. ಈ ಹಿಂದೆ 2002ರಲ್ಲಿ ಬೆಂಗಳೂರಿನಲ್ಲಿ ಆಗಿದ್ದು ನನಗೆ ಗೊತ್ತಿದೆ. Church bomb blast ಆಗಿದ್ದು, ಮತ್ತೆ ವಾಡಿಯಲ್ಲಿ, ಹುಬ್ಬಳ್ಳಿ–ಧಾರವಾಡದಲ್ಲಿ, ಬೆಂಗಳೂರಿನಲ್ಲಿ ಆಯಿತು. ತಕ್ಷಣ ನಾವು ಅವರನ್ನು ಹಿಡಿದಿದ್ದೇವೆ. ಮುಂದೆ ಕೇಸ್ ನಡೆಯಿತು. ಮುಂದೆ ಎಲ್ಲವೂ ಕೂಡ ಸುರಕ್ಷಿತವಾಗಿ ನಡೆಯಿತು. ನಾನೇಕೆ ಹೇಳುತ್ತಿದ್ದೇನೆಂದರೆ, ನೀವು commitment ಇಟ್ಟುಕೊಂಡು ಇದರ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡದೇ ಹೋದರೆ ಈ ಘಟನೆಗಳು ಇನ್ನೂ ಮುಂದುವರೆಯುತ್ತವೆ ಮತ್ತು ಈ ರಾಜ್ಯಕ್ಕೆ ಅಷ್ಟೇ ಅಲ್ಲ ದೇಶವನ್ನು ಅಸ್ಥಿರಗೊಳಿಸುವ ಕೆಲವು ಶಕ್ತಿಗಳು, ನಾವು ಆರ್ಥಿಕವಾಗಿ ಮುಂದೆ

ಬರಬಾರದು, ಬೆಳೆಯಬಾರದು, ದೇಶದಲ್ಲಿ ಪ್ರಜಾಪ್ರಭುತ್ವ ನಶಿಸಿ ಹೋಗಲಿ ಎಂದು ಪ್ರಯತ್ನ ಮಾಡುವ ಶಕ್ತಿಗಳು ಅನೇಕವು ಇವೆ. ಅದಕ್ಕೆ ನಾವು ಪ್ರಜಾಪ್ರಭುತ್ವ ಹೆಸರಿನಲ್ಲಿ ಅಧಿಕಾರ ವಹಿಸಿಕೊಂಡವರಾದ ನಮ್ಮ ಜವಾಬ್ದಾರಿ ಎಂದರೆ ಅದರ ರಕ್ಷಣೆ ಮಾಡತಕ್ಕಥದ್ದು ಇದೆ. ಪ್ರಜಾಪ್ರಭುತ್ವ ಇಲ್ಲವೆಂದರೆ Hon'ble Chief Minister ಇರುವುದಿಲ್ಲ, Home Minister ಇರುವುದಿಲ್ಲ, ನಾವಿಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಮಾತನಾಡುವ ಶಕ್ತಿಯೂ ನಮಗಿರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರಿಂದ, ದೇಶದಲ್ಲಿ ಪ್ರಜಾಪ್ರಭುತ್ವ ಇದೆ ಎನ್ನುವುದರಿಂದ ಇದೆಲ್ಲ ಶಕ್ತಿ ಸಿಕ್ಕಿದ್ದು ಮತ್ತು ಅದಕ್ಕಾಗಿ ಇದು ಸಾಧ್ಯವಾಗಿದೆ ಎನ್ನುವುದನ್ನು ನಾವ್ಯಾರೂ ಮರೆಯತಕ್ಕಂಥದ್ದಲ್ಲ. ಇದರ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರದಾಗಿದೆ. ನಮ್ಮದೂ ಇದೆ, ನಿಮ್ಮದೂ ಇದೆ. ನಾವು ಸಹಕರಿಸಬಹುದು. ಆದರೆ, ಅಧಿಕಾರ ನಮ್ಮ ಕೈಯಲ್ಲಿದೆ ಎಂದು ನೀವು ಮನಸ್ಸಿಗೆ ಬಂದಂತೆ ನಡೆದುಕೊಂಡರೆ, ಮನಸ್ಸು ಬಂದಂತೆ ಆಟ ಆಡಿದರೆ ಅಥವಾ ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಮಾತ್ರ ಇದನ್ನೂ ಉಪಯೋಗ ಮಾಡಿಕೊಳ್ಳತಕ್ಕಂಥದ್ದು, ರಾಜ್ಯ ಏನೇ ಹಾಳಾಗಿ ಹೋಗಿಲ್ಲ, ಇಲ್ಲಿ ಏನೇ ನಡೆಯಲಿ ಅದರ ಬಗ್ಗೆ ನಾವು care ಮಾಡುವುದಿಲ್ಲ. ಎಂದು ಹೇಳಿ ನಡವಳಿಕೆ ಮಾಡಿದರೆ ಖಂಡಿತವಾಗಿ ಇದರಿಂದ ನಿಮ್ಮೊಬ್ಬರಿಗೆ ಕೆಟ್ಟದಾಗುವುದಲ್ಲ, ತಾತ್ಪೂರ್ತಿಕವಾಗಿ ನಿಮಗೆ ಒಳ್ಳೆಯದಾಗಬಹುದು, ತಾತ್ಪೂರ್ತಿಕವಾಗಿ ನೀವು ಆರ್ಥಿಕವಾಗಿ ಬೆಳವಣಿಗೆಯಾಗಬಹುದು, ವೈಯಕ್ತಿಕವಾಗಿ ನಿಮ್ಮ ಪ್ರತಿಷ್ಠೆಯನ್ನು ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿದ್ದೇವೆ ಎಂದು ಹೇಳಿ ಬೆಳೆಸಿಕೊಳ್ಳಬಹುದು. ಆದರೆ, ರಾಜ್ಯದ ಹಿತ ಕಾಪಾಡುವುದರಲ್ಲಿ ನಿಮ್ಮ ಕಾಲದಲ್ಲಿ ನೀವು ವಿಫಲರಾಗಿದ್ದೀರಿ ಎಂಬ ಕಳಂಕ ನಿಮ್ಮ ಮೇಲೆ ಬರುತ್ತದೆ. ಆ ಕಳಂಕದ ಜೊತೆಯಲ್ಲಿ ನಮ್ಮ ಆರ್ಥಿಕ ಬೆಳವಣಿಗೆಯಲ್ಲಿ ಬಾಂಬೆ, ದೆಹಲಿ ಆದಮೇಲೆ 3ನೇ ಜಾಗ ಯಾವುದೆಂದರೆ ಬೆಂಗಳೂರು, Highest Income Tax paying city ಯಾವುದಾದರೂ ಇದ್ದರೆ ಅದು ಬೆಂಗಳೂರು, ಅದಕ್ಕಾಗಿ ನಮಗೆ revenue ಹೆಚ್ಚಿಗೆ ಬರುತ್ತದೆ, ಅದಕ್ಕಾಗಿ ಇಡೀ ಪ್ರಪಂಚದಲ್ಲಿಯೇ ಬೆಂಗಳೂರಿನ ಹೆಸರಿದೆ, ಇದಕ್ಕೆ ಮಸಿ ಬಳಿಯಬೇಕು, ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡಬೇಕೆನ್ನುವ ಶಕ್ತಿಗಳಿವೆ. ಆ ಶಕ್ತಿಗಳನ್ನು ಕಂಡುಹಿಡಿಯುವ ಶಕ್ತಿ ನಿಮ್ಮಲ್ಲೂ ಇದೆ. ನಿಮಗೆ ಸಹಾಯ ಬೇಕಾಗಿದ್ದರೆ ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅವರು, ನೀವು ಸೇರಿ ಇದನ್ನು ಮಟ್ಟ ಹಾಕುವ ಕೆಲಸ ಮಾಡಬೇಕೇ ಹೊರತಾಗಿ ಬಹಳ

ಒಳ್ಳೆಯ ಕೆಲಸ ಮಾಡುತ್ತಿದ್ದೇವೆ, ನಮಗೆ ಕೆಟ್ಟ ಹೆಸರು ತರುವುದಕ್ಕೆ ಮಾಡುತ್ತಿದ್ದಾರೆಂದರೆ ಯಾರು ಮಾಡಿದರು? MLA ಗಳೆಲ್ಲರೂ ನಿಂತು ಬಾಂಬು ಇಡಿ ಎಂದು ಹೇಳಿದರೇ? ಅಥವಾ ರಾಜ್ಯದ ನತದೃಷ್ಟರು, ಕೂಲಿಕಾರರು, ಬಡವರು ಅವರೇ ಅಲ್ಲವೇ ಸಾಯುವವರು? ಅಹಮದಾಬಾದ್‌ನಲ್ಲಿ ನಡೆದ ಘಟನೆಯ ಚಿತ್ರಗಳನ್ನು ನೋಡಿ. ಅಲ್ಲಿ ಸತ್ತವರು ಕಾಯಿಪಲ್ಯೆ ಮಾರುವವರು, ಮಾರ್ಕೆಟ್‌ನಲ್ಲಿದ್ದವರು, ರಸ್ತೆಯಲ್ಲಿದ್ದವರು, ಸೈಕಲ್‌ನಲ್ಲಿ ಹೋಗುವವರು tiffin box ತೆಗೆದುಕೊಂಡು ಹೋಗುವವರು, ದವಾಖಾನೆಗೆ ಹೋಗುವವರು, ಅವರೇ ಸತ್ತಿದ್ದು. ಇಲ್ಲಿ ಸತ್ತಿದ್ದು ಕೂಡ ಕೂಲಿಕಾರ ಹೆಣ್ಣುಮಗಳೇ. ಇವತ್ತು injured ಆದವರು ಯಾರೆಂದರೆ, ಕೂಲಿ ಮಾಡುವ ಜನರು, ಒಂದಿಬ್ಬರು mechanic, garage ನಲ್ಲಿ ಕೆಲಸ ಮಾಡುವವರು, ಕೂಲಿ ಕೆಲಸ ಮಾಡುವವರು ಸತ್ತಿದ್ದಾರೆಯೇ ಹೊರತು ದೊಡ್ಡ ಶ್ರೀಮಂತರ್‍ಯಾರೂ ಇಂಥದ್ದರಲ್ಲಿ ಸಾಯುವುದಿಲ್ಲ. ಸಾಯುವವರೆಲ್ಲ ಬಡವರು ಮತ್ತು ನಿರ್ಗತಿಕರೇ. ಅದಕ್ಕಾಗಿ ಇದನ್ನು ಯಾರು ಲಘುವಾಗಿ ತೆಗೆದುಕೊಳ್ಳಬಾರದು ಅಥವಾ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ದೃಷ್ಟಿಯಿಂದ ಇನ್ನೊಬ್ಬರ ಮೇಲೆ ಗೂಬೆ ಕೂರಿಸಿ ಏನಾದರೂ ಮಾತನಾಡುವುದಕ್ಕೆ ಹೋಗಬಾರದು. ಇದು ರಾಷ್ಟ್ರದ ಪ್ರಶ್ನೆಯಾಗಿದೆ. ಇದು ಕೇವಲ ಒಂದೇ ರಾಜ್ಯದ್ದಲ್ಲ, ರಾಜ್ಯದ ಜೊತೆಯಲ್ಲಿ ರಾಷ್ಟ್ರದ ಪ್ರಶ್ನೆ ಇದ್ದ ಕಾರಣ ನಮ್ಮ ಸ್ವಾತಂತ್ರ್ಯ ನಮ್ಮ ಸಾರ್ವಭೌಮತೆಯನ್ನು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಕೆಲಸವೆಂದು ನಾವು ಮಾಡಬೇಕೇ ಹೊರತು ಅದನ್ನು ಬೇರೆಯವರಿಂದ ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ನಮ್ಮನ್ನು ಕೆಡಿಸಬೇಕೆನ್ನುವವರಿರುತ್ತಾರೆ. ಈ ರಾಷ್ಟ್ರ ಬಹಳ weak ಆಗಿರಬೇಕೆನ್ನುವವರಿರುತ್ತಾರೆ ಅಥವಾ ಪ್ರಬಲವಾಗಿ ಬೆಳೆಯುವ ರಾಷ್ಟ್ರದ ಶಕ್ತಿಯನ್ನು ಕುಗ್ಗಿಸಬೇಕೆನ್ನುವವರಿರುತ್ತಾರೆ. ಯುಪಿಎ ಸರ್ಕಾರ ಮಾನ್ಯ ಮನಮೋಹನ್‌ಸಿಂಗ್‌ರವರು ಮಾಡಿದಂಥ ಅಣುಬಂಧಕ್ಕೆ ತಮಗೆ ಗೊತ್ತಿರುವಂತೆ ಪಾಕಿಸ್ತಾನದವರು ಕೂಡ ಅಂಥದೇ ನಮಗೆ ಮಾಡಿ ಕೊಡಿ ಎಂದು ಹೇಳಿಕೊಂಡು ಇವತ್ತು ಓಡಾಡುತ್ತಿದ್ದಾರೆ. ಯಾರು ಮೊದಲು ವಿರೋಧಿಸಿದರೋ, ಅವರಿಗೆ ಏಕೆ ಈ ರೀತಿ ಮಾಡಿದಿರಿ ಎಂದು ಈಗಲು ವಿರೋಧಿಸುತ್ತಿದ್ದಾರೆ. ಆದರೆ ನಮಗೂ ಅದರಲ್ಲಿ ಭಾಗಿಗಳನ್ನಾಗಿ ಮಾಡಿ ಎಂದು ಹೊರಟಿದ್ದಾರೆ. ಅಂದರೆ, ಎಷ್ಟರ ಮಟ್ಟಿಗೆ ಇವೊತ್ತಿನ ರಾಷ್ಟ್ರಗಳು, ರಾಜ್ಯಗಳು, ಬೇರೆ ರಾಷ್ಟ್ರಗಳಿರಬಹುದು, ನಮ್ಮ ಹಿತೈಸಿಗಳಿರುತ್ತಾರೆನ್ನುವುದು

ನಾವು ಒಂದು ಕಡೆ ನೋಡಬೇಕು. ಆದರೆ, ರಾಷ್ಟ್ರ ಕಟ್ಟತಕ್ಕಂಥ ದೃಷ್ಟಿಯಿಂದ ರಾಷ್ಟ್ರ ಬೆಳೆಸತಕ್ಕಂಥ ದೃಷ್ಟಿಯಿಂದ ನಾವು ಎಲ್ಲವನ್ನೂ ಬಿಟ್ಟು ಸಮಗ್ರವಾಗಿ ಯೋಚಿಸತಕ್ಕಂಥದ್ದು ಬಹಳ ಮುಖ್ಯ. ಅದಕ್ಕಾಗಿಯೇ ಈ ಪ್ರಜಾಪ್ರಭುತ್ವದ ಉಳಿವಿಗಾಗಿ ನಾವೆಲ್ಲರೂ ಪ್ರಯತ್ನಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಏಕಧ್ವನಿಯಿಂದ ನಾವು ಹೋಗುವುದನ್ನು ಬಿಟ್ಟು ಒಡಕಿನ ಧ್ವನಿಯನ್ನು ನೀವು ಇವತ್ತು ಎತ್ತಿ ಬೇರೆಯವರ ಮೇಲೆ ಏನಾದರೂ ಗೂಬೆ ಕೂರಿಸಿ ನಿಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳತಕ್ಕಂಥದ್ದು ಮಾಡಿದರೆ ನಿಜವಾಗಲೂ ಇದು ದುರ್ದೈವದ ಸಂಗತಿ. ಅದು ಏಕೆ ಆ ಮಾತುಗಳು ಅವರ ಬಾಯಿಂದ ಬಂದಿತೋ ನನಗೆ ಗೊತ್ತಿಲ್ಲ. ಈ ರೀತಿಯಾಗಿ ಮಾತನಾಡುವುದು ಸರಿಯಲ್ಲವೆಂದು ನಾನು ಅವರಿಗೆ ಹೇಳುತ್ತಾ. ಇವತ್ತು ಅನೇಕ ಕೆಲಸಗಳನ್ನು ನಾವು ಮಾಡಬೇಕಾಗಿದೆ. intelligence Department ಅನ್ನು strengthen ಮಾಡುವುದು ಒಂದು ಕಡೆಯಾದರೆ, impartial ಆಗಿ ಅಂಥ ಸ್ಥಾನದಲ್ಲಿ ಅಧಿಕಾರಿಗಳನ್ನು posting ಮಾಡುವುದನ್ನು ಮಾಡಬೇಕಾಗುತ್ತದೆ. ಏಕೆಂದರೆ, ಕೆಲವು ಸಾರಿ ನಾವು ಏನು ಮಾಡುತೀವೆಂದರೆ, ಬೇಕಾಗಿಲ್ಲದ ಜನರನ್ನು ಅಲ್ಲಿಗೆ ಹಾಕಿ ಬಿಡುತ್ತೇವೆ. ಆಗ ಏನಾಗುತ್ತದೆಂದರೆ, ಅವರಿಗೆ ಮನಸ್ಸು ಇದ್ದೋ ಇಲ್ಲದೆಯೋ ಒಂದೊಂದು ಸಲ ಕೆಲಸ ಮಾಡುತ್ತಾರೆ, ಒಂದೊಂದು ಸಲ ಕೆಲಸ ಮಾಡುವುದಿಲ್ಲ. ಎಲ್ಲಾ ಅಧಿಕಾರಿಗಳು ಹೀಗೆ ಇರುತ್ತಾರೆ ಎಂದಲ್ಲ. ಆದರೆ, ಕೆಲವು ಅಧಿಕಾರಿಗಳು ಮನಸ್ಸಿಲ್ಲದ ಮನಸ್ಸಿನಿಂದ ಅಲ್ಲಿಗೆ ಹೋದರೆ, ಅನೇಕ ಸಾರಿ ನಮ್ಮ ಕೆಲಸವಾಗುವುದಿಲ್ಲ. ಎರಡನೇಯದು, ಇವರ ಹತ್ತಿರ informants ಇರುತ್ತಾರೆ, ಪ್ರತಿಯೊಂದು ಊರಿಗೂ ಅಥವಾ ಪ್ರತಿಯೊಂದು Police station ಏನು ಇದೆ ಅದರ jurisdiction ನಲ್ಲಿ ಇಬ್ಬರೂ ಮೂರು ಜನ ಅವರಿಗೆ ಎಲ್ಲೆಲ್ಲಿ ಮಾಹಿತಿ ಸಂಗ್ರಹಿಸಬೇಕು ಅಂಥ ಕಡೆ informants ಇರುತ್ತಾರೆ. ಅವರೆಲ್ಲರೂ ಕೂಡ ಪೋಲಿಸ್‌ರು ಇರುವುದಿಲ್ಲ. ಅವರೆಲ್ಲರೂ ಸಾಮಾನ್ಯ ಜನರಾಗಿರುತ್ತಾರೆ. ಒಬ್ಬ ಬಿಸಿನೆಸ್‌ಮೆನ್ ಇರಬಹುದು, ಒಬ್ಬ ಹೋಟೆಲ್‌ದಲ್ಲಿ ಕೆಲಸ ಮಾಡತಕ್ಕಂಥವನು ಇರಬಹುದು, ಒಬ್ಬ ನೌಕರಿ ಮಾಡತಕ್ಕಂಥವನು ಇರಬಹುದು, ಅನೇಕ ಸಲ ಇಂಥ ಜನರಿಗೂ informants ಎಂದು Intelligence Department ನವರು, ಪೋಲಿಸ್‌ರವರು ಉಪಯೋಗ ಮಾಡಿಕೊಳ್ಳುತ್ತಾರೆ. ಅದನ್ನು ನೀವು ಮಾಡಿಕೊಂಡಿಲ್ಲವೆ? ಅದರ ಮಾಹಿತಿ ನಿಮಗೆ ಸಿಕ್ಕಿಲ್ಲವೆ? ಅದಕ್ಕೆ ಏನಾದರೂ ಹಣದ

ಕೊರತೆ ಇದೆಯೇ? ಏಕೆಂದರೆ, ನಾನು ಈ ಇಲಾಖೆಯನ್ನು ಸುಮಾರು ನಾಲ್ಕು ವರ್ಷ ಒಂಭತ್ತು ತಿಂಗಳು ನಿಭಾಯಿಸಿದ್ದೇನೆ. ಆದರೆ, ಅನೇಕ ಸಾರಿ ನಾವು ಏನು ಮಾಡುತ್ತೇವೆಂದರೆ, ಸಮಯಾನುಸಾರ ಹಣವನ್ನೇ ಕೊಡುವುದಿಲ್ಲ. ಕೆಲವು ಸಲ ಅಂತೂ ಈ ಸಣ್ಣಪುಟ್ಟ ಪೆಟ್ರೋಲ್‌ಗಾಗಿ ಅವರು ಬೇರೆಯವರ ಮೇಲೆ ಡಿಪೆಂಡ್ ಆಗಿರಬೇಕು. ಅಂದರೆ, ಬೇರೆಯವರ ಮುಲಾಜಿನಲ್ಲಿದ್ದರೆ ಖಂಡಿತವಾಗಿ ನೀವು ಯಾವ ಒಂದು ನಿಷ್ಠುರತೆಯಿಂದ ಕೆಲಸ ಮಾಡಬೇಕೆನ್ನುತ್ತೀರೋ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಇದು ಮನುಷ್ಯನ ಸ್ವಭಾವ. ಇದು ಸೈಕಾಲಾಜಿಕಲಿ ಅವನಿಗೆ ಎಫೆಕ್ಟ್ ಆಗುತ್ತದೆ. ನೀವು ಯಾರೇ ಹೋದರೂ ಅವನಿಗೆ ಸಿಗಲಿಲ್ಲವೆಂದರೆ ಅವನು ಒಬ್ಬ ಶ್ರೀಮಂತನಿಗೆ ಅಥವಾ ಬ್ಲ್ಯಾಕ್ ಮಾರ್ಕೆಟ್‌ನವರಿಗೆ ಅಥವಾ ಯಾರೋ ಒಬ್ಬ ಗೂಂಡಾಗಿರಿಯವನನ್ನು ಹಿಡಿದು, ಅಲ್ಲಿಂದ ತುಂಬಿಸಿಕೊಂಡು ಅವನು ಹೋದನೆಂದರೆ, ತಾತ್ಪೂರ್ತಿಕವಾಗಿ ಅವನ ಮನೋಬಲ ಅಥವಾ ಅವನ ನೈತಿಕಮಟ್ಟ ಕೆಲಸ ಮಾಡುವುದರಲ್ಲಿ ಎಷ್ಟರಮಟ್ಟಿಗೆ ಇರುತ್ತದೆ ಎಂಬುದನ್ನು ತಾವು ನೋಡಿ. ನಾವು ಇದನ್ನು ಅನೇಕ ಸಾರಿ ನೋಡುತ್ತೇವೆ. ಕೆಲವು ಸಾರಿ ವೆಹಿಕಲ್ ಇರುವುದಿಲ್ಲ. ಕೆಲವು ಸಾರಿ ಎಕ್ವಿಪ್‌ಮೆಂಟ್ ಇರುವುದಿಲ್ಲ. ಕೆಲವು ಸಾರಿ ಡಿವೈಸ್ ಇರುವುದಿಲ್ಲ. ಕೆಲವುಸಾರಿ ಈ ಬಾಂಬ್ ಗಳನ್ನು ಡಿಫ್ಯೂಸ್ ಮಾಡುವುದಕ್ಕೆ ಒಂದು ಕಡೆ ಇದ್ದರೆ ಇನ್ನೊಂದು ಕಡೆ ಇರುವುದಿಲ್ಲ ಒಂದು ಪಕ್ಷ ಒಂದೇಸಾರಿ ಅನೇಕ ನಗರಗಳಲ್ಲಿ ಈ ರೀತಿಯಾದರೆ, ಇದು ಆಗಬಾರದು. ಇದು unfortunate ಒಂದು ಪಕ್ಷ ನಾಲ್ಕೈದು ಸಿಟಿಗಳಲ್ಲಿ ಈ ರೀತಿಯಾದರೆ, ಎಲ್ಲಾ ಕಡೆ ಈ ಬಾಂಬ್‌ಗಳನ್ನು ಡಿಫ್ಯೂಸ್ ಮಾಡತಕ್ಕಂಥ ಎಕ್ವಿಪ್‌ಮೆಂಟ್ ನಿಮ್ಮಲ್ಲಿ ಇದೆಯೇ? ಅದು ಇಲ್ಲ. ಅನೇಕ ಕಡೆ ಫಾಸ್ಟ್ ವಹಿಕಲ್ಸ್ ಇಲ್ಲ. ಇವೆಲ್ಲವೂ ಕೂಡ ನಮ್ಮ ಕೊರತೆ, ನ್ಯೂನ್ಯತೆಗಳೂ ಕೂಡ ಇದೆ. ನಮ್ಮಲ್ಲಿರತಕ್ಕಂಥ ನ್ಯೂನತೆಗಳನ್ನು ತುಂಬತಕ್ಕಂಥ ಕೆಲಸವನ್ನು ಒಂದು ಕಡೆ ಮಾಡಬೇಕು. ಇನ್ನೊಂದು ಕಡೆ ಪ್ರತಿ ಹದಿನೈದು ದಿವಸಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ರೆವ್ಯೂ ಮಾಡತಕ್ಕಂಥದ್ದು ಆಗಬೇಕು. ನಾವು ಬಂದು 2–3 ತಿಂಗಳಾಯಿತು ಏನು ಮಾಡಬೇಕೆಂದು ಈಗ ನೀವು ಹೇಳಬಹುದು. ಮೊದಲು ಬಂದವರೇ ಇದರ ಬಗ್ಗೆ ತಿಳಿದುಕೊಳ್ಳಬೇಕು. ನೀವು ಈಗ ಅಧಿಕಾರ ವಹಿಸಿಕೊಂಡಿದ್ದೀರಿ ನಿಮ್ಮ ಕೆಲಸ ಏನೆಂದರೆ, ತಿಂಗಳಾನುಗಟ್ಟಲ್ಲೆ ಈ ಇಲಾಖೆಯಲ್ಲಿ ಏನು ಇದೆ ಎಂಬುದನ್ನು ಅರ್ಥಮಾಡಿಕೊಂಡು ಹೆಜ್ಜೆಯನ್ನಿಡಬೇಕು. ಅದನ್ನು ಬಿಟ್ಟು ಇಲ್ಲಿಂದ ಉಡುಪಿಗೆ ಓಡಿ

ಹೋದಿರಿ ಉಡುಪಿಯಲ್ಲಿ ಹೇಳಿಕೆ ಕೊಟ್ಟು ಬೆಂಗಳೂರಿಗೆ ಬಂದಿರಿ, ಬೆಂಗಳೂರಿನಿಂದ ಮತ್ತೆ ಉಡುಪಿಗೆ ಹೋದಿರಿ. ಕೇವಲ ಶ್ರೀಕೃಷ್ಣನ ದರ್ಶನ ತೆಗೆದುಕೊಂಡು ಅಡ್ಡಾಡಿದರೆ ಇಲ್ಲಿ ಜನರ ದರ್ಶನ ತೆಗೆದುಕೊಳ್ಳುವವರು ಯಾರು? ನಾನು ಅವರಿಗೆ ಏನು ಮನವಿ ಮಾಡಿಕೊಂಡು ಕೇಳಿಕೊಳ್ಳುತ್ತೇನೆಂದರೆ, ಇದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಐದು ಕೋಟಿ ಐವತ್ತು ಲಕ್ಷ ಜನರ ಜೀವನ ಸುರಕ್ಷತೆಯ ಬಗ್ಗೆ, ಪ್ರಾಪರ್ಟಿಯ ಬಗ್ಗೆ, ಅವರ ಮಕ್ಕಳ ಸುರಕ್ಷತೆಯ ಬಗ್ಗೆ ಏನು ಯೋಚಿಸುತ್ತಾರೋ ಅವರ ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಅಷ್ಟೇ ಅಲ್ಲ ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದಂಥ ಹೊರದೇಶದವರಿರಬಹುದು. ನಮ್ಮಲ್ಲಿರುವ ಬಂಡಾವಾಳದಾರರಿರಬಹುದು, ರಾಷ್ಟ್ರದ ಅನೇಕ ಬಂಡವಾಳದಾರರಿಬಹುದು, ತಮ್ಮ ಇಡೀ ಜೀವನದ ಆಸ್ತಿಯನ್ನು ಇಲ್ಲಿ ಹೂಡಿರುತ್ತಾರೆ. ಅನೇಕ ಜನ ಪಾಪ ಬಹಳ ಕಷ್ಟಪಟ್ಟು ಒಂದು ಮನೆ ತೆಗೆದುಕೊಂಡಿರುತ್ತಾರೆ, ಬಹಳ ಕಷ್ಟ ಪಟ್ಟು ಒಂದು ಸಣ್ಣ ಪುಟ್ಟ ಫ್ಯಾಕ್ಟರಿ ಹಾಕಿರುತ್ತಾರೆ, ಕಷ್ಟಪಟ್ಟು ಒಂದು ಅಂಗಡಿ ಹಾಕಿರುತ್ತಾರೆ, ಅದನ್ನೆಲ್ಲಾ ರಕ್ಷಣೆ ಮಾಡುವ ಜವಾಬ್ದಾರಿ ಮತ್ತು ಅದನ್ನು ಪ್ರಟೆಕ್ಟ್ ಮಾಡುವುದು ನಿಮ್ಮ ಕರ್ತವ್ಯವಾಗಿದೆ. ಅದನ್ನು ಬಿದಿಗಿಟ್ಟು ನೀವು ಇವೊತ್ತಿನ ದಿವಸ ಜನರನ್ನು ತಪ್ಪುದಾರಿಗೆ ಎಳೆಯುತಕ್ಕಂಥದ್ದು ಮಾಡಿದ್ದರೆ, ಅಥವಾ ಏನಾದರೂ ಸತ್ಯಕ್ಕೆ ದೂರವಾದ ಮಾತನ್ನು ಹೇಳಿ ನುಣಚಿಕೊಳ್ಳುವ ಪ್ರಯತ್ನ ಮಾಡಿದ್ದರೆ ಖಂಡಿತವಾಗಿ ಇದು ಸರಿಯಾಗುವುದಿಲ್ಲ. ಮತ್ತು ನಿಮ್ಮ ಜವಾಬ್ದಾರಿಯಿಂದ ನೀವು ಕೆಲಸ ಮಾಡಿದ ಹಾಗೆ ಆಗುವುದಿಲ್ಲ. ಇವೊತ್ತು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಮಾನ್ಯ ಶಿವರಾಜ್ ಪಾಟೀಲ್‌ರವರು ಮತ್ತು ಮಾನ್ಯ ಮನಮೋಹನ್ ಸಿಂಗ್‌ರವರು ಹೇಳಿಕೆ ಕೊಟ್ಟಿದ್ದಾರೆ. ಈ ಸಮಾಜ ಘಾತಕ ಶಕ್ತಿಗಳಿಗೆ ನಾವೆಲ್ಲರೂ ಕೂಡ ಕಂಟ್ರೋಲ್‌ದಲ್ಲಿ ಇಡುವುದು ನಮ್ಮೆಲ್ಲರ ಕರ್ತವ್ಯವಿದೆ, ಇದಕ್ಕೆ ರಾಜ್ಯ ಸರ್ಕಾರಕ್ಕೆ ನಮ್ಮಿಂದ ಏನು ಸಹಾಯ ಬೇಕೋ ಅದನ್ನು ನಾವು ಮಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದಾರೆ. ಅದಕ್ಕಾಗಿ ಎಲ್ಲ ಮುಖ್ಯಮಂತ್ರಿಗಳ ಸಭೆಯನ್ನು ಕೂಡ ಮಾನ್ಯ ಶಿವರಾಜ್ ಪಾಟೀಲ್‌ರವರು ಕರೆಯುತ್ತೇನೆಂದು ಈಗಾಗಲೇ ಹೇಳಿದ್ದಾರೆ, ಅದಕ್ಕೆ ಬಹಶಃ ಎಲ್ಲಾ ಮುಖ್ಯಮಂತ್ರಿಗಳು ಕೂಡ ಹೋಗುತ್ತಾರೆ. ಅದಕ್ಕೆ ನಮಗೆ ಏನು ಬೇಕು ಏನು ಇಲ್ಲ ಎಂಬುದರ ಬಗ್ಗೆ ಮತ್ತು ಯಾವುದು ಸಾಧ್ಯ ಅಥವಾ ಅಸಾಧ್ಯ ಇದನ್ನು ಕೂಡ ನೋಡಬೇಕು. ಇಲ್ಲದಿದ್ದರೆ ಸುಮ್ಮನೆ ಆಗದೇ ಇರುವ ಬೇಕಾಗಿಲ್ಲದೇ ಇರುವ ನಾಲ್ಕು

ಬೇಡಿಕೆಯನ್ನು ಇಟ್ಟು ಬಂದು ನಿಮ್ಮ ಕೇಂದ್ರ ಸರ್ಕಾರದವರು ಕೊಡಲಿಲ್ಲ, ನಿಮ್ಮಿಂದ ಹೀಗೆ ಆಯಿತು, ಎಂದು ಗೂಬೆ ಕೂಡಿಸತಕ್ಕಂಥ ಮಾತುಗಳನ್ನು ಆಡಿಕೊಂಡು ಹೋದರೆ ಏನು ಪ್ರಯೋಜನವಾಗುವುದಿಲ್ಲ. ದಯವಿಟ್ಟು ಇದರ ಕಡೆಗೆ ಗಮನ ಕೊಡುವುದು ಅಷ್ಟೇ ಅಲ್ಲ. ಏಳು ಜಾಗದಲ್ಲಿ ಏನು ಸ್ಫೋಟ ಆಗಿದೆ, ಅವು ಯಾವ್ಯಾವ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಆಗಿದೆ, ಅಲ್ಲಿರುವ ಟ್ರಾಫಿಕ್ ಪೋಲಿಸ್ ಆಗಲಿ, ರೆಗ್ಯೂಲರ್ ಪೋಲಿಸ್ ಆಗಲಿ, informants ಆಗಲಿ, inteliigence people ಆಗಲಿ, ಇವರು ಏನೇನು ವ್ಯವಸ್ಥೆಗಳಿವೆ, ಏನೇನು ಮಾಡಿದ್ದರೆ, ಏನೇನು ಕಂಡು ಹಿಡಿದಿದ್ದಾರೆ, ಇದಕ್ಕೆ ಕಾರಣಕರ್ತರಾಗಿರುವ ಯಾವುದೇ ಏಜೆನ್ಸಿಗಳು ಇರಬಹುದು, ಈ ಮೂರು ದಿವಸದಲ್ಲಿ ಆ ಎಜೆನ್ಸಿಗಳನ್ನು ಪತ್ತೆ ಹಚ್ಚಿದ್ದೀರಾ? ನಡೆದಂಥ ಘಟನೆಯ ಬಗ್ಗೆ ಕೇಂದ್ರ ಸರ್ಕಾರಕ್ಕಾಗಲಿ ಅಥವಾ ಬೇರೆ ಯಾವ ಸರ್ಕಾರಕ್ಕೆ ಇಂಥ ಸಂಘಟನೆಯಿಂದ ಹೆದರಿಕೆ ಇದೆ ಅಲ್ಲಿಗೆ ತಿಳಿಸಿದ್ದೀರಾ ಎನ್ನುವ ಸವಿಸ್ತಾರವಾದ ಮಾಹಿತಿಯನ್ನು ನೀವು ಈ ಸದನಕ್ಕೆ ಒದಗಿಸಿಕೊಡಬೇಕು ಮತ್ತು ಯಾವುದೇ ಅವಾಚ್ಯ ಮಾತುಗಳನ್ನು ಆಡದೇ ಜನರ ರಕ್ಷಣೆಗೋಸ್ಕರ ಜನರ ಕಲ್ಯಾಣಗೋಸ್ಕರ ನೀವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು. ಮಾನ್ಯ ಅಧ್ಯಕ್ಷರೆ, ತಮ್ಮ ಮುಂದೆ ಪ್ರಸ್ತಾಪಿಸುತ್ತಿದ್ದೇನೆ, ಅದಕ್ಕೆ ಅವರು ಉತ್ತರ ಕೊಡಬೇಕು. ಇನ್ನೂ ಅನೇಕ ಸದಸ್ಯರು ಮಾತನಾಡುತ್ತಾರೆ, ಅದೆಲ್ಲವನ್ನೂ ಕೇಳಿ ಅದಕ್ಕೆ ಉತ್ತರವನ್ನು ಕೊಟ್ಟು ತಾವು ಈ ಚರ್ಚೆಯಲ್ಲಿ ಭಾಗವಹಿಸಲು ನನಗೆ ಪರಿಮಿಷನ್ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಮತ್ತು ತಮಗೂ ಕೂಡ ಇದು ಬಹಳ ಗಂಭೀರವಾದಂಥ ವಿಚಾರವೆಂದು ಮನವರಿಕೆಯಾಗಿ ಪ್ರಶ್ನೋತ್ತರದ ಮುಂಚಿತವಾಗಿ ಇದನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ, ತಮಗೂ ಮತ್ತು ಸರ್ಕಾರಕ್ಕೂ ನಾನು ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ. ಒಂದು ವಿಚಾರವನ್ನು ನಾವೆಲ್ಲ ಅರ್ಥ ಮಾಡಿಕೊಳ್ಳಬೇಕಾಗಿದೆ. ಇದು ನಮ್ಮ ಪಕ್ಷಗಳ ಸಮಸ್ಯೆಯಲ್ಲ, ವೈಯಕ್ತಿಕವಾದಂಥ ಸಮಸ್ಯೆಯಲ್ಲ, ಹಾಗೇಯೇ ಇದು ರಾಜ್ಯದ ಸಮಸ್ಯೆಯಲ್ಲ, ಇದೊಂದು ರಾಷ್ಟ್ರದ ಸಮಸ್ಯೆ. 25ನೇ ತಾರೀಖು ಶುಕ್ರವಾರ ಬೆಂಗಳೂರಿನಲ್ಲಿ 8–9 ಕಡೆ ಬಾಂಬ್ ಬ್ಲಾಸ್ಟ್ ಆದ ತಕ್ಷಣ ಇಡೀ ಬೆಂಗಳೂರು ನಗರವೇ ಶಾಕ್ ಆಗಿ ತಲ್ಲಣವಾದಂಥ ವಿಚಾರವನ್ನು

ನಾವೆಲ್ಲಾ ನೋಡಿದ್ದೇವೆ ಮತ್ತೆ ನಮ್ಮ ರಾಜ್ಯ ಗಾಬರಿಯಾಯಿತು. ಇಡೀ ರಾಷ್ಟ್ರದ ವಿವಿಧ ಕಡೆಯಿಂದ ಸಂದೇಶಗಳು ಬರುವುದಕ್ಕೆ ಪ್ರಾರಂಭವಾಯಿತು. ಇದು ಆದ ಎರಡು ದಿನಕ್ಕೆ.

2. ಪ್ರಕಟಣೆ

ಪಂಜಾಬ್ ವಿಧಾನ ಸಭೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಮಿತಿ ಭೇಟಿಯ ಬಗ್ಗೆ.

ಅಧ್ಯಕ್ಷರು: ಮಾನ್ಯ ಡಿ.ಕೆ. ಶಿವಕುಮಾರ್‌ರವರೆ, ಪಂಜಾಬ್ ರಾಜ್ಯವಿಧಾನ ಸಭೆ ಕಮಿಟಿಯ ಅಧ್ಯಕ್ಷರು ಮತ್ತು ಸದಸ್ಯರು ಇಲ್ಲಿಗೆ ಬಂದಿದ್ದಾರೆ. ಆದ್ದರಿಂದ, ಅವರಿಗೆ ಸ್ವಾಗತ ಕೋರುತ್ತೇನೆ. ಅನಂತರ ತಮ್ಮ ಮಾತನ್ನು ಮುಂದುವರಿಸಿ.

ANNOUNCEMENT

Chairman and Members of Committee on Welfare of Scheduled Caste, Scheduled Tribe and backward Classes of Punjab Vidhana Sabha are witnessing the proceedings of the House from the Speaker's gallery. On behalf of the all the Members, I welcome them.

ಶ್ರೀ ಡಿ.ಕೆ. ಶಿವಕುಮಾರ್ : ಈ ಒಂದು ಘಟನೆ ನಮ್ಮ ರಾಷ್ಟ್ರದ ದೊಡ್ಡ ಸಮಸ್ಯೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, we should rise above politics. ಇದು ನಮ್ಮ Petty Politics ಗೆ time ಅಲ್ಲ. ಶುಕ್ರವಾರ ಈ ಘಟನೆ ಆದ ತಕ್ಷಣ ಮಕ್ಕಳು ಶಾಲೆಗೆ ಹೋಗುವುದಕ್ಕೆ ಆಗದೆ ಇರತಕ್ಕಂಥ ಒಂದು ಭಯದ ವಾತಾವರಣ ಎಲ್ಲ ಪೇರೆಂಟ್ಸ್‌ಗೆ ಉಂಟಾಗಿದೆ. ಮತ್ತೆ ಕಾರ್ಮಿಕರು ಫ್ಯಾಕ್ಟರಿಗೆ ಹೋಗುವುದಕ್ಕೂ ಒಂದು ರೀತಿಯ ಭಯದ ವಾತಾವರಣ ಉಂಟಾಗಿದೆ. ಮತ್ತೆ ರೋಗಿಗಳು ಆಸ್ಪತ್ರೆಗೆ ಹೋಗುವುದಕ್ಕೆ ಚಿಂತೆ ಮಾಡತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಮೊನೆದಿವಸ ಅಹಮದಬಾದ್ ಆಸ್ಪತ್ರೆಯಲ್ಲಿ ಇಂಥ ಒಂದು ಘಟನೆ ನಡೆದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ ಪ್ರಕಾರ ಪ್ರೇಯರ್ ಮಾಡತಕ್ಕಂಥ ಸ್ಥಳಗಳಲ್ಲಿ ಹಾಗೂ ಬಸ್ ಸ್ಟಾಂಡ್‌ಗಳಲ್ಲಿ ಮತ್ತು ಸಾಮಾನ್ಯ ಜನರು ಓಡಾಟ ಮಾಡುತ್ತಿದಂಥ ಜಾಗಗಳಲ್ಲಿ ಇಂಥ ಘಟನೆಗಳು ನಡೆದುಕೊಂಡು ಬರುತ್ತಿವೆ. ಇವೊತ್ತಿನ ದಿವಸ ಶಾಂತಿಪಾಲನೆ ಮಾಡಕೊಂಡು ಬರತಕ್ಕಂಥದ್ದು ನಮ್ಮ ರಾಜ್ಯದ ವಿಚಾರವಾಗಿದೆ. ನಮ್ಮ ರಾಜ್ಯ ಸರ್ಕಾರಕ್ಕೆ ಇದು State issue. ಆಗಿದೆ.

ಬಹುಶಃ ನಮ್ಮ ಪೊಲೀಸ್ ಇಲಾಖೆಗೆ ಆ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಇದರ ಬಗ್ಗೆ ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುವುದೇನೆಂದರೆ, ನಾವೆಲ್ಲಾ ಶಕ್ತಿಯನ್ನು ಕೊಟ್ಟು ಕೈಯನ್ನು ಬಲಪಡಿಸಬೇಕಾಗುತ್ತದೆ. ಏಕೆಂದರೆ, ನಮ್ಮ ಹಿಂದಿನ ಇತಿಹಾಸ ತೆಗೆದುಕೊಂಡರೆ, ಎಲ್ಲಾ ರಾಜ್ಯದಲ್ಲಿಯೂ ಕೂಡ ಅನೇಕ ಘಟನೆಗಳು, ಹೋರಾಟಗಳು ನಡೆದುಕೊಂಡು ಬರುತ್ತಿವೆ. ನಾಗಾಲ್ಯಾಂಡ್‌ನಲ್ಲಿ ಈ ಘಟನೆ ನಡೆಯುತ್ತಿದೆ. ಮತ್ತೆ ಮಣಿಪುರದಲ್ಲಿ ಇಂಥ ಹೋರಾಟಗಳು ನಡೆಯುತ್ತಿವೆ ಹಾಗೆಯೇ, ಪಂಜಾಂಬ್‌ನಲ್ಲಿ ವಿವಿಧ ರೀತಿಯ ಹೋರಾಟಗಳನ್ನು ನಾವು ನೋಡಿದ್ದೇವೆ. ಮತ್ತೆ ಆಂಧ್ರಪ್ರದೇಶದಲ್ಲಿಯೂ ಕೂಡ ನೋಡಿದ್ದೇವೆ. ದೆಹಲಿಯಲ್ಲಿ ನಮ್ಮ ಪಾರ್ಲಿಮೆಂಟ್ ಮೇಲೆ ಅಟ್ಯಾಕ್ ಮಾಡಿರತಕ್ಕಂಥದ್ದರ ಬಗ್ಗೆ ನಾವೆಲ್ಲಾ ಮೆಲಕು ಹಾಕಬೇಕಾಗುತ್ತದೆ. ಬಿಹಾರದಲ್ಲಿ ಮತ್ತು ಯು.ಪಿ. ರಾಜ್ಯದಲ್ಲಿ ಮತ್ತು ಬಹಶಃ ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಇಂಥ ಘಟನೆಗಳು ಆಗಾಗ ನಡೆದುಕೊಂಡು ಬರುತ್ತಿವೆ. ಅನೇಕ ಸಂದರ್ಭದಲ್ಲಿ ಇದರ ವಿರುದ್ಧವಾಗಿ ಎಲ್ಲಾ ಪಕ್ಷಗಳು ಎಲ್ಲಾ ರಾಜ್ಯಗಳಲ್ಲಿ ಅನೇಕ ಸರ್ಕಾರಗಳು ಬಂದಂಥ ಸಂದರ್ಭದಲ್ಲಿ ಎಲ್ಲರೂ ಒಗ್ಗಟ್ಟನ್ನು ಪ್ರದರ್ಶನ ಮಾಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ, ಇವೊತ್ತಿನ ದಿವಸ ನಮ್ಮ ಪೊಲೀಸ್‌ನವರಿಗೆ ಹೆಚ್ಚಿಗೆ ಶಕ್ತಿಯನ್ನು ಕೊಡತಕ್ಕಂಥದ್ದಕ್ಕೆ ಸರ್ಕಾರಗಳು ಬದ್ಧವಾಗ ಬೇಕಾಗುತ್ತದೆ. ಮತ್ತೆ ಅವರ ಮೇಲೆ ವಿಶ್ವಾಸವನ್ನು ಈ ಸಂದರ್ಭದಲ್ಲಿ ನಾವು ಇಡ ಬೇಕಾಗುತ್ತದೆ. ಆದರೆ, ಎಲ್ಲಿ ವಿಫಲಗೊಂಡಿದ್ದಾರೆ ಮತ್ತು ಎಲ್ಲಿ ವೈಫಲ್ಯವಿದೆ ಅದನ್ನು ನಾವು ತಿದ್ದಲಿಲ್ಲವೆಂದರೆ ನಾವುಗಳು ಈ ಸ್ಥಾನದಲ್ಲಿ ಕುಳಿತುಕೊಂಡು ನಮ್ಮ ಕರ್ತವ್ಯಕ್ಕೆ ಲೋಪ ಮಾಡಿದಂತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಅವರ ಪಕ್ಷದ ಅಧ್ಯಕ್ಷರ ಸ್ಟೇಟ್‌ಮೆಂಟ್ ನೋಡಿ ನನಗೆ ಗಾಬರಿಯಾಯಿತು. ಸರ್ಕಾರವನ್ನು destabilize ಮಾಡುವುದಕ್ಕೆ ಕಾರ್ಯ ನಡೆಯುತ್ತದೆ ಎನ್ನತಕ್ಕಂಥ ಅವರ ಸ್ಟೇಟ್‌ಮೆಂಟ್‌ನ್ನು ನಾವು ನೋಡಿದ್ದೇವೆ. ಇನ್ನೊಂದು ಕಡೆ ಮಾನ್ಯ ಮುಖ್ಯ ಮಂತ್ರಿಗಳು ಹುಷಾರ್ ಎಂದು ಹೇಳಿದ್ದಾರೆ. ಯಾರಿಗೆ ಹುಷಾರ್ ಎಂದು ಹೇಳಿದ್ದೀರಿ? ನಿಮಗೆ ಇದರ ಬಗ್ಗೆ ಗೊತ್ತಿದೆಯೇ? ಈ ಸಂದರ್ಭ ಏನು? ಏಕೆಂದರೆ, ನಾವೆಲ್ಲಾ ನಿಮ್ಮ ಕೈಯನ್ನು ಬಲಪಡಿಸುವುದಕ್ಕೆ ಸಿದ್ಧರಿದ್ದೇವೆ. ಇಂಥ ವಿಚಾರದಲ್ಲಿ ಯಾರೂ ಕೂಡ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಕೆಲವು ಅಧಿಕಾರಿಗಳ ಫೇಲ್ಯೂರ್ ಬಗ್ಗೆ

ಕೂಡ ನಾವು ಹೇಳದಿದ್ದರೆ ನಮ್ಮ ಕರ್ತವ್ಯಕ್ಕೆ ಲೋಪ ಮಾಡಿದಂತಾಗುವುದಿಲ್ಲವೆ? ಹಿಂದೆ ಇಲ್ಲಿ ಕುಳಿತುಕೊಂಡು ಇಂಥ ಘಟನೆಗಳು ನಡೆದಂಥ ಸಂದರ್ಭದಲ್ಲಿ ಯಾರ್ಯಾರು ಏನೇನು ಡಿಬೆಟ್ ಮಾಡಿದ್ದಾರೆಂಬುದನ್ನು ನಾವು ಮೆಲುಕು ಹಾಕಿಕೊಂಡರೆ ಇಲ್ಲಿ ದೊಡ್ಡ ಗಲಭೆಯೇ ಉಂಟಾಗುತ್ತದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಒಂದು ಪಕ್ಷದ ಅಧ್ಯಕ್ಷರಾಗಿದ್ದುಕೊಂಡು ಒಂದು ಪಕ್ಷ ಇದಕ್ಕೆ ಹೊಣೆ ಎಂದು ಮತ್ತೆ ಇವರೇನೋ ಪಿತೂರಿ ಮಾಡುತ್ತಿದ್ದಾರೆಂದು ಮತ್ತು ಸರ್ಕಾರವನ್ನು ತೆಗೆಯುವುದಕ್ಕೆ ಏನೋ ಮಾಡುತ್ತಿದಾರೆಂದು ಹೇಳುತ್ತಿದ್ದಾರೆ. ಹಿಂದೆ ಕೂಡ ಡಾ|| ರಾಜ್‌ಕುಮಾರ್ ವಿಷಯಕ್ಕೆ ಗಲಾಟೆ ನಡೆದಂಥ ಸಂದರ್ಭದಲ್ಲಿ needle of suspicion ಎಂದು ಕಾಂಗ್ರೆಸ್ ಪಕ್ಷದ ಕಡೆ ತಿರುಗಿಸುವುದಕ್ಕೆ ಮಾನ್ಯ ಕುಮಾರಸ್ವಾಮಿಯವರು ಹೊರಟಿದ್ದರು. ಆ ತನಿಖೆಯಲ್ಲಿ ಕೊನೆಗೆ ಏನೂ ಆಗಲಿಲ್ಲ. ಇದಕ್ಕೂ ಮತ್ತು ಪಾಲಿಟಿಕ್ಸ್‌ಗೂ ಏನು ಸಂಬಂಧವಿಲ್ಲವೆಂದು ಕೊನೆಗೆ ಪೊಲೀಸ್‌ನವರೆ ಹೇಳಿದರು. ಆದ್ದರಿಂದ, ಇವೊತ್ತೂ ಕೂಡ ಯಾರ ಮೇಲೋ needle of suspicion ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಸಮಸ್ಯೆ ಎಲ್ಲಿದೆ ಎಂಬುದರ ಬಗ್ಗೆ ನಾವು ಆಳವಾಗಿ ಹೋಗಿ ಈ ಸಂದರ್ಭದಲ್ಲಿ ನಾವು ಅರ್ಥಮಾಡಿಕೊಳ್ಳುವುದಕ್ಕೆ ಹೋಗಬೇಕಾಗುತ್ತದೆ. ಏಕೆಂದರೆ, ನಾವು ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಇಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇವೆ. ಆದ್ದರಿಂದ, ನಾವೂ ಕೂಡ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ನಮ್ಮ ಅನೇಕ ಮುಖಂಡರು ತ್ಯಾಗ ಮಾಡಿರುವಂಥ ಚರಿತ್ರೆಯನ್ನುಳ್ಳ ಪಕ್ಷದ ಪ್ರತಿನಿಧಿಯಾಗಿ ನಾವು ಇದ್ದೇವೆ. ಗುಂಡಿಗೋಸ್ಕರ ನಾವು ಗಾಂಧೀಜಿಯವರನ್ನು ಕಳೆದುಕೊಂಡಿದ್ದೇವೆ. ಮತ್ತೆ ಗುಂಡಿಗೋಸ್ಕರ ಇಂದಿರಾಗಾಂಧಿಯವರನ್ನು ನಾವು ಕಳೆದುಕೊಂಡಿದ್ದೇವೆ. ಹಾಗೆಯೇ, ಈ ಒಂದು ಭಯೋತ್ಪಾದನೆಯಿಂದ ರಾಜೀವ್ ಗಾಂಧಿಯವರನ್ನು ಕಳೆದುಕೊಂಡಿದ್ದೇವೆ. ಆದ್ದರಿಂದ, ಈ ದೇಶದ ಐಕ್ಯತೆ, ಸಮಗ್ರತೆ ಮತ್ತು ಈ ದೇಶದ ಶಾಂತಿಗೋಸ್ಕರ ನಾವು ಯಾವ ರೀತಿ ನಿಲ್ಲಬೇಕೆಂದು ಮತ್ತು ಯಾವ ರೀತಿ ಸಹಕಾರ ಕೊಡಬೇಕೆಂಬುದರ ಬಗ್ಗೆ ಮತ್ತೆ ಇಲ್ಲಿ ವ್ಯಕ್ತಿ ಮತ್ತು ಸರ್ಕಾರ ಮುಖ್ಯವಲ್ಲ ಇಲ್ಲಿ ರಾಷ್ಟ್ರ ಮುಖ್ಯವೆಂದು ಇಲ್ಲಿ ಕುಳಿತಿರತಕ್ಕಂಥ ಪ್ರತಿಯೊಬ್ಬ ಸದಸ್ಯರೆಲ್ಲರೂ ಕೂಡ ಅರಿತುಕೊಂಡಿದ್ದೇವೆ. ಇವೊತ್ತಿನ ದಿವಸ ಎಲ್ಲ ದೇಶಗಳ ಚರಿತ್ರೆಗಳನ್ನು ತಾವು ನೋಡಬಹುದು. ಅಮೇರಿಕ ದೇಶ ಕೂಡ ವಿಯೆಟ್ನಾಂ ಮೇಲೆ 14

ವರ್ಷ ಹೋರಾಟ ಮಾಡಿ ಗುಂಡು ಇಟ್ಟುಕೊಂಡಿದ್ದರೂ ಕೊನೆಗೆ ಏನೂ ಮಾಡುವುದಕ್ಕೆ ಆಗಲಿಲ್ಲ. ಕೊನೆಗೆ ಶಾಂತಿಗೆ ಹೋಗತಕ್ಕಂಥ ಪರಿಸ್ಥಿತಿ ಅಲ್ಲಿ ನಿರ್ಮಾಣ ಆಯಿತು. ಇವೊತ್ತಿನ ದಿವಸ ಭಾರತ ದೇಶ ಮತ್ತು ಬೆಂಗಳೂರು ಇಷ್ಟೊಂದು ಅಭಿವೃದ್ಧಿಯಾಗುತ್ತಿದೆ. ಪ್ರಪಂಚದ 1/3 ಫೈನಾನ್ಸ್‌ನ್ನು ಕೇಂದ್ರ ಸರ್ಕಾರಕ್ಕೆ ನಾವು ಕೊಡುತ್ತಿದ್ದೇವೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಈಗಾಗಲೆ ಹೇಳಿದರು. ಆದ್ದರಿಂದ, ಈ ಐ.ಟಿ. ಕ್ಯಾಪಿಟಲ್‌ನ್ನು ಡಿಸ್ಟ್ರಾಯ್ ಮಾಡುವುದಕ್ಕೆ ಮತ್ತು ಈ ರಾಜ್ಯ ಅಭಿವೃದ್ಧಿಯಾಗುತ್ತಿರುವುದನ್ನು ತಡೆಯಲು ಒಂದು ದೊಡ್ಡ ಸಂಚನ್ನು ಕೆಲವರು ಮಾಡುತ್ತಿರಬಹುದು. ಇದನ್ನು ನಾವು ಕಂಡುಹಿಡಿದು ತಪ್ಪಿಸಲೇಬೇಕಾಗುತ್ತದೆ. ಇಲ್ಲಿ ಜನರು ಏನೊಂದು ವಿಶ್ವಾಸವನ್ನು ಇಟ್ಟು ಇಡೀ ಬೆಂಗಳೂರು ನಗರ ಮತ್ತು ಕರ್ನಾಟಕ ರಾಜ್ಯ ಶಾಂತಿಪ್ರಿಯ ರಾಜ್ಯ ಮತ್ತು ಶಾಂತಿಪ್ರಿಯವಾದಂಥ ನಗರವೆಂದು ಆಕರ್ಷಿತರಾಗಿ ಎಲ್ಲ ವರ್ಗದವರು ಇಲ್ಲಿಗೆ ಬರುತ್ತಿದ್ದಾರೆ. ನಮ್ಮ ಉತ್ತರ ಕರ್ನಾಟಕದಿಂದ ಮತ್ತು ನಮ್ಮ ಹಳ್ಳಿಗಳಿಂದ ಇಲ್ಲಿಗೆ ಬಂದಂಥವರು ನಗರ ಬಿಟ್ಟು ಮತ್ತೆ ವಾಪಸ್ಸು ಹೋಗುತ್ತಿಲ್ಲ. ಏಕೆಂದರೆ, ಇಲ್ಲಿನ ಹವಾಗುಣ ಮತ್ತು ಸಂಸ್ಕೃತಿ ಆ ರೀತಿಯಾಗಿದೆ. ಆದ್ದರಿಂದ, ಒಂದು ದೇಶಕ್ಕೆ ಒಂದು ಕಡೆ ಬೌಂಡರಿ ಮತ್ತು ಒಂದು ಕಡೆ ಫ್ಲಾಗ್ ಇರುತ್ತದೆ. ಮತ್ತೆ ಒಂದು ದೇಶಕ್ಕೆ ಸಂವಿಧಾನ ಇರುತ್ತದೆ. ಮುಖ್ಯವಾಗಿ ಒಂದು ಸಂಸ್ಕೃತಿ ಇರುತ್ತದೆ. ಆ ಸಂಸ್ಕೃತಿ ಏನೆಂದರೆ ಅದು ಶಾಂತಿ. ಈ ದೇಶದ ಐಕ್ಯತೆಗೆ ನಾವೆಲ್ಲಾ ಶಾಂತಿ ಪ್ರಿಯರಾಗಿದ್ದೇವೆ. ಬೆಂಗಳೂರು ನಗರಕ್ಕೆ ಇಷ್ಟೊಂದು ಆಕರ್ಷಣೆ ಏಕೆಂದರೆ, ನಮ್ಮಲ್ಲಿ ಒಂದು ಶಾಂತಿ ಮತ್ತು ಚರಿತ್ರೆ ಇದೆ. ಮತ್ತೆ ಕಲ್ಚರಲ್ ಬ್ಯಾಕ್‌ಗ್ರೌಂಡ್‌ನಲ್ಲಿಯೂ ಕೂಡ ಭಾವನಾತ್ಮಕವಾದಂಥ ಒಂದು ವಾತಾವರಣವನ್ನು ಉಂಟು ಮಾಡುವುದಕ್ಕೆ ಈ ಭೂಮಿಯಲ್ಲಿ ಅನೇಕ ಚರಿತ್ರೆಗಳು ಇವೆ. ಆದ್ದರಿಂದ, ಇವೊತ್ತಿನ ದಿವಸ ಜನರೆಲ್ಲರೂ ಇಲ್ಲಿಗೆ ಬರುತ್ತಿದ್ದಾರೆ. ಆದ್ದರಿಂದ, ಈ ರಾಜ್ಯಕ್ಕೆ ಬರತಕ್ಕಂಥ ಜನರಿಗೆ ನಾವು ರಕ್ಷಣೆ ಮಾಡತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ಯಾರನ್ನೂ ಕೂಡ ಅನುಮಾನದಿಂದ ನೋಡಿ ಕೆಸರಾಟ ಮಾಡತಕ್ಕಂಥದು ಏನಿಲ್ಲ. ಆದ್ದರಿಂದ ಎಲ್ಲ ತರಹದ ಸಹಕಾರವನ್ನು ಸರ್ಕಾರಕ್ಕೆ ನಾವು ಕೊಡುವುದಕ್ಕೆ ಸಿದ್ಧರಿದ್ದೇವೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಯಾರ ಮೇಲೂ ಅನುಮಾನ ಪಡತಕ್ಕಂಥದ್ದು ಬೇಕಾಗಿಲ್ಲ. ಏಕೆಂದರೆ, ಭಾರತದ ಒಂದು ಸ್ವಾಭೀಮಾನವನ್ನು ಉಳಿಸಿಕೊಳ್ಳಬೇಕಾಗಿದೆ. ಆದ್ದರಿಂದ, ಈ ಒಂದು ಸಾಮಾಜಿಕವಾದಂಥ

ಮತ್ತು ಆರ್ಥಿಕವಾದಂಥ ಹಾಗೂ ಸಾಂಸ್ಕೃತಿಕವಾದಂಥ, ಶೈಕ್ಷಣಿಕವಾದಂಥ ಸಮಸ್ಯೆ ಏನಿದೆ ಇವೆಲ್ಲದಕ್ಕೂ ಕೂಡ ಇದು ತೊಂದರೆಯನ್ನು ಉಂಟು ಮಾಡುತ್ತದೆ. ಅದಕ್ಕೋಸ್ಕರ ಒಟ್ಟಾಗಿ ನಾವೆಲ್ಲಾ ನಿಂತು ಇದರ ಮೂಲವನ್ನು ಹುಡಕೋಣ. ನಾನು ನಿಮಗೆ ಹೇಳುವುದೇನೆಂದರೆ, ನಿಮಗೆ ಯಾರ ಮೇಲೆ ಅನುಮಾನ ಇದೆಯೋ ಅವರ ಮೇಲೆ ತಾವು ದಯವಿಟ್ಟು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಿ. ಮತ್ತೆ ಯಾರನ್ನು ಬೇಕಾದರೂ ಬಂಧಿಸಿ. ಆದರೆ, ನಿಜವಾಗಿ ಮತ್ತು ನಿಖರವಾಗಿ ಇಂಥವರೇ ಮಾಡಿದ್ದಾರೆಂದು ಹೇಳದೆ ಮುಗಂ ಆಗಿ ಇಂಥವರು ಏನೋ ಮಾಡುತ್ತಿದ್ದಾರೆಂದು ಯಾರೋ ಮೇಲೆ ನೀವು needle of suspicion ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ, ಇವೊತ್ತಿನ ದಿವಸ ಜನ ನೋಡುತ್ತಿದ್ದಾರೆ. ಒಬ್ಬ ಮುಖ್ಯಮಂತ್ರಿ ಮತ್ತು ಪಕ್ಷದ ಸ್ಟೇಟ್‌ಮೆಂಟ್‌ನ್ನು ಬಹಳ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಒಬ್ಬ ಮುಖ್ಯಮಂತ್ರಿಯಾಗಿದ್ದುಕೊಂಡು ಈ ರೀತಿಯಾಗಿ ವೇಗ್ ಆಗಿ ಮಾತನಾಡುತ್ತಿದ್ದಾರೆಂದು ನಮಗಂತೂ ಬಹಳ ನೋವು ಉಂಟಾಗಿದೆ. ಆದ್ದರಿಂದ, ತಾವು ನೀಡಿರುವ ಹೇಳಿಕೆಯನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು. ನಾವು ನಿಮಗೆ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಇದು ರಾಷ್ಟ್ರದ, ರಾಜ್ಯದ ಸಮಸ್ಯೆ ಆಗಿದೆ. ಆದ್ದರಿಂದ, ಈ ರಾಜ್ಯವನ್ನು ಎತ್ತಿ ಹಿಡಿಯತಕ್ಕಂಥ ಕೆಲಸಕ್ಕೆ ಹೋಗಬೇಕು. ಮತ್ತೆ ಪೊಲೀಸ್‌ನವರಿಗೆ ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಅವರಿಗೆ ಏನು ಬೇಕಾದರು ಶಕ್ತಿ ಕೊಡಿ. ಏಕೆಂದರೆ, ಅವರು ನಮ್ಮ ಮಕ್ಕಳನ್ನು ಮತ್ತು ಈ ರಾಜ್ಯವನ್ನು ಕಾಯಬೇಕಾಗುತ್ತದೆ. 18ನೇ ವಯಸ್ಸಿನವರಿಗೆ ಮತದಾನದ ಹಕ್ಕು ಕೊಡತಕ್ಕಂಥ ಸಂದರ್ಭದಲ್ಲಿ ರಾಜೀವ್ ಗಾಂಧಿಯವರು ಒಂದು ಕಡೆ ಒಂದು ಮಾತನ್ನು ಹೇಳಿದರು. ಕೆಲವರೆಲ್ಲ ವಿರೋಧ ಮಾಡಿದರು. ಏಕೆ ಈ ಹುಡುಗರುಗಳಿಗೆ ಮಾತು ಕೊಡುತ್ತಿರೆಂದು ಕೇಳಿದರು. ಅವರು ಹೇಳಿದರು ಈ ದೇಶದ ಯುವಕರಿಗೋಸ್ಕರ 18ನೇ ವರ್ಷಕ್ಕೆ ಮತದಾನವನ್ನು ಕೊಡುವಂಥ ಸಂದರ್ಭದಲ್ಲಿ 16 ವರ್ಷದ ಯುವಕರನ್ನು ಯೋಧರನ್ನಾಗಿ ಸೆಲೆಕ್ಟ್ ಮಾಡಿ ಅವರಿಗೆ ಬಂದೂಕನ್ನು ಕೊಟ್ಟು ಈ ದೇಶವನ್ನು ರಕ್ಷಣೆ ಮಾಡುವುದಕ್ಕೆ, ಈ ದೇಶವನ್ನು ಕಾಯುವಂತೆ 16ನೇ ವಯಸ್ಸಿನಲ್ಲಿ ಹುಡುಗರಿಗೆ ಬಂದೂಕನ್ನು ಕೊಡುತ್ತೇವೆ. ಅಷ್ಟು ನಂಬಿಕೆಯನ್ನು ಇಟ್ಟು ಯುವಕರನ್ನು ನಾವು ಭಾರತದ ಗಡಿಯಲ್ಲಿ ಇಡುತ್ತೇವೆ. ಹಾಗೆ ಇರುವಂಥ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಈ ವ್ಯವಸ್ಥೆಯಲ್ಲಿ ಮತದಾನದ ಹಕ್ಕನ್ನು

18ನೇ ವಯಸ್ಸಿಗೆ ಕೊಡುವುದು ತಪ್ಪು ಎನ್ನುವುದು ಸರಿಯಲ್ಲವೆನ್ನುವ ವಾದವನ್ನು ಕೂಡ ಮಾಡಿದರು. ಹಾಗೆ ಇವೊತ್ತು ನಾವು ಪ್ರತಿಯೊಬ್ಬರು ಈ ರಾಜ್ಯದ ಯುವಕರನ್ನು ಈ ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲೇಬೇಕು, ನಂಬಲೇಬೇಕಾಗುತ್ತದೆ. ಈ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇವೆಲ್ಲಾ ಈ ದೇಶದ ದೊಡ್ಡ ಸಮಸ್ಯೆ. ಈ ಪಿಡುಗನ್ನು ಕಿತ್ತುಹಾಕಲಿಕ್ಕೆ ನಾವೆಲ್ಲರೂ ಕೆಲಸವನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲಸವನ್ನು ಮಾಡುತ್ತಾರೆಂದು ಹೇಳಿ ನಮಗೆ ನಂಬಿಕೆ ಇದೆ. ದಯವಿಟ್ಟು ಇದೊಂದು ಬಹಳ ದೊಡ್ಡ ಜವಾಬ್ದಾರಿ, ಏಕೆಂದರೆ ನಮ್ಮ ರಾಜ್ಯಕ್ಕೆ ಏನೊಂದು ದೊಡ್ಡ ಹೆಸರು ಇದೆ, ಒಂದು ಶಾಂತಪ್ರಿಯವಾದ ರಾಜ್ಯ, ಅದನ್ನು ಮತ್ತೆ ಉಳಿಸುವುದಕ್ಕೆ ಜನರಿಗೆ ಒಂದು ದೊಡ್ಡ ಸಂದೇಶವನ್ನು ಇವೊತ್ತು ನಾವು ಕಳುಹಿಸಬೇಕಾಗುತ್ತದೆ. ಜನರಿಗೆ ಒಂದು ಸಂದೇಶ ಇಲ್ಲಿ ಏನೂ ಇಲ್ಲ, ನಾವು ಇದ್ದೇವೆ, ನಿಮ್ಮನ್ನು ರಕ್ಷಣೆ ಮಾಡುತ್ತೇವೆ ನೀವು ಗಾಬರಿ ಮಾಡಿಕೊಳ್ಳಬೇಕಾಗಿಲ್ಲ, ನೀವು ಬನ್ನಿ ನಮ್ಮ ಜೊತೆಗೆ ಇರಿ ಈ ಶಾಂತಿಪ್ರಿಯವಾದ ರಾಜ್ಯವನ್ನು ನಾವು ಮತ್ತೊಮ್ಮೆ ಮರುಸ್ಥಾಪನೆ ಮಾಡುವುದಕ್ಕೆ ಎಲ್ಲಾ ತರಹದ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಖಾಂತರ ಈ ರಾಜ್ಯಕ್ಕೆ, ಈ ರಾಷ್ಟ್ರಕ್ಕೆ ಕೊಡುತ್ತಾರೆ ಎನ್ನುವುದನ್ನು ನಾನು ನಂಬಿ ನನಗೆ ಎರಡು ಮಾತುಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):– ಮಾನ್ಯ ಅಧ್ಯಕ್ಷರೆ, ಸರಣಿ ಬಾಂಬ್‌ಸ್ಫೋಟ ಆಗಿರತಕ್ಕಂಥದು ನಿಜವಾಗಲೂ ಕೂಡ ಖಂಡನೀಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಿ.ಸೋಮಣ್ಣ:– ನನ್ನ ಕ್ಷೇತ್ರದಲ್ಲಿ ಆಗಿರುವುದರಿಂದ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:– ಆಮೇಲೆ ನಿಮಗೆ ಕೊಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನಿಮ್ಮ ಕ್ಷೇತ್ರ ಇರಬಹುದು ಸ್ವಾಮಿ, ಇದು ಒಂದು ರಾಜ್ಯದ ಸಮಸ್ಯೆ, ಒಂದು ದೇಶದ ಸಮಸ್ಯೆ ಇದು, ನಿಮ್ಮ ಊರಿನ ಸಮಸ್ಯೆ ಅಲ್ಲ. ನಾವು ಕೂಡ ಈ ವಿಚಾರದಲ್ಲಿ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ

ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಂಡಿದ್ದೇವೆ. ಬೆಂಗಳೂರಿನಲ್ಲಿ ಶುರು ಆಗಿರತಕ್ಕಂಥದ್ದು ಒಂದು sample ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದೊಂದು ಟೆಸ್ಟಿಂಗ್ ಡೋಸ್. ಬಹುಶಃ ಇದರಲ್ಲಿ ನಾವು ಏನಾದರೂ ಉದಾಸೀನತೆಯನ್ನು ತೋರಿದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅನಾಹುತಗಳು ಸಂಭವಿಸತಕ್ಕಂಥದ್ದನ್ನು ನಾವು ಮುಂದಿನ ದಿವಸದಲ್ಲಿ ಕಾಣಬಹುದು. ಇದಕ್ಕೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಪೊಲೀಸ್ ಹಾಗೂ ಇಂಟೆಲಿಜೆನ್ಸ್ ವೈಫಲ್ಯವೇ ಕಾರಣ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಈ ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ನಮ್ಮಲ್ಲಿ ಪೊಲೀಸ್ ಶಕ್ತಿ ಇಲ್ಲ. 10–15 ವರ್ಷದ ಹಿಂದೆ ಬೆಂಗಳೂರಿನಲ್ಲಿ ಏನು ಜನಸಂಖ್ಯೆ ಇತ್ತು ಅವೊತ್ತಿನ ಕ್ರೈಮ್ ರೇಟ್ ಏನು ಇತ್ತು ಅದಕ್ಕೆ ತಕ್ಕಂತೆ ನಿಮ್ಮ ಪೊಲೀಸ್ ವ್ಯವಸ್ಥೆ ರೂಪುಗೊಂಡಿದೆ ವಿನಾಹ ಇವೊತ್ತಿಗೆ ತಕ್ಕಂತೆ ಈ ಪೊಲೀಸ್ ಶಕ್ತಿಯನ್ನು ವ್ಯವಸ್ಥಿತವಾಗಿ ನಾವು ಮಾಡುವುದಕ್ಕೆ ನಾವು ವಿಫಲವಾಗಿದ್ದೇವೆ. ದಯಮಾಡಿ ಆ ದಿಕ್ಕಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಏಕೆಂದರೆ ಯಾವುದೇ ಒಂದು ಜಾತಿ ವ್ಯಾಮೋಹಕ್ಕೋ ಅಥವಾ ಯಾವುದೋ ಒಂದು influence ಗೋ ಒಳಗಾಗಿ ದಕ್ಷ ಅಧಿಕಾರಿಗಳನ್ನು ಹೊರಗಡೆ ಇಟ್ಟು ಯಾರ್‍ಯಾರೋ ಅಧಿಕಾರಿಗಳನ್ನು ತೆಗೆದುಕೊಂಡು ಬಂದು ಇಲ್ಲಿ ಕೆಲಸವನ್ನು ಕೊಟ್ಟು ಅವರಿಂದ ಇದನ್ನು ಸಾಧನೆ ಮಾಡುತ್ತೇವೆ ಎನ್ನುವ ಯೋಚನೆಯನ್ನು ಮಾಡಿದರೆ ಬಹುಶಃ ತೊಂದರೆಯಾಗುತ್ತದೆ. ಬಹುಶಃ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಬಾಂಬ್‌ಸ್ಫೋಟ ಇರಬಹುದು ಅಥವ ಅನೇಕ ವಿಚಾರಗಳಲ್ಲಿ ಪಕ್ಷಪಕ್ಷಗಳ ಮಧ್ಯೆ ನಾವು ಜಗಳಾಡಿಕೊಳ್ಳುತ್ತಿದ್ದೇವೆ. ನಾವು ಒಂದು ಕಾಯಿದೆಯನ್ನು ಜಾರಿಗೆ ತಂದರೆ ಇನ್ನೊಂದು ಸರ್ಕಾರ ಬಂದಾಗ ಆ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳುವಂಥದ್ದು. ಕೇವಲ ಓಟಿಗೋಸ್ಕರವಾಗಿ ಈಗ ನಾವು ಏನು ಈ ಕೆಲಸವನ್ನು ಮಾಡುತ್ತಿದ್ದೇವೆ, ಅದನ್ನು ಖಂಡಿತವಾಗಿ ನಾವು ಬದಿಗೆ ಇಡಬೇಕಾಗುತ್ತದೆ. ಅಂದರೆ ಹಿಂದೆ ಇದ್ದಂಥ ಎನ್.ಡಿ.ಎ. ಸರ್ಕಾರ ಪೋಟಾ ಕಾಯಿದೆಯನ್ನು ಜಾರಿಗೆ ತಂದಿದ್ದರು. ಅದರಲ್ಲಿ ನ್ಯೂನತೆಗಳು ಇರಬಹುದು, ಎಲ್ಲಾ ಸರಿ ಇದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅದರಲ್ಲಿರತಕ್ಕಂಥ ನ್ಯೂನತೆಗಳನ್ನು ಬದಿಗಿಟ್ಟು ಅದನ್ನು ಸರಿಪಡಿಸಿ ಆ ಕಾಯಿದೆಯನ್ನು ಅನುಷ್ಠಾನಗೊಳಿಸಿದರೆ ಬಹುಶಃ ಮುಂದಿನ

ದಿವಸಗಳಲ್ಲಿ ಇಂತಹ ಕೃತ್ಯಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಆದರೆ ನಾವು ಏನೋ ಆ ಪಕ್ಷ ಆ ಪೋಟಾ ಕಾಯಿದೆಯನ್ನು ಜಾರಿಗೆ ತಂದಿದೆ ಅದನ್ನು ಕಿತ್ತುಹಾಕಬೇಕು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಕಿತ್ತುಹಾಕಿದರೆ ಬಹುಶಃ ಅದು ಸರಿಯಲ್ಲ. ನಮ್ಮ ಅನೇಕ ನಾಯಕರುಗಳು ಹೇಳಿದರು, ಈ ಪ್ರಜಾಪ್ರಭುತ್ವ ತಾವು ಈ ದೇಶದ ಬಗ್ಗೆ ಎಂದು, ಎಲ್ಲವನ್ನು ಬದಿಗಿಡಬೇಕು. ನಮ್ಮಲ್ಲಿರತಕ್ಕಂಥ ನಮ್ಮ ಸ್ವಂತಿಕೆಯನ್ನು, ನಮ್ಮ ಸ್ವಾಭಿಮಾನವನ್ನು ನಾವು ಕಾಪಾಡಿಕೊಳ್ಳಬೇಕಾದರೆ ನಾವು ಎಲ್ಲವನ್ನು ಬಿದಿಗಿಟ್ಟು ಈ ದೇಶದ ರಕ್ಷಣೆಯನ್ನು ಮಾಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡಾಗ ಮಾತ್ರ ಇದನ್ನು ರಕ್ಷಿಸಲು ಸಾಧ್ಯವಾಗುತ್ತದೆ. ದಯಮಾಡಿ ಸರ್ಕಾರ ಈಗಲೇ ಎಚ್ಚೆತ್ತುಕೊಳ್ಳಬೇಕು. ಇದನ್ನು ಉದಾಸೀನ ಮಾಡುವುದಕ್ಕೆ ಅವಕಾಶವನ್ನು ಮಾಡಬಾರದು. ಏಕೆಂದರೆ ಈ ಒಂದು ಕೃತ್ಯ ನಡೆಯತಕ್ಕಂಥದ್ದು ಜಾಸ್ತಿ ರಾತ್ರಿಹೊತ್ತಿನಲ್ಲಿಯೇ. ಬೆಳಗ್ಗೆ ಹೊತ್ತು ಸ್ಫೋಟ ಆದರೂ ಕೂಡ ರಾತ್ರಿಹೊತ್ತು ಪೊಲೀಸ್ ಇಲಾಖೆಯವರು ಬೆಂಗಳೂರಿನಲ್ಲಿ ಗಸ್ತು ತಿರಗುವ ಪೊಲೀಸ್‌ರನ್ನು ಹೆಚ್ಚು ಮಾಡಬೇಕಾಗುತ್ತದೆ. ಇವು ಬೆಳಿಗ್ಗೆ ಹೊತ್ತು ನಡೆಯತಕ್ಕಂಥ ಕೃತ್ಯಗಳಲ್ಲ. ರಾತ್ರಿಹೊತ್ತಿನಲ್ಲಿ ಭೂಮಿಯಲ್ಲಿ ಹುದುಗಿಸಿಡುವಂಥದ್ದು, ಎಲ್ಲಿಬೇಕಾದರಲ್ಲಿ ಇಡುವಂಥದ್ದು. ಅದಕ್ಕಾಗಿ ರಾತ್ರಿಹೊತ್ತಿನಲ್ಲಿ ಗಸ್ತು ತಿರಗುವಂಥದ್ದನ್ನು ಹೆಚ್ಚಿಗೆ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಈ ಒಂದು ವಿಚಾರದಲ್ಲಿ ರಾಜಕೀಯವನ್ನು ಬೆರೆಸದೆ ನಾವೆಲ್ಲರೂ ಕೂಡ ಸರ್ಕಾರದ ಪರವಾಗಿ ನಿಲ್ಲುತ್ತೇವೆ. ಸರ್ಕಾರ ಕೂಡ ಎಚ್ಚರಿಕೆಯ ಕ್ರಮವನ್ನು ತೆಗೆದುಕೊಂಡು ಮುಂದಿನ ದಿನಗಳಲ್ಲಿ ಆಗಬೇಕಾದ ದೊಡ್ಡ ಅನಾಹುತವನ್ನು ಬಹುಶಃ ತಪ್ಪಿಸುತ್ತದೆ ಎನ್ನುವುದನ್ನು ನಾನೂ ಕೂಡ ಭಾವಿಸಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮ್ಮೆಲ್ಲರಿಗೂ ಧನ್ಯವಾದಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ (ಶಿವಾಜಿನಗರ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬಾಲಕೃಷ್ಣರವರು ಹೇಳಿದಂತೆ, ನಾವು ಈ ಇಶ್ಯೂದಲ್ಲಿ ಸರ್ಕಾರಕ್ಕೆ ಪೂರ್ತಿ ನಾವು ಬೆಂಬಲವನ್ನು ಕೊಡುತ್ತೇವೆ. ಮಾನ್ಯ Chief Ministerರವರು ಆಗಲಿ, Home Ministerರವರು ಆಗಲಿ ಏನು ಕ್ರಮ ಬೇಕಾದರೂ ಕೂಡ ತೆಗೆದುಕೊಳ್ಳಬಹುದು. ಕೆಲವರಿಗೆ ಏನು ಅಭಿಪ್ರಾಯವಿದೆ ಎಂದರೆ, ನಾವು ಪೋಟಾಗೆ ವಿರುದ್ಧವಾಗಿ ಪೋಟಾ

ಕಾಯಿದೆ ನಾವು ಬೇಡವೆಂದು ಹೇಳುತ್ತೇವೆ, ನಾನು ಇವೊತ್ತು ಹೇಳುತ್ತೇನೆ, ನಾವು ಪೋಟಾ ಪರವಾಗಿ ಇದ್ದೇವೆ. ಪೋಟಾ ಕಾಯಿದೆ ವಿರುದ್ಧವಾಗಿ ನಾವು ಇಲ್ಲ. ಪೋಟಾ ಜಾರಿಯಾಗಲಿ. ಕರ್ನಾಟಕದಲ್ಲಿ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರದಲ್ಲಿ ಪೋಟಾ ಕೆಳಗಡೆ KCOCAಅಸೆಂಬ್ಲಿಯಲ್ಲಿ ಪಾಸಾಗಿತ್ತು, ಕೌನ್ಸಿಲ್‌ನಲ್ಲಿ ಕೂಡಾ ಪಾಸಾಗಿದೆ. KCOCA ಜಾರಿಗೆ ತನ್ನಿ. ನಾವು ಯಾರೂ ಪೋಟಾ ವಿರುದ್ಧವಾಗಿ ಇಲ್ಲ. ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಶಿವಕುಮಾರ್‌ರವರು ಮತ್ತು ಬಾಲಕೃಷ್ಣರವರು ಕೆಲವು ಪಾಯಿಂಟ್‌ಗಳನ್ನು ಹೇಳಿದ್ದಾರೆ. ಅವುಗಳನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಏನು ಹೇಳುವುದಕ್ಕೆ ಇಚ್ಛೇಪಡುತ್ತೇನೆಂದರೆ, ದೇವನಹಳ್ಳಿಯಲ್ಲಿ ಕಮಾಂಡೋ ಟ್ರೇನಿಂಗ್ ಸ್ಕೂಲ್ ಎಂದು ಬರಬೇಕಾಗಿತ್ತು, Regional FSL at Belgaum and Commando Training School at Devenahalli. ಆಮೇಲೆ Vehicle Explosive Detector ಅಂತ ಇದೆ. ಬಾಂಬ್‌ಗಳನ್ನು ಇಟ್ಟಿದ್ದರೆ ಅದನ್ನು ಸರ್ಚ್ ಮಾಡಬೇಕಾದರೆ ಒಂದು vehicle ಬರುತ್ತದೆ. Vehicle Explosive Detector ಇದಕ್ಕೆ ಮೂರವರೇ ಕೋಟಿ ರೂ.ಗಳು Sanction ಆಗಿತ್ತು. ಇದನ್ನು ಡೈವರ್ಟ್ ಮಾಡಿ buldings ಕಟ್ಟಿದರು. It was diverted for the construction of buildings. ಆಮೇಲೆ Modern Police Communication Network ಅಂತ ಇದೆ, ಆ ಪೋಲ್‌ನೆಟ್‌ಗೆ ಸುಮಾರು ಎಡರೂವರೇ ಕೋಟಿ ರೂ.ಗಳು sanction ಆಗಿದ್ದರೂ ಕೂಡ ಆ ಹಣ ಸರಿಯಾಗಿ ಖರ್ಚು ಆಗಿಲ್ಲ. ಅದಕ್ಕೆ ಏನು ಹೇಳುತ್ತಾರೆಂದರೆ, Rs.2.22 Crores which had been spent, was not operational even after two years of its scheduled date, due to technical snags ಎಂದು ಹೇಳುತ್ತಾರೆ. ಅದು ಏನು technical snags? ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ಆಮೇಲೆ ಸುಮಾರು 1.16 ಕೋಟಿ ರೂ.ಗಳನ್ನು emergency purpose Police Helpline set up ಮಾಡುವುದಕ್ಕೆ sanction ಆಗಿತ್ತು. ಅದು ಸರಿಯಾಗಿ ಖರ್ಚಾಗಿಲ್ಲ. ಇದು ಏಕೆ ಖರ್ಚಾಗಿಲ್ಲ? ಆಮೇಲೆ Communication and Computerisation Projects ಇದು complete ಆಗಿಲ್ಲ, ಸುಮಾರು 26 ಕೋಟಿ ರೂ.ಗಳು sanction ಆಗಿತ್ತು. Communication and Computerisation projects

could not be completed due to lack of co-ordination with the executive agencies and in-adequate monitoring despite spending Rs.26.18 Crores. ಮಾನ್ಯ ಅಧ್ಯಕ್ಷರೆ, modernisation of weapon ನಲ್ಲಿ ಹೊಸ ಕೊಡಬೇಕೆಂದು 1,046 modern weapons ತೆಗೆದುಕೊಳ್ಳುತ್ತಾರೆ. ಉದಾಹರಣೆಗೆ ತುಮಕೂರು ಮತ್ತು ಮೈಸೂರಿನಲ್ಲಿ ಇದನ್ನು distribute ಮಾಡಿರುವುದು only 7.21%. ಏಕೆ ತಂದಿರುವುದು ಆ weapons ಅನ್ನು? ಇದನ್ನೆಲ್ಲಾ ಏಕೆ distribute ಮಾಡಲಿಲ್ಲ? DIG ಆಫೀಸನವರೆಲ್ಲಾ ನಿದ್ರೆ ಮಾಡುತ್ತಿದ್ದರಾ? ಈಗ ಹೊಸದಾಗಿ Home Minister ಬಂದಿದ್ದಾರೆ. ಹೊಸದಾಗಿ Chief Minister ಬಂದಿದ್ದಾರೆ. ತಾವು ಸ್ವಲ್ಪ ಇದರ ಬಗ್ಗೆ ಅಥಮಾಡಿಕೊಳ್ಳಿ. CIPA ಅಂಥ ಒಂದು project, Common Integrated Police Application ಅಂಥ. ಇದಕ್ಕೆ ಸುಮಾರು ಎಂಟುವರೆ ಕೋಟಿ ರೂ.ಗಳು sanction ಆಗಿತ್ತು, ಇದೂ ಖರ್ಚಾಗಿಲ್ಲ. Police I.T. Software Projectಗೆ 13 ಕೋಟಿ ರೂ.ಗಳು sanction ಆಗಿತ್ತು, ಈ ವಿಪ್ರೋದವರಿಗೆ ಸುಮಾರು 1.33 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತಾರೆ. ಇದುವರೆಗೂ Wipro ದವರು Project ನ್ನು complete ಮಾಡಿಲ್ಲ. ಇಲ್ಲಿ ಏನಾಗುತ್ತಿದೆ? ಇಲಾಖೆಯವರು ನಿದ್ರೆ ಮಾಡುತ್ತಿದ್ದಾರಾ? ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣರವರು beat system ಬಗ್ಗೆ ಮಾತನಾಡಿದರು. Electronic Beat system ಆಗಬೇಕೆಂದು ಸುಮಾರು 1 ಕೋಟಿ 11 ಲಕ್ಷ ರೂಪಾಯಿಗಳು sanction ಆಗಿದೆ. ಇಷ್ಟಾಗಿದ್ದರೂ ಕುಡ ಇದುವರೆಗೂ ಆ ಹಣವೂ ಕೂಡ ಖರ್ಚಾಗಿರುವುದಿಲ್ಲ. ಆ E-Beat Systemನ್ನು ಯಾವಾಗ introduce ಮಾಡುತ್ತಾರೋ ಗೊತ್ತಿಲ್ಲ. ನಾನು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುವುದೇನೆಂದರೆ, ನಾನು ತಮ್ಮ ಮುಖಾಂತರವಾಗಿ ಸರ್ಕಾರಕ್ಕೆ ಹೇಳುತ್ತೇನೆ. ಇದರ ಬಗ್ಗೆ ನಾವು ಪಾರ್ಟಿ ಎಂದು ನೋಡುತ್ತಿಲ್ಲ. ಇದಕ್ಕೆ ಕೇಂದ್ರದಿಂದ ಹಣ sanction ಆಗಿರುವುದು. ಆ ಹಣವನ್ನು ನೀವು ಸರಿಯಾಗಿ ಖರ್ಚು ಮಾಡದೆ ಇದ್ದರೆ, ಯಾವ ತರಹ Intelligence Network improve ಆಗುತ್ತದೆ? ಯಾವ ತರಹ Intelligence Network ಎಂದರೆ ಬೆಳಗಾಂ, ಬಿಜಾಪುರ, ಬೀದರ್‌ನಲ್ಲಿ ನಡೆದ ಘಟನೆಗಳ ಬಗ್ಗೆ ತಾವು 'ಸಂಜೆವಾಣಿ' ಪತ್ರಿಕೆಯನ್ನು ನೋಡಿ. 'ಈ ಸಂಜೆ' ಪತ್ರಿಕೆಯನ್ನು ನೋಡಿ, ಅಲ್ಲಿಂದ ಅವರು ವರದಿಯನ್ನು ಬೆಂಗಳೂರಿಗೆ ಕಳುಹಿಸುತ್ತಾರೆ. ಇಲ್ಲಿ ಇವರ Intelligence

office ಇದೆಯಲ್ಲಾ, ಅವರು Chief Minister ರವರಿಗೆ ಒಂದು ಕವರ್‌ನ್ನು ಕಳುಹಿಸುತ್ತಾರೆ. "Most secret" ಕೇವಲ Home Minister ರವರೆ ಓದಬೇಕು. ಬರಿ Chief Minister ರವರು ಓದಬೇಕು. ಅದರಲ್ಲಿ ಏನೂ ಇರುವುದಿಲ್ಲ. ಇವರು 'ಸಂಜೆವಾಣಿ' ಮತ್ತು 'ಈ ಸಂಜೆ' ನೋಡಿಕೊಂಡು ಕಳುಹಿಸುತ್ತಾರೆ. ಇವರು ಏನು ಮಾಡುತ್ತಾರೆಂದರೆ, Intelligenceರವರು ತಹಶೀಲ್ದಾರ್‌ರವರ ಹತ್ತಿರ ಹೋಗಿ, 'ಇಲ್ಲಿ ಏನು ನಡೆದಿದೆ ಎಂದು ಹೇಳುತ್ತೀರಾ?' ಎಂದು ಅವರನ್ನು ಕೇಳುತ್ತಾರೆ. ಇವರು ಎಂ.ಪಿ. ಯವರ ಹತ್ತಿರ ಹೋಗುತ್ತಾರೆ. 'ಸಾರ್, ಇಲ್ಲಿ ಏನು ನಡೆದಿದೆ, ನಾವು ಏನು ಮಾಡುವುದಕ್ಕಾಗುತ್ತದೆ?' ಎನ್ನುತ್ತಾರೆ. ಈ ತರಹ ನಡೆಯುವುದಿಲ್ಲ. It is a fight on our Indians ನಮ್ಮ ಭಾರತ ದೇಶದಲ್ಲಿಯೇ ಯುದ್ಧ ಮಾಡುವುದಕ್ಕೆ ಹೊರಟಿದ್ದಾರೆ, ಇದನ್ನು ನಾವು light ಆಗಿ ತೆಗೆದುಕೊಂಡರೆ ಆಗುವುದಿಲ್ಲ. Terrorism fight ಮಾಡಬೇಕಾದರೆ, ಅದಕ್ಕೆ ಮಾಡಬೇಕಾದರೆ, State machinery ಯಲ್ಲಿ government Machinery ಸರಿಯಾಗಿ Co-ordinate ಮಾಡಬೇಕು. ಕೊಟ್ಟಿರುವುದು ಹಣವಲ್ಲ, building construction ಮಾಡುವುದಕ್ಕೆ ಅಲ್ಲಿ IT software ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ somebody should be held responsible, some action should be taken against the Police Officers who are responsible for this. ಇದನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೇಪಡುತ್ತೇನೆ.

ಶ್ರೀ ವಿ.ಸೋಮಣ್ಣ (ಗೋವಿಂದರಾಜನಗರ):– ಮಾನ್ಯ ಸಭಾಧ್ಯಕ್ಷರೆ, 25ನೇ ತಾರೀಖು ಬೆಂಗಳೂರು ನಗರಕ್ಕೆ ಒಂದು ಮಾರಕವಾದ ದಿನವಾಗಿದೆ. ವಿಶೇಷವಾಗಿ ಮಧ್ಯಾಹ್ನ 1 ಗಂಟೆ ಮೇಲೆ 1.45 ಗಂಟೆಯೊಳಗಡೆ 7 ಕಡೆ ಬಾಂಬ್ ಸ್ಫೋಟವಾಗಿದೆ. ಅದರಲ್ಲಿ 2ನೇ ಬಾಂಬ್ ಸ್ಫೋಟವಾಗಿರುವುದು ನನ್ನ ಕ್ಷೇತ್ರವಾದ ಮೈಸೂರು ಮುಖ್ಯರಸ್ತೆಯ ನಾಯಂಡಹಳ್ಳಿಯಲ್ಲಿ ಆಗಿದೆ. ಅದಾದ ಕೆಲವೇ ನಿಮಿಷಗಳಲ್ಲಿ ನಾನು ಆ ಜಾಗಕ್ಕೆ ಹೋದಾಗ ಅಲ್ಲಿಯ ಅನೇಕ ಘಟನಾವಳಿಗಳನ್ನು ತಾವು ನೋಡಿದರೆ ಇದು ಪೂರ್ವಯೋಜಿತವೇ? ಇದು ಒಂದು ರೀತಿಯ test dose ಎಂಬ ಅನುಮಾನ ಬರುತ್ತದೆ. ಬೆಂಗಳೂರು ನಗರದ ಜನರಿಗೆ, ಕರ್ನಾಟಕದ ಜನರಿಗೆ ದಾರಿ ತಪ್ಪಿಸುವಂತಹ ಕೆಲಸವನ್ನು ಈ ದಮನಕಾರಿ ಕೃತ್ಯವನ್ನು ಮಾಡಿದವರಿಗೆ ಯಾರು ಏನೇ ಆಗಿರಬಹುದು, ಇದೊಂದು

ಅಮಾನೀಯವಾದಂತಹ ಹೀನಕೃತ್ಯವಾಗಿದೆ. ಸಾಮಾನ್ಯ ಜನರ ಜೀವನದ ಜೊತೆಯಲ್ಲಿ ಸರಸಾಟವನ್ನು ಮಾಡತಕ್ಕಂತಹ ಈ ಕೃತ್ಯವನ್ನು ಕರ್ನಾಟಕ ಸರ್ಕಾವರಲ್ಲ, ರಾಜ್ಯದ ಜನರಲ್ಲ, ಇಡೀ ರಾಷ್ಟ್ರದ ಜನರು ಇವೊತ್ತು ಅದನ್ನು ಒಕ್ಕೊರಲಿನಿಂದ ಅದನ್ನು ಖಂಡಿಸುವಂತಹ ಕೆಲಸವು ಕೂಡ ಆಗುತ್ತಿದೆ. ಇವೊತ್ತು 25ನೇ ತಾರೀಖು B.T.M. Layout, Madivala, Nayandahalli, ನಾನೇನುಇನ್ನಿತರ ಪ್ರದೇಶಗಳಲ್ಲಿ ಏನೇನು ನಡೆಯಿತು, ಇದರ ಹಿಂದೆ ಯಾರು ಇದ್ದಾರೆ, ಏನಿದ್ದಾರೆ ಎನುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಯೌವ ರೀತಿಯಾದಂತಹ ಪೂರ್ವ ಯೋಜಿತವಾದಂತಹ ಸಂಚಿದೆ, ಇದರ ಸಾಧ್ಯಾ ಸಾಧ್ಯತೆಗಳೇನು? ಎನ್ನುವುದರ ಬಗ್ಗೆ ಸರ್ಕಾರ ಈಗಾಗಲೇ ಗಂಭೀರವಾಗಿ ತೆಗೆದುಕೊಂಡಿದೆ ಎಂದು ನನ್ನ ಭಾವನೆ, ಅದನ್ನು ಗಂಭೀರವಾಗಿ ತೆಗೆದುಕೊಂಡಂತಹ ಸಂದರ್ಭದಲ್ಲಿ ನಿನ್ನೆ ಈ ರಾಜ್ಯದ ಪೊಲೀಸ್ ಮುಖ್ಯಸ್ಥರಾಗಿರುವಂತಹ D.G.P. ಯವರು ಚನ್ನಪಟ್ಟಣದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ಆಗುವುದಕ್ಕೆ ಮುಂಚಿತವಾಗಿ ಚನ್ನಪಟ್ಟಣದಲ್ಲಿ ಇದು ಆಗಿದೆ. ಚನ್ನಪಟ್ಟಣದಲ್ಲಿ ಆದ ತಕ್ಷಣವೇ ಅದಕ್ಕೆ precautionary measuresನ್ನು ತೆಗೆದುಕೊಂಡಿದ್ದರೆ, ಈ ರೀತಿಯಾಗಿ ಆಗುತ್ತಿರಲಿಲ್ಲ. ಆದ್ದರಿಂದ ಇದನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳಿದ್ದಾರೆ. ನಾನು ತಮ್ಮ ಮೂಲಕವಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಎಲ್ಲೋ ಒಂದು ಕಡೆ lapse ಆಗಿದೆ ಇದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಇದು ಯಾವ ರೀತಿಯಾಗಿ ಆಗುತ್ತದೆ ಎಂಬುದನ್ನು ಗುಪ್ತಚರ ಇಲಾಖೆಯು ವರದಿಯನ್ನು ಕೊಟ್ಟಿದೆ ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ವರದಿಯನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇದರಲ್ಲಿ ಯಾವ್ಯಾವ ರೀತಿಯ ವ್ಯವಸ್ಥೆ, ಮತ್ತು ಅವ್ಯವಸ್ಥೆಗಳು ಎನ್ನುವುದಕ್ಕಿಂತ ಹೆಚ್ಚಾಗಿ ಇಚ್ಛಾಶಕ್ತಿಯ ಕೊರತೆಯಿಂದ ಏನಾದರೂ ಇದು ಆಗಿದೆಯಾ? ಬೆಂಗಳೂರು ನಗರದಲ್ಲಿ 75 ಲಕ್ಷ ಜನರು ವಾಸ ಮಾಡುತ್ತಿದ್ದಾರೆ. ಇಲ್ಲಿ ಎಲ್ಲ ಜಾತಿಯ, ಎಲ್ಲ ವರ್ಗದ, ಎಲ್ಲ ಭಾಷೆಯ ಜನರು ಇದ್ದಾರೆ. ವಿಶೇಷವಾಗಿ 25ನೇ ತಾರೀಖಿನ ದಿವಸ ನಡೆದಂತಹ ದುರ್ಘಟನೆ; ರಾಜ್ಯದ ಜನರಲ್ಲ, ರಾಷ್ಟ್ರದ ಜನರು ತಲೆಯನ್ನು ತಗ್ಗಿಸುವಂತಹದ್ದಾದರೂ ಕೂಡ, ಇದನ್ನು ಗಂಭೀರವಾಗಿ ತೆಗೆದುಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಎಲ್ಲಾ ದೈನಂದಿನ ಚಟುವಟಿಕೆಗಳನ್ನು ಬಿಟ್ಟು ಇದಕ್ಕೆ ಒತ್ತು ಕೊಟ್ಟಿರುವುದು ಸರಿಯಾಗಿದೆ.

ಆದರೆ ಏನೇನು ಆಗಿದೆ, ಎಷ್ಟೆಷ್ಟು ಆಗಿದೆ ಎಂಬುದರ ಬಗ್ಗೆ ಹೆಚ್ಚಿನ ಗಂಭೀರವಾದ ಚರ್ಚೆಯನ್ನು ಮಾಡುವುದಗ ಮುಖೇನ ಇದು ಮುಂದೆ ಆಗದಹಾಗೆ ಪರಿಸ್ಥಿತಿಯನ್ನು ತರಬೇಕಾಗಿದೆ. Tata Instituteನಲ್ಲಿ ಅವೊತ್ತು ನಡೆದಂತಹ ಘಟನೆ. ಡಾ:ರಾಜ್‌ಕುಮಾರ್‌ರವರ ಅಂತ್ಯ ಸಂಸ್ಕಾರದಲ್ಲಿ ನಡೆದಂತಹ ಘಟನೆ, ಇನ್ನಿತರ ಘಟನಾವಳಿಗಳನ್ನು ನಾವು ನೋಡಿದಾಗ ಡಾ: ರಾಜ್‌ಕುಮಾರ್‌ರವರ ಘಟನೆ, ಅದು ಉದ್ವೇಗದಿಂದ ಆಗಿರುವಂತಹದ್ದು ಆಗಿದೆ. ಆದರೆ Tata Instituteನಲ್ಲಿ ಆಗಿರುವಂತಹ ಘಟನೆ, ಈ ನಕ್ಸಲರ ವ್ಯವಸ್ಥೆಯಲ್ಲಿ ಇದೇ ರೀತಿಯಾದಂತಹ ಒಂದು ಸಂಶಯಾಸ್ಪದ ವ್ಯವಸ್ಥೆಯಾಗಿತ್ತು. ಡಾ: ರಾಜ್‌ಕುಮಾರ್‌ರವರ ಘಟನೆಯಲ್ಲಿ ಈ ರಾಷ್ಟ್ರಕ್ಕೆ ಒಬ್ಬ ಕಣ್ಮಣಿ, ಈ ರಾಜ್ಯಕ್ಕೆ ಇದ್ದವರು ಎನ್ನುವ ಒಮದು ದುಗುಡದಲ್ಲಿ ಆಯಿತೇ ವಿನಾ ಇವೊತ್ತು Tata Institute ಆಗಿರುವಂತಹ ಘಟನೆ, ತದನಂತರ 25ನೇ ತಾರೀಖಿನ ದಿವಸ ಆಗಿರುವಂತಹ ಘಟನೆ ಇವೆರಡೂ ಕೂಡ ಪೂರ್ವ ಯೋಜಿತವಾಗಿರುವಂತಹ ಘಟನೆ ಎಂದು ನನ್ನ ಭಾವನೆಯಾಗಿದೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದು ಇಷ್ಟೇ, ಬೆಂಗಳೂರು ನಗರ I.T., B.T. City ಆಗಿದೆ. ಈ I.T., B.T. City ಯಲ್ಲಿರುವಂತಹ ಸುಮಾರು 3 ಲಕ್ಷ ಉದ್ಯೋಗಿಗಳು ಇವೊತ್ತು ತಾಂತ್ರಿಕವಾಗಿ I.T., B.T. ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಜವಾಬ್ದಾರಿಗಿಂತ ಹೆಚ್ಚಾಗಿ ಯಾವ ರೀತಿಯಾಗಿ ನಾವು ಇದನ್ನು ಭೇದಿಸಬೇಕಾಗುತ್ತದೆ. ಬೆಂಗಳೂರು ನಗರದ ಜನರ ಜೀವನದ ಜೊತೆಯಲ್ಲಿ ಬಡವರು ಮತ್ತು ಸಾಮಾನ್ಯರಿಗೆ ಇದರಿಂದ ಅನಾಹುತವಾಗುತ್ತದೆ. ಬಾಂಬ್ ಆಯಿತು, ಇದರಿಂದ ಸತ್ತಂತಹವರು ಕೂಲಿಕಾರರು, ಏಟಾಗಿರುವಂತಹವರು ಕೂಲಿಕಾರರು, ಸಾಮಾನ್ಯರು, ಬಸ್‌ಸ್ಟ್ಯಾಂಡ್‌ಗಳಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುವಂತಹವರು ಬಡವರು ಮತ್ತು ಕಡುಬಡವರು ಮಾತ್ರವೇ ವಿನಾ ಮಧ್ಯಮ ವರ್ಗದವರು ಕೂಡ ಇವೊತ್ತು ಎಲ್ಲೊ ಒಂದು ಕಡೆಯಲ್ಲಿ ವಾಹನಗಳಲ್ಲಿ ಹೋಗುವಂತಹ ಸಂದರ್ಭ ಇದೆ. ಇವೊತ್ತು ಸತ್ತಿರುವಂತಹವರ ಕುಟುಂಬದವರ ಜೀವನಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು 1 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಯನ್ನು ಮಾಡುತ್ತೇನೆ. ಇದನ್ನು ದಯಮಾಡಿ ಈಗಾಗಲೇ ಗುಜರಾತ್ ಸರ್ಕಾರದವರು ಯಾವ ರೀತಿಯಾಗಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಆ ರೀತಿಯಾಗಿ 5 ಲಕ್ಷ ರೂಪಾಯಿಗಳನ್ನು ಸತ್ತವರ ಕುಟುಂಬದವರಿಗೆ

ನೀಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇವೊತ್ತು 7 ಕಡೆಯಲ್ಲಿ ಬಾಂಬ್ ಬ್ಲಾಸ್ಟ್ ಆಗಿದೆ. ಕರ್ನಾಟಕದಲ್ಲಿ ಬೆಂಗಳೂರು ನಗರಕ್ಕೆ ಒಂದು ಇತಿಹಾಸವಿದೆ. ರಾಷ್ಟ್ರದ ಯಾವುದೇ ಭಾಗದಲ್ಲಿ ನಡೆಯತಕ್ಕಂತಹ ಇಂತಹ ಹೀನಕೃತ್ಯಗಳನ್ನು ಹಿಡಿಯತಕ್ಕಂತಹ ಶಕ್ತಿ ಬೆಂಗಳೂರು ನಗರ ಮತ್ತು ಕರ್ನಾಟಕ ಪೊಲೀಸರಿಗೆ ಇದೆ. ಇದಾಹರಣೆಗೆ ಹೇಳುವುದಾದರೆ, ಭಾರತದ ಪ್ರಧಾನಮಂತ್ರಿಗಳಾಗಿದ್ದ ಶ್ರೀ ರಾಜೀವ್ ಗಾಂಧಿಯವರ assasination ಆದ ಮೇಲೆ ಶಿವರಸನ್‌ನನ್ನು ಕೂಡ ಪತ್ತೆ ಹಚ್ಚುವಂತಹ ಕೆಲಸವನ್ನು ಮಾಡಿದ್ದಾರೆ. ಅವೊತ್ತಿನ ದುರ್ಘಟನೆಗೆ ಯಾರು ಕಾರಣರಾಗಿದ್ದರೋ, ಅದು ಆದ ಮೇಲೆ ಆಗಿರುವಂತಹ ಅನೇಕ ಘಟನೆಗಳು, ತದನಂತರ ನಡೆದಂತಹ stamp ಒಂದು ಹಗರಣ, ಬೇರೆ ಬೇರೆ ಹಗರಣಗಳಲ್ಲಿ ಬೆಂಗಳೂರು ನಗರ ಪೊಲೀಸರು ಅಪರಾಧಿಗಳನ್ನು ಪತ್ತೆ ಹಚ್ಚಿದ್ದಾರೆ. ಬೆಂಗಳೂರು ನಗರ ವಿಶೇಷವಾಗಿ ಇನ್ನೂ ಕೂಡ ತನ್ನ ಸಂಸ್ಕೃತಿಯ ಪ್ರತೀಕವಾದ ನಗರವಾಗಿದೆ. ಈ ನಗರದಲ್ಲಿ ಮಾಡುವಂತಹ ದುಷ್ಟಕೃತ್ಯಗಳಿಗೆ ಯಾರು ತಿಳಿಗೇಡಿಗಳು ಇದ್ದಾರೆ, ಈ ತಿಳಿಗೇಡಿಗಳನ್ನು ಬಗ್ಗು ಬಡೆಯುವಂತಹ ಕೆಲಸವನ್ನು ಮಾಡುವಂತಹುದಕ್ಕೆ ಕರ್ನಾಟಕ ಸರ್ಕಾರ ಮುಂಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣರವರು ಒಂದು ಮಾತನ್ನು ಹೇಳಿದರು. ಜಾತಿ ಎಂದು ಹೇಳಿದರು, ಇಲ್ಲಿ ಯಾವ ಜಾತಿಯೂ ಇಲ್ಲ, ಜಾತಿ, ಗೀತಿಗಿಂತ ಹೆಚ್ಚಾಗಿರುವಂತಹದ್ದು ಈ ರಾಜ್ಯದ ಸಂವಿಧಾನವಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ.....

ಶ್ರೀ ವಿ. ಸೋಮಣ್ಣ:- ನಾನು ಮಾತನಾಡುವುದನ್ನು ಹೇಳುತ್ತೇನೆ. ನೀವು ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ. ತಾವು ಒಂದು ನಿಮಿಷ yield ಆಗಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ದಯಮಾಡಿ yield ಆಗಿ ಎಂದು ಹೇಳಿ ಹೇಗೆ ನನ್ನ ಹೆಸರನ್ನು ಎತ್ತಿದ್ದಾರೆ? ನಾನು ಯಾವುದೋ ಒಂದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರುವುದಿಲ್ಲ. ನಾನು ಇನ್ನೊಂದು ಮಾತನ್ನು ಸಹ ಸೇರಿಸಿದ್ದೇನೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತಹ ವ್ಯಾಧಿಯಾಗಿದೆ. ಜಾತಿ ಮತ್ತು influence, ದಕ್ಷ ಅಧಿಕಾರಿಗಳನ್ನು ಹೊಗಿಡುವಂತಹದ್ದು, influence ಇರುವಂತಹವರನ್ನು ಒಳಗಡೆ ತರುವುದನ್ನು ಬಿಡಬೇಕೆಂಬ

ವಿಚಾರವನ್ನು ಹೇಳಿದೆಯೇ ವಿನಾ ನಾನು ಯಾರನ್ನೂ ಉದ್ದೇಶಿಸಿ ಈ ಮಾತನ್ನು ಹೇಳಿಲ್ಲವೆಂದು ಸೋಮಣ್ಣನವರಿಗೆ ಹೇಳುವುದಕ್ಕೆ ಇಚ್ಛೇಪಡುತ್ತೇನೆ.

12–30 ಪಿ.ಎಂ.

ಶ್ರೀ ವಿ. ಸೋಮಣ್ಣ:– ನಾನು ಕೂಡ ಅದನ್ನೇ ಹೇಳುತ್ತಿರುವುದು. ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳೇ ವಿನಾ ಯಾವುದೋ ಒಂದು ಜಾತಿಯ ಮುಖ್ಯಮಂತ್ರಿ ಅಲ್ಲ. ಅವರು ಯಾವುದೋ ಒಂದು ಜಾತಿಯ ಮುಖ್ಯಮಂತ್ರಿಗಳಾಗುತ್ತಾರೆಂದರೆ, ಅದನ್ನು ನಾವ್ಯಾರು ಒಪ್ಪಲು ತಯಾರಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಅವರು ಹೇಳಿದ್ದನ್ನು ನಾನು ಉಲ್ಲೇಖಿಸಿದೆ. ಎಲ್ಲಿಯೋ ಒಂದು ಕಡೆ ಎಲ್ಲ ಜಾತಿಗಳಲ್ಲೂ, ವರ್ಗಗಳಲ್ಲೂ ಕೂಡ ದಕ್ಷ ಅಧಿಕಾರಿಗಳಿದ್ದಾರೆ. ಇಂತಹ ಘಟನೆಗಳು ಎಲ್ಲಿಯೋ ಒಂದು ಕಡೆ ಪೂರ್ವಯೋಜಿತವಾಗಿದೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಕಾಕತಾಳೀಯವಾಗಿ ನಡೆದುಕೊಂಡು ಬಂದಿರುವುದಾಗಿದೆ. ಇದು ಮುಂದೆ ಆಗಬಾರದು ಎನ್ನುವುದಾದರೆ, ಇಂತಹ ಘಟನೆಗಳಿಗೆ ಇತಿಶ್ರೀ ಹಾಡಬೇಕಾಗುತ್ತದೆ. ಇತಿಶ್ರೀ ಹಾಡುವಾಗ ಕೇವಲ ಒಬ್ಬ ಅಧಿಕಾರಿಯನ್ನು, ಮತ್ತೊಬ್ಬ ಅಧಿಕಾರಿಯನ್ನು ಗಮನದಲ್ಲಿಟ್ಟುಕೊಂಡಿರತಕ್ಕಂಥಾದ್ದಲ್ಲ. ಈ ರಾಜ್ಯದ ಏಕತೆ ಮತ್ತು ಸಮಗ್ರತೆಯಲ್ಲಿ ರಾಷ್ಟ್ರದ ಮುಂಚೂಣಿಯಲ್ಲಿರುವ ಪ್ರಧಾನಿಗಳು ಏನು ಹೇಳಿದರು ? ಈ ಘಟನೆ ನಡೆದ ದಿನಾಂಕ ಸನ್ಮಾನ್ಯ ಮನಮೋಹನ್‌ಸಿಂಗ್‌ರವರು ರಾಜ್ಯ ಸರ್ಕಾರವನ್ನು ಸಂಪರ್ಕಿಸುತ್ತಾರೆ. ಕೇಂದ್ರದ ಗೃಹ ಸಚಿವರು ರಾಜ್ಯ ಸರ್ಕಾರವನ್ನು ಸಂಪರ್ಕಿಸುತ್ತಾರೆ, ನಮ್ಮ ನಾಯಕಿಯಾದ ಶ್ರೀಮತಿ ಸೋನಿಯಾಗಾಂಧಿಯವರು ನಮ್ಮ ನಾಯಕರ ಹತ್ತಿರ ಮಾತನಾಡುತ್ತಾರೆ. ಆದುದರಿಂದ, ನಮಗೆ ಈ ರಾಷ್ಟ್ರ ಮುಖ್ಯ ವಿನಹ ಈ ರಾಷ್ಟ್ರದಲ್ಲಿರುವ ಯಾವುದೋ ಒಂದು ಜಾತಿ, ವರ್ಗ, ಪಂಗಡಗಳು ಮುಖ್ಯವಲ್ಲ ಎಂಬುದನ್ನು ಮೊದಲು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಬೆಂಗಳೂರು ನಗರ ಇವೊತ್ತು ಕೇವಲ ಒಂದು ಜಾತಿ, ಒಂದು ಭಾಷೆಗೆ ಸೀಮಿತವಾಗಿಲ್ಲ. ಬೆಂಗಳೂರು ವಿಶ್ವದ ಜನರ ಮನಸ್ಸನ್ನು ಗೆದ್ದಿರುವ ನಗರವಾಗಿದೆ. ನಾನು ಕೂಡ ಬೆಂಗಳೂರು ನಗರವನ್ನು ಸುಮಾರು 25 ವರ್ಷಗಳಿಂದ ಪ್ರತಿನಿಧಿಸುತ್ತಿದ್ದೇನೆ. ನಾಲ್ಕು ಬಾರಿ ಶಾಸಕನಾಗಿದ್ದೇನೆ, ಎರಡು ಬಾರಿ ನಗರಪಾಲಿಕೆ ಸದಸ್ಯನಾಗಿದ್ದೇನೆ. ನನ್ನಂತಹ ಅನೇಕ ಮುತ್ಸದ್ಧಿಗಳು ಇಲ್ಲಿದ್ದಾರೆ. ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ,

ಎಲ್ಲಿಯೋ ಒಂದು ಕಡೆ ಪೊಲೀಸರ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಿದರು. 10–15 ವರ್ಷಗಳಿಂದ ಇದ್ದಂತಹ 20 ಲಕ್ಷ ಜನಸಂಖ್ಯೆಗೆ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ವ್ಯವಸ್ಥೆ ಏನಿತ್ತೋ, ಇವೊತ್ತು 75 ಲಕ್ಷದಷ್ಟು ಜನಸಂಖ್ಯೆ ಇದ್ದರೂ ಅಷ್ಟೇ ಇದೆ. ಸುಮಾರು 25 ವರ್ಷಗಳಿಂದಲೂ ಎಷ್ಟು ಪೊಲೀಸ್ ಸ್ಟೇಷನ್‌ಗಳಿದ್ದವೋ, ಈಗಲೂ ಅಷ್ಟೇ ಇವೆ. ಸನ್ಮಾನ್ಯ ರೋಷನ್‌ಬೇಗ್ ಗೃಹ ಸಚಿವರಾಗಿದ್ದರು. ಅವರು ಅನೇಕ ಯೋಜನೆಗಳನ್ನು ತಂದರು. ಆದರೆ ಯಾವುದು ಕೂಡ ಕಾರ್ಯರೂಪಕ್ಕೆ ಬರಲಿಲ್ಲ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗೃಹ ಸಚಿವರಾಗಿದ್ದರು. ನಮ್ಮ ಉದ್ದೇಶ ಇಷ್ಟೇ, ಈ ರಾಜ್ಯದಲ್ಲಿರುವ ಸಾಮಾನ್ಯನಿಗೆ, ಬಡವನಿಗೆ ಧ್ವನಿ ಇಲ್ಲದವನಿಗೆ ಇಂತಹ ಘಟನೆಗಳಿಂದ ಸಾವನ್ನಪ್ಪಿದರೆ ನಾವು ಎರಡು ದಿನಗಳ ಕಾಲ ಮೌನ ಆಚರಣೆ ಮಾಡುತ್ತೇವೆ. ತದನಂತರ, ನಾವು ಎಷ್ಟು ಜನರು ಅವರುಗಳ ಮನೆಗೆ ಹೋಗಿ, ಅವರ ಕುಟುಂಬಗಳಿಗೆ ಸಹಕಾರ ಮಾಡುವ ಸ್ಥಿತಿಯಲ್ಲಿದ್ದೇವೆ ?

ಆದುದರಿಂದ, ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೆ, ನಮ್ಮ ನಮ್ಮ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮರೆತು ರಾಜ್ಯದ ಹಿತದೃಷ್ಟಿಯಿಂದ ಬೆಂಗಳೂರು ನಗರದಲ್ಲಿ ಇಂತಹ ಘಟನಾವಳಿ ಮತ್ತೊಮ್ಮೆ ಆಗಬಾರದು ಎಂದರೆ, ತಾಂತ್ರಿಕ ವ್ಯವಸ್ಥೆಗೆ, ತಾಂತ್ರಿಕ ತಜ್ಞರಿಗೆ ನುರಿತ ತರಬೇತಿ ಹೊಂದಿರುವವರಿಗೆ ಅವಕಾಶ ಕಲ್ಪಿಸಬೇಕಾಗುತ್ತದೆ. ನಮ್ಮಲ್ಲಿ ಈ ತರಹದ ವ್ಯವಸ್ಥೆಗಳಿಲ್ಲ. ಇದಾಗಿ 8, 10, 20 ದಿವಸಗಳಾದ ನಂತರ ಚರ್ಚೆಯಾಗುತ್ತದೆ, ಪತ್ರಿಕೆಗಳಲ್ಲಿ ಬರುತ್ತದೆ. ಬಂದ ನಂತರ ಹೋದ ಪುಟ್ಟ ಬಂದ ಪುಟ್ಟ ಎಂಬಂತಹ ಮತ್ತೆ ಇದೇ ತರಹದ ವ್ಯವಸ್ಥೆಯಾಗುತ್ತಿದೆ.

ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಜನನಿಬಿಡ ಪ್ರದೇಶಗಳಲ್ಲಿ ಸಾವಿರಾರು, ಲಕ್ಷಾಂತರ ಜನರು ಓಡಾಡುತ್ತಾರೆ. ರಾತ್ರಿ 10–11–12–1–2 ಗಂಟೆಯಾದರೂ ಸಿಟಿ ಮಾರುಕಟ್ಟೆ, ಶಿವಾಜಿನಗರಗಳಂತಹ ಪ್ರದೇಶಗಳಲ್ಲಿ ಯಾರು ಬರುತ್ತಾರೆ, ಯಾರು ಹೋಗುತ್ತಾರೆಂದು ಯಾರೂ ಗಮನಿಸುವುದಿಲ್ಲ. ನಮ್ಮಲ್ಲಿರುವವರು ಎಷ್ಟು ಜನ ಸ್ವಾಮಿ ? ಪೊಲೀಸ್ ಇಲಾಖೆಯಲ್ಲಿ ಏನಿದೆ ? ಸರಿಯಾದ ನಾಲ್ಕು ಗನ್‌ಗಳಿಲ್ಲ. ಒಂದು ಹಾಕಿಕೊಳ್ಳಬೇಕು, ಹೊಡೆಯಬೇಕು. ಮತ್ತೆ ಇನ್ನೊಂದು ಹಾಕಬೇಕು, ನಮ್ಮಲ್ಲಿ ಯಾವುದೇ ವ್ಯವಸ್ಥೆಗಳಿಲ್ಲ. ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ರಾತ್ರಿ ವೇಳೆಯಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ 20 ಕಿಲೋಮೀಟರ್‌ಗಳಷ್ಟು ದೂರ ನಡೆದುಕೊಂಡು ಹೋದರೂ

ಆಗುವುದಿಲ್ಲ. ಅಷ್ಟೊಂದು ಬೀಟ್ ಹಾಕುತ್ತಾರೆ? ಆತ ಹೇಗೆ ಕರ್ತವ್ಯ ನಿರ್ವಹಿಸುವುದಕ್ಕಾಗುತ್ತದೆ? ನಾವು ಎಲ್ಲಿಯೋ ಒಂದು ಕಡೆ ಅವರಲ್ಲಿರುವ ಶಕ್ತಿಯನ್ನು ಇಮ್ಮಡಿ, ಮುಮ್ಮಡಿಗೊಳಿಸದೆ ಹೋದರೆ, ಅವರಿಂದಲೇ ಎಲ್ಲವನ್ನೂ ನಿರೀಕ್ಷಿಸುವುದು, ನನಗನಿಸುತ್ತದೆ, ಇದು ಕಷ್ಟ ಸಾಧ್ಯವಾದ ಕೆಲಸ. ಈ ಘಟನೆ ಏನು ನಡೆದಿದೆ, ದಯಮಾಡಿ ಇಂತಹ ಘಟನೆಗೆ ಎಲ್ಲಿಯೋ ಒಂದು ಕಡೆ ಲೇಪ ಹಚ್ಚುವುದಾಗಲಿ, ಬಣ್ಣ ಬಳಿಯುವುದಾಗಲಿ ಬೇರೆ ಬೇರೆ ವ್ಯವಸ್ಥೆಗಳನ್ನು ತರತಕ್ಕಂಥದ್ದಾಗಲಿ, ಇದು ಯಾರಿಂದ ಆಗಿದೆ ಎನ್ನುವುದಕ್ಕಿಂತಲೂ ಇವೆಲ್ಲವನ್ನು ಮರೆತು, ರಾಜ್ಯದ ಹಿತದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕು. ನಗರದ ಜನರೇನಿದ್ದಾರೆ, ಅವರು ಭಯಭೀತರಾಗಿದ್ದಾರೆ.

ನಿನ್ನೆ ಭಾನುವಾರ ನಾನು ಸಿಟಿ ಸುತ್ತಾಡಿದಾಗ ನನಗನಿಸಿತು, ಯಾವುದೇ ರಸ್ತೆಗಳಲ್ಲಿ ವಾಹನಗಳ ಜಂಜಡವಿಲ್ಲ, ವಾಯು ಮಾಲಿನ್ಯವಿಲ್ಲ, ಜನರಿಗೆ ಏನಾಗಿದೆ ? ಶಾಪ್, ಮಾಲ್‌ಗಳಿಗೆ ಯಾವ ಜನರೂ ಹೋಗಲಾರರು. ನಾವು ಬದುಕಬೇಕು, ಬಾಳಬೇಕೆಂದು ಜನರಿಗೂ ಕೂಡ ಆಸೆ ಇದೆ, ಮುಂದೆ ನಮ್ಮ ಭವಿಷ್ಯ ಏನಾಗಬಹುದೆಂಬ ದುಗುಡವಿರುತ್ತದೆ. ಅದಕ್ಕೋಸ್ಕರ, ಸರ್ಕಾರ ಅವರಿಗೆ ಯಾವ್ಯಾವ ರೀತಿಯ ಬಜೆಟ್ ಕೊಟ್ಟಿದೆಯೋ ಗೊತ್ತಿಲ್ಲ. ಇವೊತ್ತು ಈ ಇಲಾಖೆಯನ್ನು ಏನಾದರೂ ಮಾಡಿ ಬಲಪಡಿಸಬೇಕು. ಇಂತಹ ದಮನಕಾರಿ ಶಕ್ತಿಗಳನ್ನು ಬಗ್ಗು ಬಡಿಯಬೇಕೆಂದರೆ, ದಕ್ಷತೆಗೆ, ಪ್ರಾಮಾಣಿಕತೆಗೆ ಹೆಸರಾಗಿರುವ ಬಹುತೇಕ ಅಧಿಕಾರಿಗಳು ಇವೊತ್ತೂ ಇದ್ದಾರೆ, ನಾಳೆಯೂ ಇರುತ್ತಾರೆ, ನಾಡಿದ್ದೂ ಇರುತ್ತಾರೆ, ಅಂತಹ ಅಧಿಕಾರಿಗಳಿಗೆ ಬೇಕಾಗಿರುವ ಕೆಲಸ ಮಾಡತಕ್ಕಂಥ ವ್ಯವಸ್ಥೆ ಏನಿದೆ, ಅದನ್ನು ಬಲಪಡಿಸಬೇಕಾಗುತ್ತದೆ. ನಾವು employment ಮಾಡಬೇಕಾಗುತ್ತದೆ. ಬೇರೆ ರಾಷ್ಟ್ರಗಳಲ್ಲಿ ಏನು ವ್ಯವಸ್ಥೆ ಇದೆ, ಆ ವ್ಯವಸ್ಥೆಗೆ ನಾವೂ ಕೂಡ ನಮ್ಮ ತಂತ್ರಜ್ಞಾನವನ್ನು ಕೊಂಡೊಯ್ಯತಕ್ಕಂಥ ಕೆಲಸ ಮಾಡಬೇಕಾಗುತ್ತದೆ. ಇವೆಲ್ಲವನ್ನೂ ಮಾಡಿದಾಗ ಇಂಥಾದ್ದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೇ ವಿನಾ ಇದರೊಳಗೆ ಎಲ್ಲವನ್ನೂ ಸರಿಪಡಿಸುತ್ತೇವೆ, ಎಲ್ಲವನ್ನೂ ಮಾಡಬೇಕೆಂದರೆ, ಅದು ಆಗದ ಕೆಲಸವೆಂದು ಹೇಳುತ್ತೇನೆ.

25ನೇ ತಾರೀಖಿನಂದು ನನ್ನ ಕ್ಷೇತ್ರದಲ್ಲಿ ಯಾರಿಗೂ ಏನೂ ಆಗಿಲ್ಲ. 4–5 ಚಪ್ಪಡಿಗಳು ಒಡೆದು ಹೋದವು. ಒಡೆದ ತಕ್ಷಣ ಪುಡಿಪುಡಿಯಾಗಿವೆ. ಇದು ಯಾವ ರೀತಿಯಾಯಿತು, ಏನಾಯಿತು ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡುವಾಗ ಮುಂದೆ ಏನು ಆಗಬೇಕೆಂಬ ದೂರದೃಷ್ಟಿಯುಳ್ಳವರಾಗಿ ಇಂತಹ ಘಟನಾವಳಿ ಮರುಕಳಿಸದಂತೆ ಸರ್ಕಾರ ಕ್ರಮ

ಕೈಗೊಳ್ಳಬೇಕು. ಅವರು ತೆಗೆದುಕೊಳ್ಳುವ ಎಲ್ಲ ಕ್ರಮಗಳಿಗೆ ಈ ರಾಜ್ಯದ ಹಿತದೃಷ್ಟಿಯಿಂದ ಅವರು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಮಾನ್ಯ ಜನರ ನೋವು, ಶಾಂತಿ ನೆಮ್ಮದಿಗೆ ಭಂಗ ಬಾರದಂತೆ ಮಾಡುವ ಎಲ್ಲ ಕ್ರಮಗಳಿಗೂ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆನ್ನುವ ಮಾತನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ) :– ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ 25ನೇ ತಾರೀಖಿನಂದು ಏನು ಬಾಂಬ್ ಸ್ಫೋಟ ಘಟನೆ ನಡೆದಿದೆ, ಮೊದಲನೆಯದಾಗಿ ಘಟನೆಯನ್ನು ಖಂಡಿಸುತ್ತೇನೆ. ಇಡೀ ರಾಷ್ಟ್ರದಲ್ಲೇ ಶಾಂತಿಗೆ ಭಂಗ ಇಲ್ಲದಿರುವ ಯಾವುದಾದರೂ ಜಾಗ ಇದ್ದರೆ ಅದು ಬೆಂಗಳೂರು ನಗರ ಮಾತ್ರ ಎಂಬ ಹೆಗ್ಗಳಿಕೆ ಹೊಂದಿತ್ತು. ಆದರೆ, ಇವೊತ್ತು ಒಂದೇ ದಿವಸ 9 ಕಡೆಗಳಲ್ಲಿ 40 ನಿಮಿಷಗಳಲ್ಲಿ ಇಂತಹ ಘಟನೆ ನಡೆದಿರುವುದು ಖಂಡನೀಯವೆಂದು ಹೇಳಬೇಕಾಗುತ್ತದೆ. ಮಾನ್ಯ ಸೋಮಣ್ಣನವರು ಮಾತನಾಡಿದ್ದಾರೆ. ಇವೊತ್ತು ಗುಜರಾತ್‌ನಲ್ಲಿ ಘಟನೆ ಸಂಭವಿಸಿ ಸಂತ್ರಸ್ತರ ಕುಟುಂಬಕ್ಕೆ 5 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ. ಇಲ್ಲಿ 1 ಲಕ್ಷ ಮಾತ್ರ ಪರಿಹಾರ ಕೊಟ್ಟಿದ್ದಾರೆ ಎನ್ನುವುದನ್ನು ಸಹ ಹೇಳಿದ್ದಾರೆ. ನಾವು ಸರ್ಕಾರವನ್ನು ಟೀಕೆ ಮಾಡಿದರೆ ನಾಳೆ ದಿವಸ ಅದರ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಏಕೆಂದರೆ, ಈಗ ಸೋಮಣ್ಣನವರು ಮತ್ತು ಬಾಲಕೃಷ್ಣರವರ ನಡುವೆ ಮಾತಿನ ಚಕಮಕಿ ಪ್ರಾರಂಭವಾಯಿತು.

ಇವೊತ್ತು ನಾವು ಬೆಂಗಳೂರು ನಗರದ ನಾಗರಿಕರ ರಕ್ಷಣೆ ಮುಖ್ಯವೇ ಹೊರತು ಜಾತಿ ಮುಖ್ಯವಲ್ಲ ಎನ್ನುವುದನ್ನು ಅರಿಯಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವು ಪತ್ರಿಕೆಗಳಲ್ಲಿ ಒಂದೊಂದು ರೀತಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಒಂದು ಪತ್ರಿಕೆಯಲ್ಲಿ "ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪಿತೂರಿ" ಎಂದೂ, ಎರಡನೆ ಪತ್ರಿಕೆಯಲ್ಲಿ "ವ್ಯವಸ್ಥಿತ ಪಿತೂರಿ – ಮುಖ್ಯಮಂತ್ರಿಗಳ ಶಂಕೆ" ಎಂದು ಬಂದಿದೆ. ಒಳ್ಳೆಯ ಕೆಲಸ ಮಾಡುವಂತಹ ಸನ್ನಿವೇಶದಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂದು ಕೆಲವು ಶಕ್ತಿಗಳು ವ್ಯವಸ್ಥಿತವಾಗಿ ಪಿತೂರಿ ಮಾಡುತ್ತಿವೆ ಎನ್ನುವ ಭಾವನೆಯನ್ನು ಈ ರಾಜ್ಯದ ಜನತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೂಡಿಸುತ್ತಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಸರ್ಕಾರದ ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಕಮೀಷನರ್ ಬಗ್ಗೆ ನಾನು ಚಕಾರವೆತ್ತುವುದಿಲ್ಲ. ಅವರು ಪ್ರಾಮಾಣಿಕರಾದ ಒಬ್ಬ ನಿಷ್ಠಾವಂತ ಅಧಿಕಾರಿಗಳು ಎನ್ನುವುದನ್ನು

ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರ ವೈಫಲ್ಯತೆಯೇ ಈ ಘಟನೆ ಜರುಗಲು ಕಾರಣವಾಗಿದೆ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಆದರೆ, ಇಂತಹ ಘಟನೆಗಳು ನಡೆದಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿಕೆ ಕೊಡುವುದು ಸೂಕ್ತವಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಯಾವುದೋ ಬೇರೆ ಪಕ್ಷಗಳ ಮೇಲೆ "ಇದು ವ್ಯವಸ್ಥಿತವಾದ ಪಿತೂರಿ" ಎಂದರೆ ಯಾರೋ ರಾಜಕೀಯ ಪಕ್ಷಗಳು ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂಬ ನಿಟ್ಟಿನಲ್ಲಿ ಮಾಡುತ್ತಿದ್ದಾರೆ ಎಂಬ ಭಾವನೆಯನ್ನು ರಾಜ್ಯದ ಜನತೆಯಲ್ಲಿ ಮೂಡಿಸುತ್ತಿದ್ದಾರೆ ಎನ್ನುವುದನ್ನು ಈ ಸದನದ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಇವೊತ್ತು ಇಂತಹ ಸನ್ನಿವೇಶದಲ್ಲಿ ಎಲ್ಲ ಪಕ್ಷಗಳ ಮುಖಂಡರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಇಂತಹ ಹೇಳಿಕೆಯಿಂದ ನೀವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇವೊತ್ತಿನದಿವಸ್ ಬೆಂಗಳೂರಿನಲ್ಲಿ 75 ಲಕ್ಷದಷ್ಟು ಜನಸಂಖ್ಯೆ ಇದ್ದಾಗ ಪೊಲೀಸ್ ಇಲಾಖೆಯಲ್ಲಿ ಎಷ್ಟು ಸಿಬ್ಬಂದಿ ಇರಬೇಕೆಂಬುದನ್ನು ನಾವು ಗುರ್ತಿಸಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಸುಮಾರು 25 ವರ್ಷಗಳಿಂದ ನೆಲೆಯೂರಿರುವ ಪೊಲೀಸ್ ಅಧಿಕಾರಿಗಳಿದ್ದಾರೆ. ಇದರ ಬಗ್ಗೆ ಯಾರೂ ಚಕಾರವೆತ್ತುವುದಿಲ್ಲ. ಏಕೆ ಅವರುಗಳು 25 ವರ್ಷಗಳಿಂದ ಇಲ್ಲೆ ಇರಬೇಕು ? ಈ ರಾಜ್ಯದಲ್ಲಿ ಬೇರೆ ಒಳ್ಳೆಯ ಅಧಿಕಾರಿಗಳು ಇಲ್ಲವೆ ? ಬೆಂಗಳೂರಿನಲ್ಲೆ 25–30 ವರ್ಷಗಳಿಂದ ನಮ್ಮಂಥ ರಾಜಕಾರಣಿಗಳ ಸಹಕಾರದಿಂದ ಇದ್ದು ಇಂಥ ಕೃತ್ಯಗಳಿಗೆ ಕಾರಣರಾಗುತ್ತಾರೆಂದು ನನ್ನ ಭಾವನೆಯಾಗಿದೆ. ಏಕೆಂದರೆ, ಇವೊತ್ತು ಈ ಸರ್ಕಾರ ಬರುವುದಕ್ಕೆ ಮೊದಲೇ ಆಶ್ವಾಸನೆಯನ್ನು ಕೊಟ್ಟಿದ್ದರು, ನಮ್ಮ ಸರ್ಕಾರ ಮುಂದೆ ಬಂದರೆ ಬಿ.ಜೆ.ಪಿ.ಯವರು ಗುಜರಾತ್ ಮಾದರಿಯ ಸರ್ಕಾರ ಮಾಡುತ್ತೇವೆಂದು ಹೇಳಿದ್ದರು, ಅದೇ ರೀತಿ ರಾಜ್ಯದ ಜನತೆಗೆ ಏನಾದರು ಗುಜರಾತ್ ಮಾದರಿ ಸರ್ಕಾರ ಮಾಡಬೇಕೆಂಬ ಉದ್ದೇಶವೇನಿದೆ, ಅಲ್ಲಿಯೂ ಕೂಡ ಈ ಘಟನಾವಳಿ ಆಗುತ್ತಿದೆ. ಆ ದಿಕ್ಕಿನಲ್ಲೇ ಮಾಡಿಸಿರಬಹುದು ಎನ್ನುವ ಭಾವನೆ ಇದೆಯೋ ಏನೋ ಗೊತ್ತಿಲ್ಲ. ಯಾರು ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡುವುದಕ್ಕೆ ಬದಲಾಗಿ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ ಎಂದರೆ ಏನು ಅರ್ಥ ? ವ್ಯವಸ್ಥಿತವಾಗಿ ಈ ಕೆಲಸ ಮಾಡುತ್ತಿರುವವರು ಯಾರು ? ಅದನ್ನು ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಒಂದು ಕಡೆ ನಮ್ಮ ಪೊಲೀಸ್

ಕಮಿಷನರ್‌ರವರು ಪತ್ರಿಕಾ ಹೇಳಿಕೆಯನ್ನು ಕೊಡುತ್ತಾರೆ. ಆಯುಕ್ತರು ಅಧಿಕಾರವನ್ನು ವಹಿಸಿಕೊಂಡ ನಂತರ ಬೆಂಗಳೂರಿನಲ್ಲಿ ಪ್ರಕಟಣೆ ಮಾಡಿ ಭಯೋತ್ಪಾದಕರ ನಿಗ್ರಹ ದಳ ಬೇಡ, ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಏಕೆ ? ಎಂದು ಸುದ್ದಿಗಾರರಿಗೆ ಹೇಳಿದ್ದರು. ಅಂದರೆ ನಾವು ಕೇವಲ ಉಗುರಿನಲ್ಲಿ ಅವರನ್ನು ತೆಗೆದುಹಾಕುತ್ತೇವೆ ಎನ್ನತಕ್ಕ ಸನ್ನಿವೇಶ ಇರುವಾಗ ಕೊಡಲಿ ಏಕೆ ಬೇಕು ಎಂದು ಪೊಲೀಸ್ ಕಮಿಷನರ್‌ರವರು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇಷ್ಟೊಂದು ಶಕ್ತಿಯನ್ನು ಇಟ್ಟುಕೊಂಡು ಇಂಥ ಘಟನೆಗೆ ಅವಕಾಶ ಯ್ಯಾವ ರೀತಿಯಾಗಿ ಆಯಿತು ಎಂಬುದು ನನಗೆ ಗೊತ್ತಿಲ್ಲ. ಇವೊತ್ತಿನ ದಿವಸ ಈ ಸರ್ಕಾರ ಉತ್ತಮವಾಗಿ ಕೆಲಸ ಮಾಡುತ್ತಿದೆ, ಅಂಥ ಸನ್ನಿವೇಶದಲ್ಲಿ ಕೆಲವು ಶಕ್ತಿಗಳು ಈ ಸರ್ಕಾರಕ್ಕೆ ಭಯವನ್ನು ಹುಟ್ಟಿಸಬೇಕು ಎನ್ನತಕ್ಕ ದೃಷ್ಟಿಯಿಂದ ಮಾಡಿದ್ದಾರೆ ಎಂಬ ಭಾವನೆಯನ್ನು ಸರ್ಕಾರ ಕೊಡುತ್ತದೆ. ಇವರಿಗೆ ಶಾಂತಿ ಬೇಕಾಗಿಲ್ಲ, ಇದರಲ್ಲೂ ರಾಜಕೀಯ ಮಾಡುವಂಥ ಸನ್ನಿವೇಶಕ್ಕೆ ಹೋಗಿದ್ದಾರೆ. ಈ ರಾಜ್ಯದಲ್ಲಿ ಏನಾಗಿದೆ ಎಂದರೆ......

(ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಇದುವರೆಗೆ ಮಾತನಾಡಿದವರೆಲ್ಲರೂ ಚೆನ್ನಾಗಿ ಮಾತನಾಡಿದ್ದಾರೆ. ರಾಜಕೀಯ ಎಲ್ಲಿ ? ಮಾನ್ಯ ಶಿವಕುಮಾರ್‌ರವರು, ಬಾಲಕೃಷ್ಣರವರು, ಸೋಮಣ್ಣನವರು ಎಲ್ಲರೂ ಚೆನ್ನಾಗಿ ಮಾತನಾಡಿದರು. ಆದರೆ ತಾವು ಇದರಲ್ಲೂ ರಾಜಕೀಯ ಮಾಡುತ್ತೀರಿ ಎಂದು ಹೇಳಿದರೆ ಹೇಗೆ ? ಇದರಲ್ಲಿ ರಾಜಕೀಯ ಎಲ್ಲಿದೆ ಎಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ :- ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಎಲ್ಲರ ಜವಾಬ್ದಾರಿಯೂ ಇದೆ. ಮಲ್ಲಿಕಾರ್ಜುನ ಖರ್ಗೆ ಸಾಹೇಬರು, ರೋಷನ್‌ಬೇಗ್‌ರವರು ಶಿವಕುಮಾರ್‌ರವರು, ಸೋಮಣ್ಣನವರು ಮಾತನಾಡಿದರು. ಅವರುಗಳೆಲ್ಲಾ ತುಂಬಾ ಚೆನ್ನಾಗಿ ಮಾತನಾಡಿ ಒಳ್ಳೆಯ ಸಲಹೆಗಳನ್ನು ನೀಡಿ ಶಾಂತಿ ಸುವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದರು. ಅವರಲ್ಲಿ ಯಾರೂ ಕೂಡ ರಾಜಕೀಯ ಬೆರೆಸಿದ್ದಾರೆಂದು ಹೇಳಲಿಲ್ಲ. ರೇವಣ್ಣನವರು ಅನುಭವಿಗಳು, ಅವರು ಇದರಲ್ಲಿ ರಾಜಕೀಯ ಮಾಡಿದ್ದಾರೆಂದು ಹೇಳಿದರೆ ಹೇಗೆ ?

ಶ್ರೀ ಹೆಚ್.ಡಿ. ರೇವಣ್ಣ :- ನಾನು ಈಲ್ಡ್ ಆಗಿಲ್ಲ.

ಛೇರ್ಮನ್ :– ತಾವು ಅನುಭವಿಗಳಾಗಿದ್ದೀರಿ ಒಳ್ಳೆಯ ಸಲಹೆಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಕೆಲವು ಸಮಯದಲ್ಲಿ ಚೆನ್ನಾಗಿ ಮಾತನಾಡುತ್ತಾರೆ. ಕೆಲವು ಸಂದರ್ಭದಲ್ಲಿ ರಾಜಕೀಯ ತಂದುಬಿಡುತ್ತಾರೆ. ಅದೇ ಬಂದಿರುವ ಸಮಸ್ಯೆ.

ಛೇರ್ಮನ್ :– ತಾವು ಅನುಭವಿಗಳಾಗಿದ್ದೀರಿ ಒಳ್ಳೆಯ ಸಲಹೆಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಮಂತ್ರಿಯವರಿಗೆ ಏಕೆ ಇಷ್ಟೊಂದು ಅನುಮಾನ ಇದೆ ? ಅವರ ಹಿಂದೆ ಏನಾದರೂ ಇವರ ಕೈವಾಡವೂ ಇದೆಯೋ ?

ಶ್ರೀ ಸಿ.ಸಿ. ಪಾಟೀಲ್ :–ಅದು ತನಿಖೆಯಿಂದ ಗೊತ್ತಾಗುತ್ತದೆ. ತನಿಖೆಯಿಂದ ಯಾರ ಕೈವಾಡ ಇದೆಯೆಂಬುದು ಗೊತ್ತಾಗಲೇಬೇಕಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಇಂಥ ಘಟನೆಗಳು ನಡೆದಾಗ ವಿರೋಧ ಪಕ್ಷದ ಸಹಕಾರ ಬೇಕೋ ಬೇಡವೋ ಹೇಳಿ ?

ಛೇರ್ಮನ್ :– ಅದನ್ನೇ ಅವರು ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಬೇಕಾಗಿಲ್ಲ ಎಂದರೆ ಬೇಡ ಬಿಡಿ. ನಮ್ಮದೇನಿಲ್ಲ. ವ್ಯವಸ್ಥಿತ ಎಂದರೆ ಏನು ಅರ್ಥ ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಅವರು ಸರಿಯಾದಂಥ ಸಲಹೆಯನ್ನು ಕೊಡಲಿ. ಅವರ ಸಲಹೆಗಳನ್ನು ಸರ್ಕಾರ ತೆಗೆದುಕೊಳ್ಳಲು ಸಿದ್ಧವಿದೆ. ಆದರೆ ಇದರಲ್ಲಿ ಅವರು ರಾಜಕೀಯ ತರುವುದು ಬೇಡ. ಅವರು ರಾಜಕೀಯ ಮಾಡುವುದು ಬೇಡ.

ಛೇರ್ಮನ್ :– ತಾವು ಅನುಭವಿಗಳಾಗಿದ್ದೀರಿ ಒಳ್ಳೆಯ ಸಲಹೆಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ನಾನು ಪತ್ರಿಕೆಯ ಆಧಾರದ ಮೇಲೆ ಹೇಳುತ್ತಿದ್ದೇನೆ ಹೊರತು ಬೇರೆ ಏನೂ ಇಲ್ಲ. ಮುಖ್ಯಮಂತ್ರಿಯವರ ಹೇಳಿಕೆಯ ಆಧಾರದ ಮೇಲೆ ವ್ಯವಸ್ಥಿತ ಎಂದರೆ ಏನು ? ಗೊಬ್ಬರ ಅಭಾವ ಎಂದರೆ, ಅದಕ್ಕೂ ವ್ಯವಸ್ಥಿತ ಪಿತೂರಿಯನ್ನು ಮಾಡುತ್ತಿದ್ದಾರೆಂದು ಅವರು ಹೇಳುತ್ತಾರೆ. ಇಂಧನಕ್ಕೂ ವ್ಯವಸ್ಥಿತ ಪಿತೂರಿ ಎಂದು ಹೇಳುತ್ತಾರೆ. ವ್ಯವಸ್ಥಿತ ಪಿತೂರಿ ಎಂದರೆ ಇದರಲ್ಲಿ ಯಾರು ಇದ್ದಾರೆ ? ಯಾರು ಹೇಳಿ ?

ಅವರಿಗೆ ಅಳುಕು ಏಕೆ ? ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ. ನಾವು ವಿರೋಧಪಕ್ಷದವರು ಒಂಭತ್ತು ಕಡೆ ತೆಗೆದುಕೊಂಡು ಹೋಗಿ ಬಾಂಬ್ ಹಾಕಿ ಎಂದು ಹೇಳಿದ್ದೇವೆಯೇ ? ರಾಜ್ಯದ ಜನತೆಗೆ ಹೋಗುವ ಮೆಸೇಜ್ ಇದು. ಆ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಗುಜರಾತ್‌ನಲ್ಲೂ ಇದೇ ರೀತಿಯ ಘಟನೆಯಾಗಿದೆ. ಗುಜರಾತ್‌ನ ಮುಖ್ಯಮಂತ್ರಿಯವರೂ ಅಲ್ಲೂ ವ್ಯವಸ್ಥಿತವಾದ ಪಿತೂರಿ ನಡೆದಿದೆಯೆಂದು ಹೇಳಿದ್ದಾರೆಯೇ ? ನೀವು ಎಲ್ಲಾ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆ ಹೊರತು, ಅಂದರೆ ಈ ಪಕ್ಷ ಒಳ್ಳೆಯ ಕೆಲಸ ಮಾಡುತ್ತಿದೆಯೆಂದು ಕಾಂಗ್ರೆಸ್ ಪಕ್ಷದವರು, ಜೆ.ಡಿ.ಎಸ್.ರವರು ಉದ್ದೇಶಪೂರ್ವಕವಾಗಿ........

ಶ್ರೀ ಸಿ.ಸಿ. ಪಾಟೀಲ್ :–ಕಾಂಗ್ರೆಸ್ ಪಕ್ಷದವರು ಮಾತನಾಡುವಾಗ ಈ ರೀತಿಯ ಮಾತುಗಳು ಬರಲಿಲ್ಲ. ಕಾಂಗ್ರೆಸ್‌ನ ಪ್ರಮುಖ ನಾಯಕರ ಬಾಯಿಂದ ಆ ರೀತಿಯ ಮಾತುಗಳು ಬರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ನನಗೆ ಇವರ ಬಗ್ಗೆ ಒಂದು ಅನುಮಾನವಿದೆ. ಏಕೆಂದರೆ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಗೊಬ್ಬರಕ್ಕೆ ಅಭಾವ.....

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಇವರಿಗೆ ಎಲ್ಲರ ಮೇಲೂ ಅನುಮಾನ ಇದೆ. ಅವರ ಒಬ್ಬರ ಮೇಲೆ ಮಾತ್ರ ಅವರಿಗೆ ವಿಶ್ವಾಸ ಇದೆ. ಅದು ಬಿಟ್ಟರೆ ಸದನದಲ್ಲಿರುವ ಉಳಿದ ಎಲ್ಲ ಸದಸ್ಯರುಗಳ ಬಗ್ಗೆ ಸಹ ಅವರಿಗೆ ಅನುಮಾನವಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಅವರನ್ನು ದಯಮಾಡಿ ಕುಳಿತುಕೊಳ್ಳಲು ಹೇಳಿ. ಒಂದು ಅರ್ಧ ಗಂಟೆ ಬೇಕಾದರೆ ಚರ್ಚೆಗೆ ಅವಕಾಶ ಕೊಡಿ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂಬಂತೆ ಇವರಿಗೇಕೆ ಅನುಮಾನ ?

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ರೇವಣ್ಣನವರು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. ಅವರ ಪಕ್ಷದ ಶಾಸಕರ ಮೇಲೂ ಕೂಡ ಅವರಿಗೆ ವಿಶ್ವಾಸವಿಲ್ಲ. ಕುಮಾರಸ್ವಾಮಿಯವರ ಮೇಲೂ ವಿಶ್ವಾಸವಿಲ್ಲ. ಕೇವಲ ಅವರ ಸ್ವಂತಕ್ಕೆ ಅವರಿಗೆ ಅವರ ಮೇಲೆ ಮಾತ್ರ ವಿಶ್ವಾಸವಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಯಾರಿಂದ ವಿಶ್ವಾಸವನ್ನು ತೆಗೆದುಕೊಳ್ಳಬೇಕು ಎಂಬುದನ್ನು ನಾನು ಮಂತ್ರಿಗಳಿಂದ ಕಲಿಯಬೇಕಾಗಿಲ್ಲ. ಅದೆಲ್ಲಾ ನನಗೆ ಗೊತ್ತಿದೆ. ಏಕೆಂದರೆ ನಾನೂ 20 ವರ್ಷ ಈ ರಾಜ್ಯದಲ್ಲಿ ಕೆಲಸ ಮಾಡಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ನಾನೂ 20 ವರ್ಷದ ಅನುಭವ ಪಟ್ಟೇ ಹೇಳುತ್ತಿರುವುದು.

ಶ್ರೀ ಹೆಚ್.ಡಿ. ರೇವಣ್ಣ :– ನಾನೇನು ಹಿಂದಿನ ಬಾಗಿಲಿನಿಂದ ಇಲ್ಲಿಗೆ ಬಂದಿಲ್ಲ. ನನ್ನ ಜೀವನದಲ್ಲಿ ಚುನಾಯಿತ ಸದಸ್ಯನಾಗಿಯೇ ಬಂದಿರುವುದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :– ಇಲ್ಲಿರುವವರು ಯಾರು ಹಿಂಬಾಗಿಲಿನಿಂದ ಬಂದಿದ್ದಾರೆ ? ಯಾರೂ ಬಂದಿಲ್ಲ. ಎಲ್ಲರೂ ಮುಂಬಾಗಿಲಿನಿಂದಲೇ ಬಂದಿರುವುದು.

ಶ್ರೀ ಹೆಚ್.ಡಿ. ರೇವಣ್ಣ :– ನಾನು ನಿಮ್ಮ ಬಗ್ಗೆ ಹೇಳುತ್ತಿಲ್ಲ. ನಿಮಗೆ ಅನುಮಾನ ಎಂದು ಹೇಳಿದಿರಲ್ಲ ಅದಕ್ಕೆ ಹೇಳುತ್ತಿದ್ದೇನೆ. ನಮ್ಮ ಪಕ್ಷದ ಬಗ್ಗೆ ಅನುಮಾನ ಎಂದು ಹೇಳಿದಿರಲ್ಲ, ನನ್ನ ಅಭಿಪ್ರಾಯವನ್ನು ಹೇಳುವಾಗ ಇವರುಗಳೇಕೆ ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತಾರೆ ? ಬೇರೆ ಕಡೆ ಡೈವರ್ಟ್ ಮಾಡಬೇಕು ಎಂದರೆ ಮಾಡೋಣ. ಇವೊತ್ತು ಈ ರಾಜ್ಯದ ಜನತೆಗೆ ಇಂಥ ಸನ್ನಿವೇಶದಲ್ಲಿ ತಪ್ಪು ಅಭಿಪ್ರಾಯ ಹೋಗಬಾರದು ಎಂಬ ಉದ್ದೇಶದಿಂದ ಹೇಳಿದ್ದೇನೆ. Indirect ಆಗೆ ಏನು direct ಆಗಿ ಹೇಳುತ್ತಿದ್ದೇನೆ. ಪತ್ರಿಕೆಗಳಲ್ಲಿ ವ್ಯವಸ್ಥಿತವಾಗಿ ನಡೆದಿದೆಯೆಂದು ಹೇಳಿದರೆ ಅರ್ಥವೇನು ? ಏನೋ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ, ಅದಕ್ಕೆ ವ್ಯವಸ್ಥಿತವಾಗಿ ಪಿತೂರಿ ನಡೆಯುತ್ತಿದೆ ಎಂದರೆ ನಾವೇನೋ ವ್ಯವಸ್ಥಿತ ಪಿತೂರಿ ಮಾಡುತ್ತಿದ್ದೇವೆ ವಿರೋಧ ಪಕ್ಷದವರು, ಬೇರೆ ಪಕ್ಷದವರು ಎಂಬ ಭಾವನೆ ಈ ರಾಜ್ಯದ ಜನತೆಗೆ ಹೋಗಬಾರದು.

ಶ್ರೀ ಸಿದ್ದು ಸವದಿ :– ರಾಜ್ಯದ ರೈತರಿಗೆ ಗೊಬ್ಬರದ ಕೊರತೆಯಾದಾಗ ಸರ್ವ ಪಕ್ಷದ ಸಭೆ ದೆಹಲಿಗೆ ಹೋಗಲು ಇವರನ್ನು ಕರೆದಾಗ ಇವರು ಬರಲಿಲ್ಲ. ಇದನ್ನು ವ್ಯವಸ್ಥಿತ ಪಿತೂರಿ ಎಂದು ಕರೆಯಬೇಕೋ ಅಥವಾ ಬೇರೆ ಏನೆಂದು ಕರೆಯಬೇಕು ? ವಿದ್ಯುತ್‌ನ ಸಬ್ಸಿಡಿಯ ಬಗ್ಗೆ ಕೇಳಲು ನೀವು ತಯಾರಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಅದು ನಮ್ಮ ಪಕ್ಷದ ತೀರ್ಮಾನ. ದಯ ಮಾಡಿ ಅದನ್ನು ಕೇಳತಕ್ಕದ್ದು ಸರಿಯಲ್ಲ. ನಿಮಗೆ ಸರ್ಕಾರ ಮಾಡಲು ಅಧಿಕಾರ ಕೊಟ್ಟಿದೆ, ನಿಮಗೆ ಜವಾಬ್ದಾರಿ ವಹಿಸಿಕೊಳ್ಳಲು ಅಧಿಕಾರ ಕೊಟ್ಟಿದೆ. ಆದರೆ ನಮಗೆ ನೀವು ಬರಲೇ ಬೇಕು ಎಂದು ಒತ್ತಾಯ ಮಾಡುವಂತಿಲ್ಲ.

(ಗೊಂದಲ)

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು :– ಎಲ್ಲರೂ ಕುಳಿತುಕೊಳ್ಳಿ, ಇಲ್ಲಿಯವರೆಗೆ ಬೇರೆ ಯಾರೂ ಮಾತನಾಡುವಾಗಲು ಏನೂ ಆಗುವುದಿಲ್ಲ. ಆದರೆ ರೇವಣ್ಣನವರು ಎದ್ದ ಕೂಡಲೆ ಸಮಸ್ಯೆ ಚಾಲು ಆಗುತ್ತದೆ ನೋಡಿ ! ರೇವಣ್ಣನವರೆ, ನೀವು ನನಗೆ ನೇರವಾಗಿ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ರೇವಣ್ಣನವರು ಮಾತನಾಡಲು ಅವರುಗಳು ಸುಮ್ಮನೆ ಬಿಡುವುದಿಲ್ಲ.

ಅಧ್ಯಕ್ಷರು :– ಯಾರು ಮಾತನಾಡುವಾಗಲೂ ಸಮಸ್ಯೆ ಪ್ರಾರಂಭವಾಗುವುದಿಲ್ಲ. ರೇವಣ್ಣನವರು ಪ್ರಾರಂಭ ಮಾಡಿದ ಕೂಡಲೆ ಆಗುತ್ತದೆ ! ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಚಿಕ್ಕನಗೌಡ್ರ ಈಶ್ವರ ಗೌಡ್ರ ಸಿದ್ಧನ ಗೌಡ :– ಮಾನ್ಯ ಕುಮಾರಸ್ವಾಮಿಯವರು 20 ತಿಂಗಳ ಆಡಳಿತ ಮಾಡಿದ್ದಾಗ ಈ ರೀತಿ ಆಗಿರಲಿಲ್ಲವೆ ?

ಶ್ರೀ ಸಿ.ಟಿ. ರವಿ :– ಜಗಳದ ಬೀಜ.....

ಅಧ್ಯಕ್ಷರು :– ದಯಮಾಡಿ ರವಿಯವರೆ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ :– ಜಗಳದ ಬೀಜ ಎಂದು ಇರುತ್ತದೆ. ಅದನ್ನೇನಾದರು ರೇವಣ್ಣನವರು ಅವರ ಜೇಬಿನಲ್ಲಿ ಇಟ್ಟುಕೊಂಡೇ ಬಂದಿದ್ದಾರೆಯೆ ಎಂಬುದನ್ನು ನೋಡಬೇಕು. ಅವರು ಮಾತನಾಡುತ್ತಿದ್ದಂತೆ ಎಲ್ಲರೂ ಜಗಳಕ್ಕೆ ಏಳುತ್ತಾರೆಂದರೆ, ಅವರು ಜಗಳದ ಬೀಜವನ್ನು ಏನಾದರು ಇಟ್ಟುಕೊಂಡು ಬಂದಿದ್ದಾರೆಯೆ ಎಂದು ಪರೀಕ್ಷೆ ಮಾಡುವುದು ಒಳ್ಳೆಯದು, ಅಧ್ಯಕ್ಷರೆ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಪಾಪ ಅದನ್ನು ಅವರೇನಾದರು ಇಟ್ಟುಕೊಂಡಿದ್ದರೆ ಆ ಜಗಳ ಚಿಕ್ಕಮಗಳೂರು ಕಡೆಯಿಂದಲೇ start ಆಗಿರುತ್ತಿತ್ತು. ಇಲ್ಲಿ ರವಿಗಿಂತ ಜಗಳಗಂಟರು ಬೇರೆ ಯಾರೂ ಇಲ್ಲ. ಪಾಪ ರೇವಣ್ಣನವರು ಏಕೆ ಜಗಳದ ಬೀಜವನ್ನು ಇಟ್ಟುಕೊಳ್ಳುತ್ತಾರೆ ?

ಶ್ರೀ ಆರ್. ಧ್ರುವನಾರಾಯಣ್ :–ಇದು ಗಂಭೀರವಾದ ವಿಚಾರ. ರಾಷ್ಟ್ರ, ರಾಜ್ಯಮಟ್ಟದ ಸಮಸ್ಯೆ ಇದಾಗಿದೆ. ಆದರೆ ಇಲ್ಲಿ ಜಾತಿ, ಗೀತಿ ಎಂದು ಮಾತನಾಡುತ್ತಿದ್ದಾರೆ. ದಯಮಾಡಿ ಸರಿಯಾದ ರೀತಿಯಲ್ಲಿ ಚರ್ಚೆ ಆಗಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಆಡಳಿತ ಪಕ್ಷದ ಸದಸ್ಯರಿಗೆ ತಾವು ದಯಮಾಡಿ ಸಲಹೆಯನ್ನು ಕೊಡಬೇಕು. ವಿರೋಧಪಕ್ಷದ ಸದಸ್ಯರು ಮಾತನಾಡುವಾಗ, ಗಂಭೀರವಾಗಿ ಕೇಳಲಿ, ಉತ್ತರ ಬೇಕಾದರೆ ಆಮೇಲೆ ಹೇಳಲಿ ನಮ್ಮದೇನೂ ಅಭ್ಯಂತರವಿಲ್ಲ. ಕೊನೆಗೆ ಬೇಕಾದರೆ ಅವರ ಹತ್ತಿರ ಇರುವ ಕಡತದಲ್ಲಿರುವುದನ್ನು ಸೇರಿಸಿ ಹೇಳಲಿ. ಚಿಕ್ಕನ ಗೌಡರು ಹೇಳುತ್ತಿದ್ದರು 20 ತಿಂಗಳು ನಾನು ಆಡಳಿತ ನಡೆಸಿದೆನೆಂದು. 20 ತಿಂಗಳು ನಾನು ಆಡಳಿತ ನಡೆಸಲಿಲ್ಲ. ನಡೆಸಿದ್ದು ನಿಜ ಏತಕ್ಕೆಂದರೆ, ಬಡವರ ಮಕ್ಕಳಿಗೆ ಹೈಸ್ಕೂಲ್ ಕೊಡುವುದಕ್ಕೋ, ಜೂನಿಯರ್ ಕಾಲೇಜು ಕೊಡುವುದಕ್ಕೋ ಪ್ರಯತ್ನ ಮಾಡಿದ್ದೇನೆ. ನಾನೇನು ಬೇರೆ ಕೆಲಸ ಮಾಡುವುದಕ್ಕೆ ಮಾಡಿಲ್ಲ. ಬೇಕಾದರೆ ಒಂದು ದಿನ ಕುಳಿತುಕೊಳ್ಳಲಿ ಚರ್ಚೆ ಮಾಡೋಣ. ದಯಮಾಡಿ 20 ತಿಂಗಳಲ್ಲಿ ಇಂತಹ ಪಾಪದ ಕೆಲಸಕ್ಕೆ ನಾನು ಕೈ ಹಾಕಲಿಕ್ಕೆ ಹೋಗಲಿಲ್ಲ. ಹೇಳಲಿ ಬೇಕಾಗಿದ್ದರೆ ತಾಕತ್ತು ಇದ್ದರೆ, ಕುಮಾರಸ್ವಾಮಿಯವರ 20 ತಿಂಗಳ ಅಡಳಿತ ಎನ್ನುವುದನ್ನು ಸಭೆಯಲ್ಲಿ ಚರ್ಚೆಗಿಡಿ. ನಾನು ಹೇಳಲಿಕ್ಕೆ ತಯಾರಿದ್ದೇನೆ.

ಅಧ್ಯಕ್ಷರು:- ಚಿಕ್ಕನಗೌಡರೇ, ನೀವು ಕುಳಿತುಕೊಳ್ಳಿ ರೇವಣ್ಣನವರೆ, ನೀವು ವಿಷಯಕ್ಕೆ ನೇರವಾಗಿ ಬನ್ನಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಅವರಿಗೆ ದಯಮಾಡಿ ಸಭೆಯಲ್ಲಿ ಗಂಭೀರವಾಗಿರುವುದಕ್ಕೆ ಹೇಳಿ. ಮಾನ್ಯ ಸಭಾಧ್ಯಕ್ಷರೆ, ಪಿತೂರಿ ಯಾರ ಕಡೆಯಿಂದ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಯಾವ ವಿರೋಧ ಪಕ್ಷ? ಏನು ಪಿತೂರಿ ಮಾಡಿದೆ? ಈ ಒಂಭತ್ತು ಕಡೆ ನಡೆದಿರತಕ್ಕಂತಹ ಘಟನೆಗಳಲ್ಲಿ ವ್ಯವಸ್ಥಿತ ಪಿತೂರಿ ಎಂದು ಹೇಳಿದ ಮೇಲೆ ರಾಜ್ಯದ ಜನತೆಗೆ ಒಂದು ತಪ್ಪು ಸಂದೇಶ ಹೋಗುತ್ತಿದೆ. ಏನು ತಪ್ಪು ಸಂದೇಶವೆಂದರೆ, ಪಿತೂರಿ ಎಂದರೆ ಏನು? ಯಾರು? ವಿರೋಧಪಕ್ಷದ ಪಿತೂರಿ ಇದೆಯೋ, ಯಾವ ಪಕ್ಷದ ಪಿತೂರಿ ಇದೆ ಎಂದು ದಯಮಾಡಿ ಹೇಳಲಿ. ಯಾವ ಆಧಾರದ ಮೇಲೆ ನೀವು ಹೇಳಿದಿರಿ ಸನ್ಮಾನ್ಯ ಮುಖ್ಯಮಂತ್ರಿಗಳೇ?

(ಗೊಂದಲ)

ಅಧ್ಯಕ್ಷರು:- ಯಾರೂ ಮಾತನಾಡಬಾರದು ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಶಾಸಕರು ಸುಮ್ಮನೆ ಕುಳಿತುಕೊಳ್ಳಬೇಕು. ಅವರು ಹೇಳಿದ ಮೇಲೆ ಸರ್ಕಾರ ಉತ್ತರ ಕೊಡುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ:- ಈಗ ಪಿತೂರಿ ಎನ್ನುವುದನ್ನು ದಯಮಾಡಿ ಸದನಕ್ಕೆ ತಿಳಿಸಬೇಕು. ಇಲ್ಲದೆ ಹೋದರೆ, ಕಳೆದ 48 ದಿನದಿಂದ ರಾಜ್ಯದ ಆಡಳಿತ ಏನು ಕುಸಿದು ಹೋಗಿದೆ ಇದಕ್ಕೆ ಅವರೇ ಏನಾದರೂ divert ಮಾಡುವುದಕ್ಕೆ ಪಿತೂರಿ ಮಾಡಿದ್ದಾರೆಯೇ? ಇದರಲ್ಲಿ ಎರಡು ಪಿತೂರಿಗಳಿವೆ. ಒಂದು ಆಡಳಿತದ ವೈಫಲ್ಯತೆಯನ್ನು ಮುಚ್ಚುವುದಕ್ಕೆ ಅವರು ಏನಾದರೂ ಪಿತೂರಿ ಮಾಡಿದ್ದಾರೆಯೆ? ಅಥವಾ ಯಾರು ಪಿತೂರಿ ಮಾಡಿದ್ದಾರೆಂದು ರಾಜ್ಯದ ಜನತೆಗೆ ತಿಳಿಸಬೇಕು. ಇಂತಹ ವಿಷಯದಲ್ಲಿ ಏಕೆಂದರೆ, ಯಾರೇ ನಿರ್ದಾಕ್ಷಿಣ್ಯವಾಗಿ ಬೆಂಗಳೂರು ನಗರದಲ್ಲಿ ಹತ್ತಾರು ವರ್ಷಗಳ ಮೇಲೆ ಇರುವಂತಹ ಅಧಿಕಾರಿಗಳನ್ನು ತೆಗೆದುಹಾಕುವುದಕ್ಕೆ ಇವರಿಗೆ ತಾಕತ್ತು ಇದೆಯೇ ಕೇಳಿ ತೆಗೆದು ಯಾರು ನಿಷ್ಟಾವಂತ ಅಧಿಕಾರಿಗಳು ಇದ್ಯಾರೋ ಅವರನ್ನು ನೇಮಿಸಲಿ. ಪೊಲೀಸ್ ಕಮಿಷನರ್ ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಅವರು ಪ್ರಾಮಾಣಿಕರಾದಂತಹ ಅಧಿಕಾರಿ. ಅವರಿಗೆ ಕೆಲಸ ಮಾಡುವುದಕ್ಕೆ ದಕ್ಷತೆ ಇದೆ. ಅವರ ಬಗ್ಗೆ ನಾನು ಚಕಾರವೆತ್ತಿ ಹೇಳುತ್ತಿಲ್ಲ. ಏಕೆಂದರೆ, ಯಾರೋ ಹೇಳಿದರು ಜಾತಿ ಆಧಾರ ಬೇಕಾಗಿಲ್ಲ. ಯಾರು ಪ್ರಾಮಾಣಿಕರಾಗಿದ್ದಾರೆ ಅವರನ್ನು ಬೆಂಗಳೂರಿಗೆ ಹಾಕಿ 15-20 ವರ್ಷ ನೀವು ಮಾಡಿಬಿಟ್ಟು ಇಂತಹ ಘಟನೆಯಾಗುವುದಕ್ಕೆ ಅವರೇ ಕಾರಣಕರ್ತರು ಎಂದು ಹೇಳಬೇಕಾಗತ್ತದೆ. ಪಿತೂರಿ ಎನ್ನುವುದನ್ನು ರಾಜ್ಯದ ಜನತೆಗೆ ಸದನದ ಮೂಲಕ ತಿಳಿಸಬೇಕು. ಏನಾದರೂ ಕಾಂಗ್ರೆಸ್ ಪಕ್ಷನೋ, ಜೆಡಿ(ಎಸ್)ಪಕ್ಷನೋ ಅಥವಾ ಕಳೆದ 48 ದಿನದ ಆಡಳಿತವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಅವರೇ ಪಿತೂರಿ ಮಾಡಿದ್ದಾರೆಯೇ ಎನ್ನುವುದನ್ನೂ ಸದನಕ್ಕೆ ತಿಳಿಸಬೇಕು. ಇಷ್ಟು ಅವಕಾಶ ನೀಡಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ): ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ನಡೆದಂತಹ ಬಾಂಬ್ ಸ್ಫೋಟನೆ ಬಹುಶಃ ಇದು ದೊಡ್ಡ ಗಂಭೀರವಾದಂತಹ ಭಯಾನಕವಾದಂತಹ ಒಂದು ಘಟನೆ. ಪ್ರಪ್ರಥಮವಾಗಿ ಈ ಘಟನೆಯನ್ನು ನಾವೆಲ್ಲರೂ ಒಟ್ಟಾರೆ ಖಂಡಿಸಬೇಕಾಗಿದೆ. ಈ ಘಠನೆಗಳು ಎಂದೆಂದೂ ಮರುಕಳಿಸಬಾರದೆಂದು ಖಂಡಿಸಬೇಕಾಗಿದೆ. ಖಂಡಿಸುವುದು ಒಂದೇ ಅಲ್ಲದೆ ಯಾರು ಇಂತಹ ಘಟನೆಗಳಲ್ಲಿ ಭಾಗಿಯಾಗಿದ್ದಾರೆ ಅವರನ್ನು ಎಲ್ಲ ರೀತಿಯ ಪ್ರಯತ್ನ ಮಾಡಿ ಸರ್ಕಾರ ವಿರೋಧ ಪಕ್ಷದವರು ಸೇರಿ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಿ ಇವತ್ತು ಇಂತಹ ಘಟನೆಗಳಲ್ಲಿ

ಭಾಗಿಯಾಗಿರುವಂತಹ ಎಲ್ಲ ಶಕ್ತಿಗಳನ್ನು ಹುಡುಕತಕ್ಕಂತಹ ಕೆಲಸ ಮಾಡಬೇಕು. ಕಾನೂನು ರೀತಿಯಲ್ಲಿ ಅವರ ಮೇಲೆ ಶಿಸ್ತಿನ ಕ್ರಮತೆಗೆದುಕೊಳ್ಳತಕ್ಕಂತಹ ಪ್ರಯತ್ನ ಆಗಬೇಕಾಗಿರುವ ಪರಿಸ್ಥಿತಿ ಇವತ್ತು ಇದೆ. ಇಂತಹ ಘಟನೆಗಳು ಬೆಂಗಳೂರಿನಲ್ಲಿ ಆಗಿರುವಂಥದ್ದು ಅನಿರೀಕ್ಷಿತವೆಂದು ನಾವು ಭಾವಿಸಿಕೊಳ್ಳುತ್ತೇವೆ. ನಮಗೆಲ್ಲರಿಗೂ ಗೊತ್ತಾಗತಕ್ಕಂಥದ್ದು ಅನಿರೀಕ್ಷಿತ ಆದರೆ, ಇಲಾಖೆಯವರಿಗೆ ಇದು ನಿರೀಕ್ಷಿತವಾಗಿತ್ತು ಎಂಬುದನ್ನು ಪತ್ರಿಕೆಯಲ್ಲಿ ನಾವು ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ನಮ್ಮ ಗುಪ್ತಚರ ದಳದಿಂದ ಇಂತಹ ಘಟನೆಗಳು ಆಗತಕ್ಕಂತಹ ಸಂಭವನೀಯ ಅವಕಾಶಗಳಿವೆ ಇದರ ಬಗ್ಗೆ ಎಚ್ಚರಿಕೆಯಿಂದಿರಿ ಎಂದು caution ಕೊಟ್ಟಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಜೊತೆಗೆ ನಮ್ಮ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಯಾವ್ಯಾವ ರೀತಿಯಲ್ಲಿ alert ಮಾಡಬೇಕಾದಂತಹ instruction, ಸದಾಕಾಲ ನಮ್ಮ ಬೇಹುಗಾರಿಕೆಯವರು ಜಾಗ್ರತೆಯಿಂದ ಇರಬೇಕಾದಂತಹ ಅವಶ್ಯಕತೆ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಒಂದೇ ಕಡೆ ಆಗಲಿಲ್ಲ. ಕಳೆದ ವರ್ಷ ನಾವು ನೋಡಿದ್ದೇವೆ. ಹೈದರಾಬಾದ್‌ನಲ್ಲಿ ಪ್ರಾರ್ಥನಾ ಮಂದಿರದಲ್ಲೇ ಬಾಂಬ್ ಸ್ಫೋಟನೆ ಮಾಡಿ ನೂರಾರು ಜನ ಗಾಯಾಳುಗಳಾಗಿರುವಂತಹದ್ದು, ಪ್ರಾಣ ತೆಗೆದುಕೊಂಡಿರತಕ್ಕದ್ದನ್ನು ನಾವು ನೋಡಿದ್ದೇವೆ. ಅದೇ ರೀತಿ ಇವತ್ತು ಅಹಮದಾಬಾದ್, ಬೆಂಗಳೂರು ನಗರದಲ್ಲಿ ಆಗಿದೆ. ಆಗಿರತಕ್ಕಂತಹ ಘಟನೆಗಳನ್ನು ಅವಲೋಕಿಸಿದಾಗ ಬಹುಶಃ ಬೇಹುಗಾರಿಕೆ ಇಲಾಖೆ ಎಷ್ಟರಮಟ್ಟಿಗೆ ಸದಾ ಕಾಲ ಜಾಗ್ರತೆ, ಎಚ್ಚರಿಕೆಯಿಂದ ಇರಬೇಕೋ ಆ ಎಚ್ಚರಿಕೆ ಜಾಗ್ರತೆ ಯಾವುದೋ ಇಂತಹ ವಿಚಾರಗಳು ಬಂದಾಗ ಮಾತ್ರ alert ಆಗುತ್ತಾರೆ. ತದನಂತರ ಅದಕ್ಕೆ ಎಷ್ಟರ ಮಟ್ಟಿಗೆ ಲಕ್ಷ್ಯ ಕೊಡಬೇಕೋ ಅದನ್ನು ನಿರ್ಲಕ್ಷ್ಯ ಮಾಡುವ ಅವಕಾಶ ಜಾಸ್ತಿಯಿದೆ ಎನ್ನುವುದಕ್ಕೆ ಈ ಅನಿರೀಕ್ಷಿತ ಘಟನೆಗಳನ್ನು ನಾವು ಕಾಣುತ್ತಿದ್ದೇವೆ. ಅವರು ಸದಾ ಕಾಲ ಜಾಗೃತವಾಗಿರಬೇಕಾಗುತ್ತದೆ. ಬೇಹುಗಾರಿಕೆ ಇಲಾಖೆ ಇರತಕ್ಕಂಥದ್ದು ಅದೇ ಉದ್ದೇಶಕ್ಕೋಸ್ಕರ ಇದನ್ನು ಬಿಟ್ಟು ಬೇರೆ ಕೆಲಸ ಏನೂ ಇಲ್ಲ. ಸದಾ ಕಾಲ ಅವರು ಜಾಗ್ರತೆಯಿಂದಿರಬೇಕಾಗುತ್ತದೆ. ವಾಚ್ ಮಾಡಬೇಕಾಗುತ್ತದೆ. ಇವತ್ತು ಉದಾಹರಣೆಗೆ, ಚನ್ನಪಟ್ಟಣದಲ್ಲಿ ಈ ತರಹ ಸ್ಫೋಟಕ ವಸ್ತುಗಳನ್ನು ಯಾರೋ ಮನೆಯಲ್ಲಿ ಇಟ್ಟುಕೊಂಡಿದ್ದಾರೆಂದು ಸಾರ್ವಜನಿಕರೊಬ್ಬರು ಪೊಲೀಸರಿಗೆ ದೂರು ಕೊಟ್ಟರೆ ಅದರ ಬಗ್ಗೆ ಪೊಲೀಸ್ ಇಲಾಖೆ ಎಷ್ಟು alert ಆಗಬೇಕಾಗಿತ್ತೋ ಅಷ್ಟು alert ಆಗಲಿಲ್ಲ. ಅಲ್ಲಿಂದ ಸ್ಫೋಟಕ ವಸ್ತುಗಳು ಬೆಂಗಳೂರು ನಗರಕ್ಕೆ ಸ್ಫೋಟನೆ ಮಾಡಿದಂತಹ ದುಷ್ಟ ಶಕ್ತಿಗಳಿಗೆ ಸರಬರಾಜಾಗಿದೆ ಎನ್ನುವ ಮಾಹಿತಿಯನ್ನು ನಾನು ಪತ್ರಿಕೆಯಲ್ಲಿ ಓದಿದೆ. ಇದನ್ನು

ನೋಡಿದಾಗ ಅದು ಮುನ್ಸೂಚನೆಯಂತೆ ಚನ್ನಪಟ್ಟಣದಲ್ಲಿ ಇದರ ವಿಚಾರ ಇಲಾಖೆಗೆ ಗೊತ್ತಾದಾಗ ಅವರು ಎಷ್ಟು ಜಾಗೃತರಾಗಬೇಕಾಗಿತ್ತೋ ಅಷ್ಟು ಜಾಗೃತರಾಗಲಿಲ್ಲ. ಇವೆಲ್ಲ ಕಾರಣವನ್ನು ಅವಲೋಕಿಸಿ ನೋಡಿದರೆ, ಬಹುಶಃ ಇಲಾಖೆಯವರು ಎಷ್ಟರ ಮಟ್ಟಿಗೆ ಜಾಗೃತರಾಗಬೇಕಾಗಿತ್ತೋ ಅದರಲ್ಲಿ ಸ್ವಲ್ಪಮಟ್ಟಿಗೆ ವೈಫಲ್ಯ ಕಾಣುತ್ತದೆ. ಇದೊಂದು ದೊಡ್ಡ ಭಯಂಕರವಾದ ವಾತಾವರಣ ಬೆಂಗಳೂರು ನಗರದಲ್ಲಾಗಿದೆ. ಈ ಹಿನ್ನೆಲೆಯಲ್ಲಿ ಅನೇಕ ತರಹದಂತಹ ವ್ಯಾಪಾರಕ್ಕೆ ನಷ್ಟವಾಗಿದೆ. ಬೆಂಗಳೂರಿಗೆ ಬರತಕ್ಕ ಜನ ಇವತ್ತು ಭಯದ ಪರಿಸ್ಥಿತಿಯಲ್ಲಿದ್ದಾರೆ. ಸುಮಾರು 50 ಲಕ್ಷಕ್ಕೂ ಮೇಲ್ಪಟ್ಟು ಜನರು ಇವತ್ತು ಹಳ್ಳಿಗಾಡಿನಿಂದ ಬೆಂಗಳೂರಿಗೆ ಬರುತ್ತಾರೆ, ಹೋಗುತ್ತಾರೆ. ಹೊರಗಿನಿಂದ ಬೇರೆ ಬೇರೆ ರಾಜ್ಯಗಳಿಂದ ವಾಣಿಜ್ಯೋದ್ಯಮಿಗಳು ಬೆಂಗಳೂರು ಕೇಂದ್ರಕ್ಕೆ ಬರುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿ law and order ಕಾನೂನು ಮತ್ತು ಶಾಂತಿ ಪರಿಪಾಲನೆ ಸದಾಕಾಲ ಸುವ್ಯವಸ್ಥಿತ ರೀತಿಯಲ್ಲಿ ಇರಬೇಕಾಗಿರುವುದು ಬಹಳ ಅವಶ್ಯಕತೆ ಇದೆ. ಇವೆಲ್ಲದರ ದೃಷ್ಟಿಯಿಂದ ಈ ಘಟನೆ ಬಗ್ಗೆ ಸಂಪೂರ್ಣವಾದಂತಹ ಬೆಂಬಲವನ್ನು ಸರ್ಕಾರಕ್ಕೆ ಕೊಡಲು ಸಿದ್ಧರಿದ್ದೇವೆ. ಈ ಘಟನೆಯನ್ನು ಖಂಡನೆ ಮಾಡಬೇಕು. ಈ ಘಟನೆಯಲ್ಲಿ ಭಾಗಿಗಳಾಗಿರುವಂತಹ ದುಷ್ಟ ಶಕ್ತಿಗಳನ್ನು ತತ್ ಕ್ಷಣ ಹಿಡಿಯಬೇಕು. ಅವರನ್ನು ಹಿಡಿಯಲು ಯಾವುದೇ ಪೋಟಾ ಕಾಯಿದೆ, ಕೋಕಾ ಕಾಯಿದೆ ಬೇಡ ಇರತಕ್ಕಂತಹ ಕಾನೂನಿನಲ್ಲಿಯೇ ದುಷ್ಟಶಕ್ತಿಗಳನ್ನು ಸದೆಬಡಿಯಲು ಪೊಲೀಸರಿಗೆ ಸರ್ವಶಕ್ತಿ ಇದೆ. ಅವರು alert ಆಗಿರಬೇಕಾದದ್ದು, ಜವಾಬ್ದಾರಿಕೆಯಿಂದ ನಡೆದುಕೊಳ್ಳಬೇಕಾಗಿರುವಂತಹದ್ದು, ಸದಾಕಾಲ ಇದನು ಉಸ್ತುವಾರಿಕೆ ಮಾಡತಕ್ಕಂಥದ್ದು ಇಲಾಖೆಯ ಜವಾಬ್ದಾರಿಯಾಗಿದೆ. ಈಗ ಆಗಿರುವಂತಹ ಘಟನೆಗಳ ಬಗ್ಗೆ ನೀವು ನಾಳೆ trace out ಮಾಡಬೇಕು. ಅದು ಬಹಳ ಮುಖ್ಯ. ಈಗ ಆಗಿರುವಂತಹ ಎಲ್ಲಾ ಘಟನೆಗಳಲ್ಲಿ ಯಾವ್ಯಾವ ಶಕ್ತಿಗಳು ಭಾಗಿಯಾಗಿದ್ದಾರೆ ಅವರನ್ನು ಹಿಡಿದಿರತಕ್ಕಂತಹ ನಿದರ್ಶನಗಳು ನಮ್ಮ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಗೆ ಇದೆ. ಅದೊಂದು ಹೆಮ್ಮೆಯ ವಿಚಾರ. ಇವರ ಬಗ್ಗೆ ಕೀರ್ತಿ ಇದೆ. ಅದನ್ನು ನಾವು ಜಾಗ್ರತೆ ವಹಿಸಿ ಇಂತಹ ಘಟನೆಗಳಲ್ಲಿ ಭಾಗಿಯಾಗಿರುವವರನ್ನು ಖಂಡಿತ ಹಿಡಿಯಬೇಕು. ಅವರ ಮೇಲೆ ತೀವ್ರತರವಾದಂತಹ ಶಿಕ್ಷೆ ಕೊಡತಕ್ಕಂತಹ ಕೆಲಸ ಮಾಡಬೇಕು. ಅವರಿಗೆ ಈ ಮನೆ ಮುಖಾಂತರ ಇಂತಹ ಶಕ್ತಿಗಳು ಯಾರ್‍ಯಾರು ಇದ್ದಾರೆ ಅ ಶಕ್ತಿಗಳು ಇಂತಹ ಕೆಲಸ ಮಾಡಿದರೆ, ಬಹುಶಃ ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ ಏನೆಂದರೆ "ಕಳ್ಳನ ಹೆಂಡತಿ ಮುಂಡೆ" ಎಂದು ಆ ರೀತಿಯಲ್ಲಿ ನೀವು ಸಾಯುವುದರ ಜೊತೆಗೆ ನಿಮ್ಮ

ಕುಟುಂಬ ನೀವು ಸರ್ವನಾಶವಾಗುತ್ತೀರಿ ಎನ್ನುವ ಎಚ್ಚರಿಕೆ ಕೊಡುವಂತಹ ಅವಶ್ಯಕತೆ ಇದೆ. ನಾವು ಸರ್ಕಾರಕ್ಕೆ ಪೂರ್ಣವಾದಂತಹ ಬೆಂಬಲವನ್ನು ಕೊಡುತ್ತೇವೆ. ದುಷ್ಟ ಶಕ್ತಿಗಳ ಮೇಲೆ ಯಾವ ತರಹವಾದಂತಹ ಕ್ರಮ ತೆಗದುಕೊಳ್ಳುವುದಕ್ಕೆ ನೀವು ಸದಾ ಎಚ್ಚರಿಕೆ ವಹಿಸಿ ಆ ಶಕ್ತಿಗಳನ್ನು ಹಿಡಿಯಬೇಕು ಮತ್ತು ಇಂತಹ ಘಟನೆಯನ್ನು ಖಂಡನೆ ಮಾಡತಕ್ಕಂತಹ ಕೆಲಸವನ್ನು ಸಾಮೂಹಿಕವಾಗಿ ಮಾಡಬೇಕೆಂದು ಹೇಳಿ ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತನಗೆ ಧನ್ಯವಾದಗಳು. ಈ ಒಂದು ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಈ ಒಂದು ಘಟನೆಯನ್ನು ನೋಡಿದಾಗ ಇದು ಅನಿರೀಕ್ಷಿತವೆಂದು ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ, ಕಳೆದ ಹಲವಾರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಿದೆ ಬೆಂಗಳೂರು ನಗರವನ್ನು target ಮಾಡುತ್ತಾರೆ ಎನ್ನುವುದನ್ನು ಕೂಡ ಇದರ ಬಗ್ಗೆ ಸಾಕಷ್ಟು ಅನೇಕ ಸಂದರ್ಭಗಳಲ್ಲಿ ಮಾತುಕತೆ ಆಗಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಅದು ಐ.ಟಿ.ಬಿ.ಟಿ. ಕಂಪನಿಗಳ ಮೇಲೆ ಆಗಬಹುದು ಎನ್ನುವ ಹೇಳಿಕೆಗಳು ಬಂದಿದ್ದವು. ಬೆಂಗಳೂರು ನಗರ ಇಡೀ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿರತಕ್ಕಂತಹ ನಗರ. ಇಲ್ಲಿ ಏನಾದರೂ ಘಟನೆಗಳು ನಡೆದರೆ ಇಡೀ ಅಂತರರಾಷ್ಟ್ರ ಮಟ್ಟದಲ್ಲಿ ಇದರ ಬಗ್ಗೆ ಮಾಹಿತಿ ಹೊಗುತ್ತದೆ ಮತ್ತು ಇದರ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಉದ್ದೇಶದಿಂದಲೇ ಬೆಂಗಳೂರು ನಗರವನ್ನು target ಮಾಡುತ್ತಾರೆ. ಇವತ್ತು ಈ ಭಯೋತ್ಪಾದಕರ ಮುಖ್ಯ ಉದ್ದೇಶವೇನೆಂದರೆ, ಭಯದ ವಾತಾವರಣ ನಿರ್ಮಾಣ ಮಾಡಬೇಕು. ಏನೇ ಒಂದು incident ಆದರೆ ಆ incident ಮುಖಾಂತರ ಹೆಚ್ಚು ಪ್ರಚಾರ ಸಿಗಬೇಕು ಮತ್ತು ಆ ರಾಷ್ಟ್ರದಲ್ಲಿ ಆ ರಾಜ್ಯದಲ್ಲಿ ಒಂದು ಭೀತಿಯ ವಾತಾವರಣ ನಿರ್ಮಾಣವಾಗುವಂಥದ್ದು ಅವರ ಉದ್ದೇಶವಾಗಿರುತ್ತದೆ. ಈ ಕೃತ್ಯಗಳನ್ನು ಹೇಡಿಗಳು ಮಾಡುತ್ತಾರೆ. ಭಯೋತ್ಪಾದಕ ಕೃತ್ಯವೆಂದರೆ ಹೇಡಿಗಳ ಕೃತ್ಯವೇ, ಅದರ ಬಗ್ಗೆ ಎರಡು ಮಾತಿಲ್ಲ. ಅದರ ಬಗ್ಗೆ ಎರಡನೇ ಮಾತಿಲ್ಲ. ಯಾವುದೇ ರೀತಿಯಲ್ಲೂ ಧೈರ್ಯವಾದಂತಹ ಕೆಲಸ ಇದಲ್ಲ. ಇದು ಯಾವೊಂದು ಪುರುಷಾರ್ಥಕ್ಕೂ ಕೂಡ ಬರತಕ್ಕಂಥ ವಿಚಾರವಲ್ಲ. ಬೆಂಗಳೂರು ನಗರದಲ್ಲಿ ಈ ರೀತಿ ಆಗಬಹುದೆಂದು ಇದರ ಬಗ್ಗೆ ನಮಗೆ ಮಾಹಿತಿ ಇತ್ತು. ಹಿಂದೆಯೂ ಕೂಡ ನಮ್ಮ

ಟಾಟಾ ಇನ್ಸ್ಟಿಟ್ಯೂಟ್‌ನಲ್ಲಿ ಕೂಡ ಅಂತಹ ಘಟನೆ ನಡೆದಿತ್ತು. ಆ ಸಂದರ್ಭದಲ್ಲೂ ಕೂಡ ಅಂತಹ ಘಟನೆ ನಡೆದಿತ್ತು. ಆ ಸಂದರ್ಭದಲ್ಲೂ ಕೂಡ ಇದೇ ರೀತಿ ಸದನದಲ್ಲಿ ನಮ್ಮ intelligence ಬಗ್ಗೆ ಚರ್ಚೆಯಾಯಿತು. ನಾವು ಅದನ್ನು ಸದೃಢ ಮಾಡಿಕೊಳ್ಳಬೇಕು. ಅದಕ್ಕೆ ಹೆಚ್ಚು ಶಕ್ತಿಯನ್ನು ತುಂಬಬೇಕು. ಅವರಿಗೆ ನಾವು freedom ಕೊಡಬೇಕು, ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು. ಈ ರೀತಿಯ ಚರ್ಚೆಯನ್ನು ನಾವು ಆಗ ಮಾಡಿದ್ದೆವು. ಆದರೆ ಚರ್ಚೆ ಮಾಡಿದ ನಂತರ, ಈ ಘಟನೆಯನ್ನು ನಾವು ಮರೆಯುತ್ತೇವೆ, ಮತ್ತೆ ಯಥಾಸ್ಥಿತಿಗೆ ಹೋಗುತ್ತೇವೆ. ಇವತ್ತು ಈ ಬೇಹುಗಾರಿಕೆ ಬಗ್ಗೆ ನಮ್ಮ ಸರ್ಕಾರ ಮತ್ತು ನಾವೆಲ್ಲರೂ ಕೂಡ ಇದಕ್ಕೆ ಆದ್ಯತೆ ಕೊಡಲೇಬೇಕಾಗಿದೆ. ಇವತ್ತು ಈ incidents ಹೇಗೆ ಆಯಿತು? ಏಕೆ ಆಯಿತು? ಏಕೆ ನಾವು ಇದನ್ನು ನಿಲ್ಲಿಸಲು ಆಗಲಿಲ್ಲ? ಏಕೆ ನಮಗೆ ಇದರ ಬಗ್ಗೆ ಮಾಹಿತಿ ಸಿಗಲಿಲ್ಲ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ಯಾರು ಇದನ್ನು ಮಾಡಿದ್ದಾರೋ, ಅವರನ್ನು ಹಿಡಿಯತಕ್ಕಂಥ ಕೆಲಸವನ್ನು ನಾವು ಮಾಡಲೇಬೇಕು. ಅದೊಂದು ಕಡೆಯಾದರೆ, ಮುಂದೆ ಇದು ಆಗದಂತೆ ಸಹ ನೋಡಿಕೊಳ್ಳಬೇಕು. ಅಹ್ಮದಾಬಾದ್‌ನಲ್ಲಿ ಇದೇ ರೀತಿಯ ಘಟನೆಯಿಂದ 40–50 ಜನ ಸತ್ತು ಹೋಗಿದ್ದಾರೆ. ಆದರೆ ನಮ್ಮ ಸುದೈವ, ಅದಕ್ಕೆ ಹೋಲಿಸಿದಾಗ ಬೆಂಗಳೂರು ನಗರದಲ್ಲಿ ಆ ಒಂದು ಭೀಕರ ಪರಿಣಾಮ ಇಲ್ಲಿ ಆಗಲಿಲ್ಲ. ಏಕೆ ಆಗಲಿಲ್ಲ? Low intensity bombಗಳನ್ನೇ ಅವರು ಏಕೆ ಹಾಕಿದರು? ಇದನ್ನು trial run ಮಾಡಲಿಕ್ಕಾಗಿ ಹಾಕಿದ್ದಾರೆಯೇ? ಮತ್ತೆ ಹಾಕತಕ್ಕಂಥ ಸಂಭವಗಳು ಇವೆಯೇ? ಎಂಬುದೂ ಕೂಡ ಬಹಳ ಗಂಭೀರವಾದಂತಹ ವಿಚಾರ. ಆದ್ದರಿಂದ ಇವತ್ತು ನಾನು ಹೇಳತಕ್ಕದ್ದು ಏನೆಂದರೆ, ಸರ್ಕಾರ ಕೂಡ ಬಹಳ ಜವಾಬ್ದಾರಿಯುತವಾಗಿ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರ ಹೇಳಿಕೆಗಳು ಯಾವುದೇ ಕಾರಣಕ್ಕೂ ಕೂಡ ತಪ್ಪು ದಾರಿಗೆ ಹೋಗಬಾರದು. ಏಕೆಂದರೆ, ಇದು ಸರ್ಕಾರದ ವಿರುದ್ಧ ನಡೆದಿರುವ ಷಡ್ಯಂತ್ರವಲ್ಲ. ಈ ಷಡ್ಯಂತ್ರ ಇರತಕ್ಕದ್ದು ಈ ರಾಷ್ಟ್ರದ ಮೇಲೆ, ಬೆಂಗಳೂರು ನಗರದ ಮೇಲೆ. ಇಲ್ಲಿ ಬಿ.ಜೆ.ಪಿ.ಯ ಸರ್ಕಾರವಿದೆ ಅಥವಾ ಕಾಂಗ್ರೆಸ್‌ನ ಸರ್ಕಾರವಿದೆ ಎಂದಲ್ಲ. ಬೆಂಗಳೂರು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿ ಆಗಿರತಕ್ಕ ನಗರ. ಇಲ್ಲಿ ಯಾವುದಾದರೂ ಘಟನೆಯಾದರೆ ಅದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಸಿಗುತ್ತದೆ ಎಂಬುದೇ ಅವರ ಉದ್ದೇಶವಾಗಿದೆ. ಈ terrorist groupಗಳು ಏನಿರುತ್ತವೆ, ಅವು ಕೇವಲ ನಮ್ಮ ರಾಷ್ಟ್ರ ವ್ಯಾಪ್ತಿಯಲ್ಲಿ ಮಾತ್ರವೇ ಇಲ್ಲ. ಬೇರೆ ಬೇರೆ ಕಡೆಗಳಿಂದ ಇವರಿಗೆ ಹಣ ಸಿಗುತ್ತದೆ, ಬೇರೆ ಬೇರೆ ಕಡೆಗಳಿಂದ ಇವರಿಗೆ

ತಂತ್ರಜ್ಞಾನ ಸಿಗುತ್ತದೆ. ಭಯೋತ್ಪಾದನೆ ಹೇಗೆ ಮಾಡಬೇಕೆಂದು ಅವರಿಗೆ training ಕೊಡಲಾಗಿರುತ್ತದೆ. ಇದೆಲ್ಲಾ ನಡೆಯುತ್ತದೆ. ಆದ್ದರಿಂದ ಇದು ಕೇವಲ ಒಂದು ಸರ್ಕಾರಕ್ಕಾಗಲಿ ಅಥವಾ ಪಕ್ಷಕ್ಕಾಗಲೀ ಸೀಮಿತವಾದ ಘಟನೆಯಂತೂ ಅಲ್ಲವೇ ಇಲ್ಲ. ಆದ್ದರಿಂದ ಇದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಹೇಳಿಕೆಗಳನ್ನು ಕೊಡಬೇಕಾಗುತ್ತದೆ. intelligence wing ಅನ್ನು strengthen ಮಾಡತಕ್ಕಂಥ ದಿಕ್ಕಿನಲ್ಲಿ ಇವತ್ತು ಕ್ರಮ ತೆಗೆದುಕೊಳ್ಳಬೇಕು. ಬೆಂಗಳೂರಿನಲ್ಲಿ ಮುಂದೆಯೂ ಕೂಡ ಇಂತಹ ಘಟನೆಗಳು ನಡೆಯಬಹುದಾಗಿದೆ. ಇದನ್ನು ನಿಯಂತ್ರಣ ಮಾಡುವಂತಾದ್ದು ಹೇಗೆ? ಇದನ್ನು ನಿರ್ವಹಣೆ ಮಾಡತಕ್ಕದ್ದು ಹೇಗೆ? ಎಂದು ಯೋಚಿಸಬೇಕು. ಬೆಂಗಳೂರು ನಗರಕ್ಕೆ ನೀವು ಹೆಚ್ಚಿನ ಪೊಲೀಸ್ ಅಧಿಕಾರಿಗಳನ್ನು ಕೊಡಬೇಕು, ಹೆಚ್ಚು stations ಅನ್ನು ಸ್ಥಾಪಿಸಬೇಕು. ಲಂಡನ್‌ನಲ್ಲಿ ಒಂದು ಘಟನೆ ನಡೆಯಿತು. ಗಾಡಿಯೊಂದು ಬಂದು airport ಹತ್ತಿರ ಹೋಗಿ bomb blast ಆಯಿತು. ಬಹುಶಃ ಅದೆಲ್ಲವನ್ನೂ ಕೂಡ ಅಲ್ಲಿನವರು video tape ನಲ್ಲಿ recording ಮಾಡಿದ್ದಾರೆ. ಅದೇ ಪ್ರಕಾರ ನಮ್ಮಲ್ಲೂ electronic surveillance systems ಹಾಕಿಕೊಳ್ಳುವುದಕ್ಕೆ ಚಿಂತನೆ ಮಾಡಬೇಕು. ಬೇರೆ ಬೇರೆ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಎಲ್ಲೆಲ್ಲಿ ಇಂಥ ಪ್ರದೇಶಗಳಿವೆ, ಎಲ್ಲೆಲ್ಲಿ ಮುಖ್ಯವಾದಂತಹ ಜಾಗಗಳಿವೆ, ಅಲ್ಲಿ surveillance ಹಾಕತಕ್ಕಂಥ, ನಿಗ್ರಹ ಮಾಡತಕ್ಕಂಥ technological equipment ಏನಿದೆ, ಅದನ್ನು ಉಪಯೋಗಿಸತಕ್ಕದ್ದೂ ಕೂಡ ಆಗಬೇಕಾಗಿದೆ. ನಾವೇನು ಮಾಡುತ್ತೇವೆ ಎಂದರೆ, ಇಂತಹ ಘಟನೆಗಳು ನಡೆದಾಗ ಮಾತ್ರ ಚಿಂತನೆ ಮಾಡುತ್ತೇವೆ, ಮತ್ತೆ ಇದು ನಮ್ಮ priority ನಲ್ಲಿ ಇರುವುದಿಲ್ಲ. ಮತ್ತೆ ನಾವು ಬೇರೆ ಬೇರೆ ಕಡೆಗೆ ಹೊಗಿ ಬಿಡುತ್ತೇವೆ. ನಾವು ಇದಕ್ಕೆ priority ಯನ್ನು ಕೊಡದೇ ಹೋದರೆ, ನಾಳೆ ಮತ್ತೆ ಈ ಘಟನೆ ನಡೆಯಬಹುದಾಗಿದೆ. ನಮ್ಮ ಬೆಂಗಳೂರು ನಗರದಲ್ಲಿ 2–3 ಸಲ ಇಂತಹ ಘಟನೆಗಳಾದರೆ, ಬೆಂಗಳೂರು ನಗರದಿಂದ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಆದಾಯ ತಪ್ಪಿ ಹೋಗುತ್ತದೆ. ಬೇರೆ ಬೇರೆ ನಗರದಿಂದ, ಬೇರೆ ಬೇರೆ ರಾಜ್ಯಗಳಿಂದ, ಬೇರೆ ಬೇರೆ ದೇಶಗಳಿಂದ ಯಾರ್ಯಾರು ಇಲ್ಲಿ ಬಂಡವಾಳ ಹೂಡುತ್ತಾರೋ, ಅವರು ಕೂಡ ಇಲ್ಲಿಗೆ ಬರುವುದಕ್ಕೆ ಭಯ ಪಡುತ್ತಾರೆ. ಏಕೆ ನಾವು ಬೆಂಗಳೂರಿಗೆ ಬರಬೇಕು? ಇಲ್ಲಿ ನಮಗೆ ಸುರಕ್ಷತೆ ಇಲ್ಲ. ಶಾಂತಿ ಇಲ್ಲ. ಇಲ್ಲಿಗೆ ಬಂದರೆ, ಇಲ್ಲಿ ಏನಾದರೂ ಘಟನೆಗಳಾದರೆ ನಮ್ಮ ವೈಯಕ್ತಿಕ ಲಾಭಕ್ಕೆ ತೊಂದರೆಯಾಗುತ್ತದೆ ಎಂದು ಭಯದ ವಾತಾವರಣ ನಿರ್ಮಾಣವಾಗುವುದೂ ಕೂಡ ಆಗುತ್ತದೆ. ಅದರ ಪರಿಣಾಮ ಏನು ಆಗಬಹುದು

ಎಂಬುದನ್ನು ಯೋಚಿಸಬೇಕು. ನಾವು ಇಲ್ಲಿ intelligence department ಗೆ 100 ಕೋಟಿ ರೂ. ಗಳನ್ನು ಕೊಡುವುದಕ್ಕೆ ಹೆದರುತ್ತೇವೆ. ನಾಳೆ ಆ ರೀತಿ ಏನಾದರೂ ನಮ್ಮ ಬೆಂಗಳೂರು ನಗರದ ಆರ್ಥಿಕ ಬೆಳವಣಿಗೆಗೆ ಸಮಸ್ಯೆ ಬಂದಾಗ, ಅದರ ಪರಿಣಾಮ ನಮ್ಮ ರಾಜ್ಯಕ್ಕೆ ಎಷ್ಟಾಗಬಹುದು ಎಂದೂ ಸಹ ಯೋಚಿಸಬೇಕು. ಇದರಿಂದ ಸಾವಿರಾರು ಕೋಟಿ ರೂ.ಗಳ ನಷ್ಟವುಂಟಾಗಬಹುದು. ಈ ಕುರಿತು ಚಿಂತನೆ ಮಾಡತಕ್ಕ ಅಗತ್ಯತೆ ಇದೆ. ಈ priority ಯನ್ನು ನಾವು ಮರೆಯಬಾರದು. ಈ ಘಟನೆಯಾದ ಒಂದು ತಿಂಗಳ ನಂತರ ಈ ರೀತಿ ಏನೂ ಆಗದೇ ಹೋದರೆ, ಮತ್ತೆ ನಾವು ಯಥಾಸ್ಥಿತಿಗೆ ಹೋಗುತ್ತೇವೆ. ಇದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಮತ್ತೆ ಇದೇ ತರಹದ ಘಟನೆಯಾದಾಗ ಇದೇ ಚರ್ಚೆ ಮಾಡತಕ್ಕದ್ದು. ಒಬ್ಬರ ಮೇಲೆ ಇನ್ನೊಬ್ಬರು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡತಕ್ಕದ್ದು ಆಗುತ್ತದೆಯೇ ಹೊರತು ನೈಜ ಸ್ಥಿತಿಯಲ್ಲಿ ಬದಲಾವಣೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಗೃಹ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಅವರು ಜವಾಬ್ದಾರಿಯುತವಾದ ಸಚಿವರು. ಇವತ್ತು ಅವರಿಗೆ ಎಲ್ಲಾ ವಿಚಾರಗಳು ಗೊತ್ತಿದೆ. ಬಹುಶಃ ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಇನ್ನೂ ಕೂಡ ಒಳ್ಳೆಯ ಕೆಲಸ ಮಾಡಬೇಕಾಗಿದೆ. ಪೊಲೀಸ್ ಇಲಾಖೆಯಲ್ಲಿ ಕೇವಲ ಹೇಳಿಕೆಗಳ ಮುಖಾಂತರ ಅಲ್ಲ. ನಿಜಕ್ಕೂ ಕೂಡ ಅಲ್ಲಿ ಶಿಸ್ತು ಬರಬೇಕು. ಆ ಶಿಸ್ತನ್ನು ತರತಕ್ಕಂಥ ಕೆಲಸವನ್ನು ನೀವು ಮಾಡಬೇಕು. ರಾಜಕೀಯದ influence ಏನು ಇರುತ್ತದೆ, ಅದನ್ನು ಪದೇ ಪದೇ ಹೇಳಿದ್ದೇವೆ. ಎಲ್ಲರೂ ಕೂಡ ಇದನ್ನೇ ಹೇಳುತ್ತೇವೆ, ಆದರೆ ನಾವು ಮಾಡುವುದೆಲ್ಲಾ ಬೇರೆ ಬೇರೆ ತರಹವೇ. ಈ ಪೊಲೀಸ್ ಇಲಾಖೆಗಳಲ್ಲಿ ನಾವು ಸರಿಯಾದ ರೀತಿಯಲ್ಲಿ ಸಹಕಾರ ಕೊಡದೇ ಹೋದರೆ, ಈ ಏನು ಆತಂಕವಾದಿಗಳಿದ್ದಾರೆ, ಇವರು ಇನ್ನೂ ಹೆಚ್ಚಾಗುತ್ತಾರೆ. ಇಂತಹ ಘಟನೆಗಳು ಇನ್ನೂ ಹೆಚ್ಚಾಗುತ್ತವೆ, ಇದರ ಪರಿಣಾಮ ಹೆಚ್ಚಾಗುತ್ತದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಶ್ರೀರಾಂಪುರ ಪೊಲೀಸ್ ಠಾಣೆ ಇದೆ. ಆ ಒಂದು ಪೊಲೀಸ್ ಠಾಣೆಯಲ್ಲಿ ಕಳೆದ ಆರು ತಿಂಗಳಿನಿಂದ ಒಂದು ಜೀಪ್ ಇಲ್ಲ. ಆ ಇನ್ಸ್‌ಪೆಕ್ಟರ್ ಪಾಪ, ಸ್ಟೇಷನ್‌ಗೆ ಬರುತ್ತಾನೆ, ಸ್ಟೇಷನ್‌ನಲ್ಲಿ ಕುಳಿತುಕೊಳ್ಳುತ್ತಾನೆ, ಹೋಗುತ್ತಾನೆ. ಎಲ್ಲಿಯೂ ಕೂಡ ಅವನು ಓಡಾಡುತ್ತಿಲ್ಲ. ಏಕೆಂದರೆ, ಅವನದೇ ದುಡ್ಡು ಹಾಕಿಕೊಂಡು ಎಲ್ಲಿ ಓಡಾಡಲಿಕ್ಕಾಗುತ್ತದೆ? ಅವನದೇ ಕಾರನ್ನು ತೆಗೆದುಕೊಂಡು ಬಂದು, ಅವನದೇ ದುಡ್ಡಿನಲ್ಲಿ ಪೆಟ್ರೋಲ್ ಹಾಕಿಕೊಂಡು ಅವನು ಎಲ್ಲಿ ಓಡಾಡುವುದಕ್ಕಾಗುತ್ತದೆ? ಈ ರೀತಿಯಾಗಿ ಆಗಬಾರದು. ಇದೊಂದು ಸಣ್ಣ

ವಿಚಾರ. ಇದೊಂದು ದೊಡ್ಡ ವಿಚಾರವೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಇಂತಹ ವಿಚಾರಗಳ ಬಗ್ಗೆ ನಮ್ಮ ಪೊಲೀಸ್ ಇಲಾಖೆಯಲ್ಲಿ ನಾವು ಗಮನ ಹರಿಸದೆ ಹೋದರೆ, ನಾಳೆ ಪರಿಸ್ಥಿತಿ ಏನಾಗಬಹುದು? ಅದರ ಬಗ್ಗೆ ದಯವಿಟ್ಟು ಈ ಸರ್ಕಾರ ಗಮನ ಕೊಡಲಿ. ಈ ನಮ್ಮ ನಗರದ ಸುರಕ್ಷತೆ, ರಾಜ್ಯದ ಸುರಕ್ಷತೆ ಬಗ್ಗೆ, ಬೇಹುಗಾರಿಕೆ ಇಲಾಖೆ ಬಗ್ಗೆ ಹೆಚ್ಚಿನ ಆದ್ಯತೆ ಕೊಡಲಿ, ಇದನ್ನು ಪತ್ತೆ ಹಚ್ಚಬೇಕು. ನನಗನಿಸುತ್ತದೆ, ಕೇವಲ ಮೊನ್ನೆ ಆಗಿರತಕ್ಕಂಥ ಘಟನೆ ಮೊನ್ನೆಗೆ ಮುಗಿಯುವುದಿಲ್ಲ. ಖಂಡಿತವಾಗಿಯೂ ಮತ್ತೆ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡೇ ಮಾಡುತ್ತಾರೆ. ಆ ಒಂದು ನಿಟ್ಟಿನಲ್ಲಿ ಈ ಸರ್ಕಾರ ಕ್ರಮ ತೆಗೆದುಕೊಳ್ಳಲೇಬೇಕು. ಈ Intelligence department ಅನ್ನು strengthen ಮಾಡಲೇಬೇಕು. Actually ಇಲ್ಲೊಂದು ಆರೋಪ ಮಾಡಬೇಕಾಗುತ್ತದೆ. ಇದು ನಮ್ಮ Intelligence depatment failure ಎಂದು ಹೇಳಬೇಕಾಗುತ್ತದೆ. ಇಲ್ಲಿ failure ಆಗಿದೆ ಎಂದು ಬಹಿರಂಗವಾಗಿ ಹೇಳಬೇಕಾಗುತ್ತದೆ. ಘಟನೆ ಬಗ್ಗೆ ನಮಗೆ ಮಾಹಿತಿ ತೆಗದುಕೊಳ್ಳುವುದಕ್ಕಾಗಿಲ್ಲ, ಅದನ್ನು ನಿಲ್ಲಿಸಕ್ಕಾಗಿಲ್ಲ. ಆದರೆ ನಾವು ಏಕೆ ಹೆಚ್ಚು ಅವರನ್ನು blame ಮಾಡುವುದಕ್ಕೆ ಆಗುವುದಿಲ್ಲ ಎಂದರೆ, ನಾವು ಅವರಿಗೆ ಅಷ್ಟೊಂದು ಶಕ್ತಿ ಕೊಟ್ಟಿಲ್ಲ. ಇವತ್ತು Intelligene department ಗೆ posting ಎಂದು ಹೇಳಿದರೆ ಅಧಿಕಾರಿಗಳು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. punishment posting ಅದು. ಒಬ್ಬ sub-Inspector ಅನ್ನು ಅಲ್ಲಿಗೆ ಹಾಕಿದರೆ, ಅವನು ನಮ್ಮ ಹತ್ತಿರವೇ ಬರುತ್ತಾನೆ. ಸಾರ್, ಇಲ್ಲಿಂದ ನನಗೆ transfer ಮಾಡಿಕೊಡಿ ಎಂದು ಹೇಳುತ್ತಾನೆ. Inspectorಗೆ ಹಾಕಿದರೆ, ಅವರೂ ಕೂಡ ಅದನ್ನೇ ಹೇಳುತ್ತಾರೆ. ಈ ರೀತಿ ಪರಿಸ್ಥಿತಿ ಇದೆ. ಅಲ್ಲಿ ಕೆಲಸ ಮಾಡುವವರಿಗೆ ನಾವು ಬೇರೆ ರೀತಿಯಲ್ಲಿ incentive ಕೂಡ ಕೊಡಬೇಕು. ಬೇರೆ law and order ವಿಚಾರ ಬಿಟ್ಟುಬಿಡೋಣ. ಆದರೆ ಈ Intellience deparmentನ ಅಧಿಕಾರಿಗಳಿಗೆ ಏನಾದರೂ ಒಂದು incentive ಅನ್ನು ನಾವು ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಅಲ್ಲಿಗೆ ನಾವು ಹೋಗುವುದೇ ಬೇಡ, ಬೇಡದಿರುವವರು ಅಲ್ಲಿಗೆ ಹೋಗುತ್ತಾರೆ ಎನ್ನುವಂತಾಗುತ್ತದೆ. ದಕ್ಷ ಅಧಿಕಾರಿಗಳು ಅಲ್ಲಿ ಇರುವುದಿಲ್ಲ. ಒಳ್ಳೆಯ ಕೆಲಸ ಮಾಡತಕ್ಕಂಥ ಬುದ್ಧಿವಂತ ಅಧಿಕಾರಿಗಳು ಅಲ್ಲಿಗೆ ಇರಬೇಕು. Intelligence department ನಲ್ಲಿ ನಿಜವಾಗಿಯೂ ಕೂಡ Intelligent ಜನ ಇರಬೇಕೇ ಹೊರತು ಯಾರೋ ಒಬ್ಬರನ್ನು ಕಾಟಾಚಾರಕ್ಕೆ ಅಲ್ಲಿಗೆ ಹಾಕಿದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೆ, ಗೃಹ ಸಚಿವರೇ,

ಬಹಳ serious ಆಗಿ, ಇದರ ಬಗ್ಗೆ ಬಹಳ ಗಂಭೀರವಾಗಿ ತೆಗದುಕೊಳ್ಳಿ. ಇದು ಇವತ್ತು ಮಾತ್ರ ಚರ್ಚೆಗೆ ತೆಗೆದುಕೊಳ್ಳುವುದು ಬೇಡ, ಮುಂದೆಯೂ ಕೂಡ ಇದು ಕಾರ್ಯಗತ ಆಗತಕ್ಕಂಥ ರೀತಿಯಲ್ಲಿ ಬಹುಶಃ ಒಂದು ಸಮಿತಿಯನ್ನೇ ಮಾಡಿ ಅಥವಾ ಒಂದು task force ಮಾಡಿ. ಹೇಗೆ ಇದನ್ನು ನೀವು strengthen ಮಾಡಬಹುದು, ಇವರಿಗೆ ಏನೇನು ಸವಲತ್ತು ಕೊಡಬೇಕು ಎಂದು ನೋಡಿ, ಇವತ್ತು ಅನೇಕ ತಂತ್ರಜ್ಞಾನಗಳಿವೆ. ಈ intelligence ಅನ್ನು collect ಮಾಡಲು ಅನೇಕ ಉಪಾಯಗಳಿವೆ. ಅದು computers ಮುಖಾಂತರ ಇರಬಹುದು, ಬೇರೆ ಬೇರೆ ರೀತಿಯಲ್ಲಿ ಕೂಡ ಇವೊತ್ತು ಅದನ್ನು collect ಮಾಡತಕ್ಕಂಥ ವ್ಯವಸ್ಥೆಗಳಿವೆ. ನಗರದಲ್ಲಿ electronic surveillance systems ಗಳನ್ನು ಹಾಕಬಹುದು. ಇದನ್ನೂ ಕೂಡ ತಾವು ಮಾಡಿ. ಇಂತಹ ಘಟನೆಗಳು ನಡೆಯುವುದನ್ನು ನಿಲ್ಲಿಸತಕ್ಕಂಥ ಕೆಲಸವನ್ನು ನಾವು ಮಾಡಲೇಬೇಕು ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಈ ಒಂದು ಘಟನೆಯಲ್ಲಿ ನೀವು ಹಿಂದೆ ನೋಡದೆ, ಇಲ್ಲಿ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗದುಕೊಳ್ಳಿ. ಆದರೆ ಕೊನೆಯದಾಗಿ ಒಂದೇ ಒಂದು ಸಲಹೆ ನೀಡಬಯಸುತ್ತೇನೆ. ಇಂತಹ ಘಟನೆಗಳು ಬಹಳ ಸೂಕ್ಷ್ಮವಾದಂತಹ ವಿಚಾರ ಒಳಗೊಂಡಿರುತ್ತವೆ. ಇಂತಹ ಘಟನೆಗಳ ಬಗ್ಗೆ investigation ಆಗುವ ಸಂದರ್ಭದಲ್ಲಿ ಯಾರನ್ನೋ ಹಿಡಿದಿದ್ದೇವೆ. ಯಾರೋ ಸಿಕ್ಕಿಹಾಕಿಕೊಂಡಿದ್ದಾರೆಂದು ಜನರಿಗೆ ತೋರಿಸುವುದಕ್ಕೋಸ್ಕರ ಒಂದೊಂದು ಸಲ ಅಮಾಯಕ ಜನರನ್ನು ನಾವು ಹಿಡಿದು, ಅವರಿಗೆ ನಾವು ಆ ಒಂದು ಘಟನೆಯಲ್ಲಿ involve ಮಾಡಿಕೊಳ್ಳುತ್ತೇವೆ. fix ಮಾಡುತ್ತೇವೆ. ಈ ರೀತಿಯಾದಾಗ ಏನಾಗುತ್ತದೆ? ಒಂದೊಂದು ಸಲ ನಾವು ಅನೇಕ ಘಟನೆಗಳಲ್ಲಿ ನೋಡಿದ್ದೇವೆ. ಪಂಜಾಬ್‌ನಲ್ಲಿ, ಕಾಶ್ಮೀರ್‌ನಲ್ಲಿ ಆತಂಕವಾದಿಗಳು ಬೆಳೆಯಲು ಏನು ಕಾರಣವೆಂದು ಹೇಳಿದರೆ, ಅನೇಕ ದೌರ್ಜನ್ಯಗಳು ನಮ್ಮ army ಯಿಂದಲೇ, ನಮ್ಮ police ಇಲಾಖೆಯಿಂದಲೇ ಸ್ಥಳೀಯ ಜನರ ಮೇಲೆ ಆಗುತ್ತದೆ. ಅವರು ಹತಾಶ ಮನೋಭಾವದಿಂದ ಒಂದೊಂದು ಸಲ ಅಂತಹ ಅನೇಕ ಕೃತ್ಯಗಳಿಗೆ ಕೈ ಹಾಕುತ್ತಾರೆ. ಆದ್ದರಿಂದ, ಆ ಒಂದು ವಿಚಾರದಲ್ಲಿ ಈ ಸರ್ಕಾರ ಅದು ಯಾವುದೇ ಒಂದು ಜಾತಿಯವರು ಇರಬಹುದು, ಧರ್ಮದವರು ಇರಬಹುದು, ಭಾಷೆಯವರು ಇರಬಹುದು, ಅದರ ಬಗ್ಗೆ ನಾವು ಹೋಗುವುದು ಬೇಡ. ಅವರು ಎಂತಹವರೇ ಆಗಿರಲಿ, ಅವರ ಮೇಲೆ ಕ್ರಮ ತೆಗದುಕೊಳ್ಳಿ. ಈ ಸೂಕ್ಷ್ಮವಾದ ಸಂದರ್ಭಗಳಲ್ಲಿ ಪೋಲೀಸ್‌ನವರೂ ಕೂಡ ಯಾರನ್ನು ಹಿಡಿಯುತ್ತಾರೋ, ಅವರ ಮೇಲೆ ನಿರ್ದಾಕ್ಷಿಣ್ಯ

ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ನಾವು ಅದನ್ನು ತಡೆಹಿಡಿಯುವುದಕ್ಕೆ ಹೋಗುವುದಿಲ್ಲ. ಆದರೆ ಸ್ವಲ್ಪ ಹುಷಾರಾಗಿ ಇದನ್ನು ಮಾಡತಕ್ಕದ್ದು ಬಹಳ ಮುಖ್ಯ ಇಲ್ಲದೆ ಹೋದರೆ ಅದು ತಪ್ಪುದಾರಿಗೆ ಹೊಗುತ್ತದೆ. ಇದು ಆಗಬಾರದು ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ರಾಮನಗರ): ಮಾನ್ಯ ಅಧ್ಯಕ್ಷರೆ, 25ನೇ ತಾರೀಖಿನಂದು ನಡೆದಿರುವ ಸರಣಿಬಾಂಬ್ ಸ್ಫೋಟದ ಬಗ್ಗೆ ಇವತ್ತು ನಡೆದಿರುವ ಚರ್ಚೆಯಲ್ಲಿ ಅನೇಕ ಸದಸ್ಯರು ಭಾಗವಹಿಸಿ ಅವರ ಭಾವನೆಗಳು ವ್ಯಕ್ತಪಡಿಸುತ್ತಿದ್ದಾರೆ. ಇಂಥ ಘಟನೆಗಳ ವಿರುದ್ಧ ಪಕ್ಷಬೇಧ ಮರೆತು ಮುಂದಿನ ದಿವಸಗಳಲ್ಲಿ ಇಂತಹ ಘಟನೆಗಳಿಗೆ ಅವಕಾಶವಾಗದ ರೀತಿಯಲ್ಲಿ ನಿರ್ಧಾರ ಮಾಡಬೇಕಾದ್ದು ಎಲ್ಲರ ಕರ್ತವ್ಯವಾಗಿದೆ ಎಂದು ಮೊದಲನೆಯದಾಗಿ ಹೇಳಬಯಸುತ್ತೇನೆ. ಕರ್ನಾಟಕದಲ್ಲಿ ಇಲ್ಲದೆ ಇದ್ದಂಥ ಇಂಥ ಚಟುವಟಿಕೆಗಳಿಗೆ ಯಾವುದೇ ರೀತಿಯಾಗಿ ಪ್ರೋತ್ಸಾಹ ಕೊಡುವ ಕೆಲಸಕ್ಕೆ ಅಥವಾ ಆ ರೀತಿಯ ಘಟನೆಗಳಿಗೆ ಮಾರುಹೋಗುವುದಕ್ಕೆ ನಮ್ಮ ರಾಜ್ಯದಲ್ಲಿ ಆ ರೀತಿಯ ವಾತಾವರಣ ನಿರ್ಮಾಣವಾಗಿರಲಿಲ್ಲ. ನಾನಂತೂ ಈ ರೀತಿಯ ಘಟನೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತವೆಂದು ನನಗೆ ತಿಳುವಳಿಕೆ ಬಂದ ನಂತರ ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ. ಸನ್ಮಾನ್ಯ ರೇವಣ್ಣನವರು ಕೆಲವು ವಿಷಯಗಳನ್ನು ಮಾಧ್ಯಮಗಳ ಪತ್ರಿಗೆಗಳ ಕೆಲವು ಭಾಗಗಳನ್ನು ಮುಂದಿಟ್ಟುಕೊಂಡು ಚರ್ಚೆ ಮಾಡಲು ಹೋದರು. ಮೊನ್ನೆ ನಡೆದ ಘಟನೆಯಾದ ನಂತರ ನಾನು ಮಾಧ್ಯಮಗಳಲ್ಲಿ ಬಂದಿರುವ ವರದಿಗಳನ್ನು ಗಮನಿಸಿದ್ದೇನೆ. ಬೆಂಗಳೂರಿನಲ್ಲಿ ನಡೆದ ಘಟನೆಯ ಹಿನ್ನೆಲೆಯಲ್ಲಿ ರಾಜ್ಯಮಟ್ಟದ ನಾಯಕರುಗಳು, ರಾಷ್ಟ್ರಮಟ್ಟದ ನಾಯಕರುಗಳು ಅವರವರದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಇಲ್ಲಿ ಅವರ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ರಾಜಕೀಯ ನಾಯಕರುಗಳೇನು ಪ್ರತಿಕ್ರಿಯಗಳನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕಿಂತ ಹೆಚ್ಚಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಸಚಿವರು ಈ ರಾಜ್ಯದ ಐದೂವರೆ ಜನರ ಸಂರಕ್ಷಣೆ ಮಾಡುವ ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತಿದ್ದಾರೆ. ಅವರಿಬ್ಬರು ಈ ವಿಷಯವಾಗಿ ಸಾರ್ವಜನಿಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾದರೆ ಸಂಪೂರ್ಣವಾದ ಮಾಹಿತಿಗಳನ್ನು ಪಡೆಯದೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು ಒಳ್ಳೆಯ ಲಕ್ಷಣವಲ್ಲವೆಂದು ನಾನು ಹೇಳಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರತಿಕ್ರಿಯೆಯನ್ನು ಕೆಲವು ಪತ್ರಿಕೆಗಳಲ್ಲಿ

ಗಮನಿಸಿದಾಗ, ಅವರು ಆವತ್ತು ಪ್ರತಿಕ್ರಿಯೆಯನ್ನು ಕೊಟ್ಟಿರುವುದು, ಬಿಜೆಪಿಯ ಪಕ್ಷದ ಸರ್ಕಾರವನ್ನು ಅಸ್ಥಿರಗೊಳಿಸುವ ಸಲುವಾಗಿ ವ್ಯವಸ್ಥಿತವಾದ ಪಿತೂರಿಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ, ಮಾಧ್ಯಮಗಳಲ್ಲಿ ಬಂದಿರುವ ವಿಷಯವನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ನಾನು ರಾಜಕೀಯವನ್ನು ಬೆರೆಸುವುದಕ್ಕೆ ಹೋಗುವುದಿಲ್ಲ. ಆದರೆ ಯಾವ ಕಾರಣಕ್ಕೋಸ್ಕರ ಈ ಪ್ರತಿಕ್ರಿಯೆಗಳನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆಂದರೆ, ಜನಸಾಮಾನ್ಯರಲ್ಲಿ ಕೆಟ್ಟ ಅಭಿಪ್ರಾಯ ಯಾರ ಮೇಲೂ ಆಗಬಾರದೆಂಬುದು ನನ್ನ ಅಭಿಪ್ರಾಯ. ನಾವು ಈಗಾಗಲೇ ರಾಜ್ಯ ಸರ್ಕಾರಕ್ಕೆ ಮಾಹಿತಿಗಳನ್ನು ಕೊಟ್ಟಿದ್ದೆವು. ಕರ್ನಾಟಕ ರಾಜ್ಯದಲ್ಲಿ ಉಗ್ರರ ಚಟುವಟಿಕೆ ಹೆಚ್ಚಿನ ರೀತಿಯಲ್ಲಿದೆ, ಎಚ್ಚರಿಕೆಯಿಂದ ಕೆಲವು ಕ್ರಮಗಳನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕೆಂಬ ಮಾಹಿತಿಯನ್ನು ಮೊದಲೇ ಕೊಟ್ಟಿದ್ದೇವೆ ಎನ್ನುವ ಹೇಳಿಕೆಯನ್ನು ಕೇಂದ್ರದ ಸಚಿವರು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ನಮಗೆ ಕೇಂದ್ರದಿಂದ ಯಾವುದೇ ಮಾಹಿತಿ ಇಲ್ಲವೆಂದು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಇದರಿಂದ, ನಾವು ಯಾವ ರೀತಿಯ ವ್ಯವಸ್ಥೆಗಳಿಗೆ ನಾವು ಹೋಗುತ್ತಿದ್ದೇವೆ? ಇವತ್ತು ಕೇಂದ್ರ ಸರ್ಕಾರವಿರಬಹುದು, ರಾಜ್ಯ ಸರ್ಕಾರವಿರಬಹುದು; ಇದು ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾದ ವಿಚಾರವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ಅಧ್ಯಕ್ಷರೆ, ಅವರ ಮಾತಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅದರೆ ಅದೇ ಟಿವಿಗಳಲ್ಲಿ ನಾವು ಕೂಡ ನೋಡುತ್ತಿದ್ದೇವೆ. ನಮ್ಮ ದೇಶದ ಮಾಜಿ ಪ್ರಧಾನಮಂತ್ರಿಗಳು ಕೊಟ್ಟಿರುವ ಪ್ರತಿಕ್ರಿಯೆ ತೆಗೆದುಕೊಳ್ಳುವುದಕ್ಕಾಗದಿರುವ ಪ್ರತಿಕ್ರಿಯೆ, ಹಾಗಾದರೆ ಅವರು ರಾಜಕಾರಣ ಮಾಡುವುದಕ್ಕೆ ಹೊರಟಿರಲಿಲ್ಲವೇ? ಅವರು ಏತಕ್ಕೆ ಆ ರೀತಿ ಹೇಳಿಕೆಗಳನ್ನು ಕೊಟ್ಟರು? ಭಯೋತ್ಪಾದನೆಯ ಬಗ್ಗೆ ನನ್ನದು Compromise ಇಲ್ಲವೇ ಇಲ್ಲ. ಯಾವುದ್ಯಾವುದೋ ಕಾರಣಕ್ಕೋಸ್ಕರ ನೀವು ಅಧಿಕಾರಿಗಳನ್ನು ಆಯಾಕಟ್ಟಿನ ಜಾಗದಲ್ಲಿಟ್ಟಿದ್ದೀರಿ, ಅದಕ್ಕೋಸ್ಕರ ಭಯೋತ್ಪಾದನೆ ನಡೆಯುತ್ತಿದೆ ಎಂದು ಅವರು ಹೇಳುತ್ತಾರೆ. ಇದರಿಂದ ಇಡೀ ದೇಶಕ್ಕೆ ಏನು ಸಂದೇಶ ಹೋಗುತ್ತದೆ? ಯಾರನ್ನು Please ಮಾಡುವುದಕ್ಕೆ ಹೊರಟಿದ್ದೀರಿ? ಹಾಗಾದರೆ ಪ್ರಧಾನಮಂತ್ರಿಗಳಾಗಿದ್ದವರಿಗೆ ನಿಮಗೆ ಗೊತ್ತಿಲ್ಲವೇ? ರಾಜ್ಯದಲ್ಲಿ ಭಯೋತ್ಪಾದನೆ ಯಾರಿಂದ ಶುರುವಾಯಿತು, ಏತಕ್ಕೆ ಆಯಿತು? ಹೇಳಿಕೆ ಕೊಡುವುದೆಂದರೆ ಎಲ್ಲರೂ ಒಪ್ಪುವಂತೆ ಹೇಳಿಕೆ ಕೊಡಬೇಕು. ಕುಮಾರಸ್ವಾಮಿಗಳ ಬಗ್ಗೆ ಅಪಾರವಾದ-ಗೌರವವಿದೆ, (ಗೊಂದಲ)

ಆದರೆ ಹೇಳಿಕೆ ಕೊಡುವಾಗ ಅಲ್ಲೂ ರಾಜಕಾರಣವಾಗಬಾರದಲ್ಲವೇ? ತಪ್ಪಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ನಿಜವಾಗಿರುವುದು, ನಡೆದಿರುವ ಹೇಳಿಕೆಯನ್ನು ಕೊಟ್ಟಿದ್ದರೆ ಇವೊತ್ತು ನಾನು ವಾದಿಸಯತ್ತಲೇ ಇರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಅಧ್ಯಕ್ಷರೆ, ಸಭೆಯಲ್ಲಿ ಇಲ್ಲದಿರುವವರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರೆ, ಅವರು ಇಲ್ಲಿ ಬಂದು ಉತ್ತರಕೊಡುವುದಕ್ಕಾಗುತ್ತದೆಯೇ? (ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ನಿಮ್ಮ ಅನುಮತಿಯನ್ನು ತೆಗೆದುಕೊಂಡು, Point of order ಇದ್ದರೆ ಅಥವಾ ಏನಾದರೂ ಇದ್ದರೆ ಎತ್ತಿ ತೋರಿಸಬಹುದು, ಅದನ್ನು ಬಿಟ್ಟು ಅವರು (ಕುಮಾರಸ್ವಾಮಿ) ಮಾತನಾಡುತ್ತಿದ್ದಾರೆ, ಮಧ್ಯದಲ್ಲಿ ಎದ್ದು ಇವರು ವಿವರಣೆಯನ್ನು ಕೊಡಲು ಇವರ್‍ಯಾರು?

ಅಧ್ಯಕ್ಷರು: ಅವರು (ಕುಮಾರಸ್ವಾಮಿ) yield ಆದರು. ಅದಕ್ಕಾಗಿ ಅವರು ಮಾತನಾಡಲು ಆರಂಭಿಸಿದರು. (ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಅಧ್ಯಕ್ಷರೆ, ಮಾಜಿ ಪ್ರಧಾನಮಂತ್ರಿಗಳ ಪತ್ರಿಕಾ ಹೇಳಿಕೆಯನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಾದರೆ ನಾನು ತಯಾರಿದ್ದೇನೆ, ಏಕೆಂದರೆ. ಅವರು ಇಲ್ಲಿ ಇಲ್ಲ. ಅವರು ಈ ಸಭೆಗೆ ಬಂದು ಹೇಳಿಕೆಯನ್ನು ಕೊಡುವುದಕ್ಕಾಗುವುದಿಲ್ಲ, ಬೇಕಾದರೆ ನೋಟೀಸ್ ಕೊಟ್ಟು ತಮ್ಮ ಅನುಮತಿಯನ್ನು ಪಡೆದು ಹೇಳಲಿ, ಅವರು, ಕುಮಾರಸ್ವಾಮಿಯವರು ಮಾತನಾಡುತ್ತಿರುವುದಕ್ಕೆ yield ಆಗಿ ಎಂದು ಹೇಳಿದರೆ ಹೊರತು, (ಗೊಂದಲ)......................

ಶ್ರೀ ಅರವಿಂದ ಲಿಂಬಾವಳಿ: ಮಾಜಿ ಪ್ರಧಾನಮಂತ್ರಿಗಳು ರಾಷ್ಟ್ರೀಯ ನಾಯಕರು, ಅವರು ಹೇಳುವುದರಿಂದ ಇಡೀ ರಾಷ್ಟ್ರದ ಮೇಲೆ ಪರಿಣಾಮವಾಗುತ್ತದೆ, ಅದಕ್ಕಾಗಿ ನಾನು ಹೇಳಿದೆ ಅಷ್ಟೆ, ರೇವಣ್ಣನವರಾಗಲಿ ಬೇರೆಯವರಾಗಲಿ ಹೇಳಿದ್ದರೆ, ನಾನು ಈ ವಿಷಯವನ್ನು ಗಂಭೀರವಾಗಿ ತೆಗದುಕೊಳ್ಳುತ್ತಿರಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ಅಧ್ಯಕ್ಷರೆ, ಅರವಿಂದ ಲಿಂಬಾವಳಿಯವರು ವರ್ಗಾವಣೆಯ ಬಗ್ಗೆ ಹೇಳಿದರು, ಕಳೆದ 48 ದಿವಸಗಳಿಂದ ವರ್ಗಾವಣೆಗಳೇನಾಗಿವೆ ಅದರ ಬಗ್ಗೆ ಒಂದು ದಿವಸ ಚರ್ಚೆ ಮಾಡಲು ನಾವು ತಯಾರಿದ್ದೇವೆ. ಅವರು ತಯಾರಿದ್ದಾರಾ ಕೇಳಿ, ಆಯಿತೆಂದರೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಸ್ವಾಮಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುವುದೇನೆಂದರೆ, ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡಿದಾಗಲೆ ರಾಜ್ಯ ಮಟ್ಟದ ನಾಯಕರುಗಳು, ರಾಷ್ಟ್ರ ಮಟ್ಟದ ನಾಯಕರುಗಳೆಂಬ ಪದವನ್ನು ಬಳಸಿದೆ. ಯಾರ್ಯಾರು ಯಾವ್ಯಾವ ಹೇಳಿಕೆಗಳನ್ನು ಕೊಟ್ಟಿದ್ದಾರೆ? ನಾನು ಯಾರ ಹೆಸರನ್ನು ಹಿಡಿದು ಇಲ್ಲಿ ಮಾತನಾಡುತ್ತಿಲ್ಲ. ನಾನು ಆ ವಿಷಯದ ಬಗ್ಗೆ ಚರ್ಚೆ ಮಾಡುವುದಿಲ್ಲವೆನ್ನುವ ವಿಷಯವನ್ನು ಹೇಳಿದ್ದೇನೆ. ಇವತ್ತು ಗೃಹಸಚಿವರು ಮತ್ತು ಮುಖ್ಯಮಂತ್ರಿಗಳು ಈ ಸದನಕ್ಕೆ ಉತ್ತರ ಕೊಡುವ ಜವಾಬ್ದಾರಿಯುಳ್ಳವರು, ಈ ರಾಜ್ಯದ ಐದೂವರೆ ಕೋಟಿ ಜನರಿಗೆ ಉತ್ತರ ಕೊಡುವ ಜವಾಬ್ದಾರಿಯಲ್ಲಿರತಕ್ಕಂಥವರು. ಇವೊತ್ತು ನಿಮ್ಮ ರಾಷ್ಟ್ರೀಯ ಪಕ್ಷದ ನಾಯಕರುಗಳು ಏನು ಹೇಳಿಕೆಗಳನ್ನು ಕೊಟ್ಟಿದ್ದಾರೆ ಅದನ್ನು ಇಲ್ಲಿ ನಾನು ಚರ್ಚೆ ಮಾಡುತ್ತಿಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಮಾಜಿ ಪ್ರಧಾನ ಮಂತ್ರಿಗಳು ಯಾವ ದೃಷ್ಟಿಯಿಂದ ಹೇಳಿಕೆ ಕೊಟಿದ್ದಾರೆ ಅದು ಅವರಿಗೆ ಸೇರಿದ ವಿಷಯ. ಅವರ ವಿಷಯವನ್ನು ಇಲ್ಲಿ ನಾವು ಪ್ರಸಾಪ ಮಾಡುವುದಕ್ಕಾಗುವುದಿಲ್ಲ, ಅವರು ನಿಮ್ಮ ಮಾತುಗಳಿಗೆ ಸ್ಪಷ್ಟೀಕರಣ ಕೊಡುವುದಕ್ಕೆ ಅವರು ಈ ಸದನಕ್ಕೆ ಬರುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ನಾನು ನನ್ನ ಮಾತನ್ನು ಸೀಮಿತಗೊಳಿಸಿದ್ದು, ಕೇಂದ್ರ ಸಚಿವರು ಕೊಟ್ಟಿರುವ ಹೇಳಿಕೆ, ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆ ಹಾಗೂ ಗೃಹ ಮಂತ್ರಿಗಳು ಕೊಟ್ಟಿರುವ ಹೇಳಿಕೆಗಳಿಗೆ ನಾನು ಸೀಮಿತವಾಗಿರುವುದು, ಅದನ್ನು ತಾವು ತಮ್ಮ ಗಮನಕ್ಕೆ ತೆಗೆದುಕೊಂಡರೆ ಸೂಕ್ತವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅಧ್ಯಕ್ಷ ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಚಟುವಟಿಕೆಗಳು ಪ್ರಾರಂಭವಾಗಿವೆ. ಒಂದು ಕಡೆ ನಮ್ಮ ರಾಜ್ಯ, ಅದರಲ್ಲೂ, ಬೆಂಗಳೂರು ನಗರ, ವೇಗವಾಗಿ ಬೆಳೆಯುತ್ತಿರುವ, ವಿಶ್ವಮಟ್ಟದಲ್ಲಿ ಹಲವಾರು ಪ್ರತಿಷ್ಠಿತ ನಗರಗಳಿಗೆ ಪೈಪೋಟಿ ಕೊಟ್ಟು ಬೆಳೆಯುತ್ತಿರುವ, ಈ ನಗರದ ಮೇಲೆ ವಿಶ್ವವೇ ಗಮನಸೆಳೆದಿರುವ ಸಂದರ್ಭದಲ್ಲಿ, ಇತ್ತೀಚಿನ ವರ್ಷಗಳಲ್ಲಿ ಈ ಚಟುವಟಿಕೆಗಳು ಪ್ರಾರಂಭವಾಗಿವೆ, ಇದರಲ್ಲಿ ನಾವು ರಾಜಕೀಯಕ್ಕಿಂತ ಹೆಚ್ಚಾಗಿ ಮಾನವೀಯ ಮೌಲ್ಯಗಳನ್ನು ನಾವೇನು ಬೆಳೆಸಿಕೊಳ್ಳಬೇಕಾಗಿದೆ, ಅದು ಮುಖ್ಯವಾಗಿದೆ. ಇವತ್ತು ಸದನದ ಸದಸ್ಯರುಗಳೆಲ್ಲಾ ಚರ್ಚೆಮಾಡಿದ್ದಾರೆ, ಪೊಲೀಸ್ ಇಲಾಖೆಗೆ ಯಾವರೀತಿಯಾಗಿ ಸಮಗ್ರವಾಗಿ ಸೌಲಭ್ಯಗಳನ್ನು ಕೊಡುವುದರ ಮುಖಾಂತರ ಈ ರೀತಿಯ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಷಯಗಳ ಬಗ್ಗೆ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ, ರೋಷನ್ ಬೇಗ್ ಅವರು ಹಿಂದೆ ಗೃಹ ಸಚಿವರಾಗಿ 4 ವರ್ಷ ಕೆಲಸ ಮಾಡಿದ್ದಾರೆ.

ಅವರಿಗಾದ ಅನುಭವಗಳು, ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಇನ್ನು ಹಲವಾರು ಸೌಲಭ್ಯಗಳನ್ನು ಒದಗಿಸುವುದಕ್ಕೆ ವಿನಿಯೋಗ ಮಾಡದಿರುವ ವಿಷಯವನ್ನೇನು ಪ್ರಸ್ತಾಪ ಮಾಡಿದ್ದಾರೆ, ಆ ವಿಷಯಗಳನ್ನು ನಾನು ಪುನಃ ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಆಕಸ್ಮಿಕವಾಗಿ ಈ ರಾಜ್ಯದಲ್ಲಿ ಆಡಳಿತ ಪಕ್ಷಗಳ ಸದಸ್ಯರುಗಳ ಸಹಕಾರದಿಂದ ಈ ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಿ ಕೆಲಸ ಮಾಡತಕ್ಕಂತಹ ಒಂದು ಅವಕಾಶ ನನಗೆ ಒದಗಿ ಬಂದಿತ್ತು. ಆ ಸಂದರ್ಭದಲ್ಲಿ ಕೆಲವು ಘಟನೆಗಳಾಗಿವೆ. ಹಿರಿಯ ಸದಸ್ಯರಾದ ನಮ್ಮ ಶಿವಕುಮಾರ್‌ರವರು, ರಾಜ್‌ಕುಮಾರ್‌ರವರ ಘಟನೆಯನ್ನು ಸ್ಮರಿಸಿಕೊಂಡರು. ಆವೊತ್ತಿನ ಸನ್ನಿವೇಶಕ್ಕೂ ಈಗ ನಡೆಯುತ್ತಿರತಕ್ಕಂಥಹ ಈ ಘಟನೆಗೂ ಸಂಬಂಧ ಇರದೇ ಇರುವುದು. ಆದರೆ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿಂದಲೇ ವಿಶೇಷವಾಗಿ ಈ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಯಾವ ರೀತಿ ಉಗ್ರರ ಚಟುವಟಿಕೆಗಳು ಆಗಬಹುದು ಎನ್ನತಕ್ಕಂಥದ್ದು ಏನು ಪ್ರಾರಂಭವಾಯಿತು, ನಂತರ ನಾನು ಮುಖ್ಯ ಮಂತ್ರಿಯಾದಾಗ ತೆಗೆದುಕೊಂಡ ಕ್ರಮಗಳ ಬಗ್ಗೆ ಸದನದ ಗಮನಕ್ಕೆ ತರಲು ಬಯಸುತ್ತೇನೆ. ಇಲ್ಲಿ ಮಾನ್ಯ ಎಂ.ಪಿ. ಪ್ರಕಾಶ್ ರವರು ಇವತ್ತು ಸದನದ ಸದಸ್ಯರಾಗಿಲ್ಲ. ಆವತ್ತು ಆ ಭಾಗದಲ್ಲಿ ಗೃಹ ಸಚಿವರಾಗಿ ಕೆಲಸ ಮಾಡುತ್ತಿದ್ದರು. ಹಲವಾರು ಸಭೆಗಳಲ್ಲಿ ಮಾನ್ಯ ಗೃಹ ಸಚಿವರೂ ನಾನು ಕುಳಿತು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಈ ಇಲಾಖೆ ಯಶಸ್ವಿಯಾಗಿ ಸದೃಢವಾಗಿ ಕೆಲಸ ನಿರ್ವಹಿಸತಕ್ಕಂಥದ್ದಕ್ಕೆ ಯಾವ ಯಾವ ರೀತಿಯ ಸೌಲಭ್ಯಗಳು ಸರ್ಕಾರದಿಂದ ಬೇಕಾಗಿವೆ, ನಮಗೆ ಸಿಬ್ಬಂದಿಗಳ ಕೊರತೆ ಏನಿದೆ, ಆ ಕೊರತೆಯನ್ನು ಇವತ್ತು ತಕ್ಷಣ ತುಂಬಿಕೊಳ್ಳತಕ್ಕಂಥದ್ದಕ್ಕೆ ಸರ್ಕಾರ ಅವಕಾಶ ಕೊಡಬೇಕೆಂದು ಎಲ್ಲಾ ರೀತಿಯ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಇಲ್ಲಿ ಮಾನ್ಯ ರೇವಣ್ಣನವರು ಚರ್ಚೆ ಮಾಡಬೇಕಾದರೆ ಯಾವುದೋ ಒಂದು ಪತ್ರಿಕೆಯಲ್ಲಿ ಗಮನಿಸಿದೆ. ಉಗ್ರರ ನಿಗ್ರಹ ಮಾಡತಕ್ಕಂತಹ ದಳದಲ್ಲಿ ಕೇವಲ ಐದು ಜನ ಸಿಬ್ಬಂದಿಗಳು ಎಂದು ಇಲ್ಲಿ ನಾನು ಒಂದು ವರದಿ ನೋಡಿದೆ. ಇವತ್ತು ಈ ರೀತಿಯ ವ್ಯವಸ್ಥೆ ಇದೆ. intelligence ವಿಷಯದಲ್ಲಿ ಕೆಲವರು ಚರ್ಚೆ ಮಾಡುತ್ತಾರೆ. ಬೇಹುಗಾರಿಕೆ ಇಲಾಖೆ ಇವತ್ತು ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಲ್ಲ. ಸರ್ಕಾರ ಅಸಮರ್ಥವಾಯಿತು ಎನ್ನುವ ಮಾತನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ನಾವು ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಸ್ಥೀಮಿತ ಮಾಡಿದರೆ ಎಲ್ಲೋ ಒಂದು ಕಡೆ ನಾವೆಲ್ಲ ಒಂದು ಸಂಕುಚಿತ

ಮನೋಭಾವದಲ್ಲಿರತಕ್ಕಂತಹ ಮನೋಭಾವದವರು ಎನ್ನತಕ್ಕಂತಹ ಭಾವನೆಯಲ್ಲಿ ಜನ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಹಾಗಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಇಲ್ಲಿರುವವರು ನಾಳೆ ಅಧಿಕಾರ ನಡೆಸಬಹುದು. ಇವತ್ತು ಅಧಿಕಾರವನ್ನು ನಡೆಸತಕ್ಕಂತಹ ಸಂದರ್ಭದಲ್ಲಿ ಯಾವುದೇ ಸರ್ಕಾರಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನತಕ್ಕಂಥಹ ಅಭಿಪ್ರಾಯಗಳು ಇದ್ದೂ ಆ ರೀತಿಯ ಒಂದು ಹೆಚ್ಚೆಯಲ್ಲಿ ಮುಂದುವರೆಯುತ್ತಿದ್ದರೂ ಇಂತಹ ಘಟನೆಗಳು ಏನಾಗುತ್ತಿವೆ, ಮಾಹಿತಿಗಳನ್ನು ಕೊಡತಕ್ಕಂಥದ್ದಕ್ಕೆ ಗುಪ್ತಚರ ಇಲಾಖೆ ಯಶಸ್ವಿಯಾಗಲಿಲ್ಲ. ವಿಫಲರಾಗಿದ್ದಾರೆ ಎನ್ನತಕ್ಕಂಥದ್ದನ್ನು ಕೆಲವರು ಚರ್ಚೆ ಮಾಡಿದ್ದಾರೆ, ಕೆಲವರು ಮಾತನಾಡಿರುವುದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಆದರೆ ಅಧ್ಯಕ್ಷರೆ, 20 ತಿಂಗಳ ಅವಧಿಯಲ್ಲಿ ನನಗೆ ಆದಂತಹ ಅನುಭವ ಗುಪ್ತಚರ ಇಲಾಖೆಯನ್ನು ನಾವೇನಾದರೂ ದೊಡ್ಡ ಮಟ್ಟದ International standard ನಲ್ಲಿ ಆ ಸಂಸ್ಥೆಯನ್ನು ನಾವು ಉಳಿಸಿದ್ದೇವಾ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಈ ಭಯೋತ್ಪಾದನೆ ಚಟುವಟಿಕೆ ಕರ್ನಾಟಕ ರಾಜ್ಯಕ್ಕೆ ಸ್ಥಿಮಿತ ಆಗಿರತಕ್ಕಂತಹ ಘಟನೆ ಅಲ್ಲ. This is not confined to only Karnataka. This is world problem now. ಜಗತ್ತಿನಾದ್ಯಂತ ಈ ಉಗ್ರರ ಭಯೋತ್ಪಾದನಾ ಚಟುವಟಿಕೆಗಳು ಏನು ನಡೆಯುತ್ತಿವೆ, ಇವೊತ್ತು ಎಷ್ಟೇ ನೀವು ಯಶಸ್ವಿಯಾಗಿ ಗುಪ್ತಚರ ಮತ್ತು ಬೇಹುಗಾರಿಕೆ ಸಂಸ್ಥೆ ಕೆಲಸವನ್ನು ಮಾಡಿದರೂ, ವಿಶ್ವದಲ್ಲಿ ದೊಡ್ಡಣ್ಣನ ಸ್ಥಾನದಲ್ಲಿರತಕ್ಕಂತಹ ಅಮೇರಿಕಾ ದೇಶದಲ್ಲಿ ನಡೆದಂತಹ ಒಂದು ಘಟನೆ World Trade Centre ನ ಮೇಲೆ ನಡೆದಂತಹ ವಿಮಾನದ ದಾಳಿಯಿಂದ ಅಲ್ಲಿ ಆದಂತಹ ಘಟನೆ ಎನಿದೆ, ಇಂತಹ ದೊಡ್ಡ ದೊಡ್ಡ ರಾಷ್ಟ್ರಗಳಲ್ಲೇ ಈ ರೀತಿಯಾದ ಘಟನೆಗಳ ಮಾಹಿತಿಯನ್ನು ಪಡೆಯತಕ್ಕಂಥದ್ದರಲ್ಲಿ ಯಶಸ್ವಿಯಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಒಂದು ಕಡೆ ನಾವು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು, ಕಟ್ಟು ನಿಟ್ಟಿನ ರೀತಿಯಲ್ಲಿ ಕೆಲಸ ಮಾಡತಕ್ಕಂಥದ್ದು ಮಾಡುವುದು ಯಾವುದೇ ಸರ್ಕಾರಗಳ ಕರ್ತವ್ಯ ಇದೆ. ಬೆಂಗಳೂರಿನಲ್ಲಿ ಆದಂತಹ ಘಟನೆ ಮಾರನೇ ದಿವಸ ಗುಜರಾತಿನಲ್ಲಿ ಆಯಿತು. ಬೇರೆ ಬೇರೆ ರೀತಿಯ ಘಟನೆಗಳು ಇಡೀ ರಾಷ್ಟ್ರದಲ್ಲಿ ಏನಾಗುತ್ತಿವೆ, ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಮಾನ್ಯ ರೋಷನ್ ಬೇಗ್ ರವರು ಹೇಳಿದರು. ಪೋಟಾ ಕಾಯಿದೆ ಅನ್ನುತ್ತಿದ್ದ ಹಾಗೆ ಆ ಭಾಗದಿಂದ ಟೇಬಲ್ ಕುಟ್ಟುತ್ತಿದ್ದರು. ಇವತ್ತು ಯಾವುದೇ ಕಾಯಿದೆಗಳನ್ನು ನಾವು ತರುವುದರ ಮುಖಾಂತರ ಈ ಘಟನೆಗಳನ್ನು ಹದ್ದುಬಸ್ತಿನಲ್ಲಿ ಇಡುತ್ತೇವೆ ಎನ್ನತಕ್ಕಂಥದ್ದು ನನ್ನ ಮಟ್ಟಿಗೆ ಹೇಳುವುದಾದರೆ

ಅದು ಸಾಧ್ಯವಿಲ್ಲ. ನಾವು ಸರ್ಕಾರದವರು ಎಷ್ಟೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡರೂ ಎಷ್ಟೇ ರೀತಿಯಲ್ಲಿ ಸರ್ಕಾರದಲ್ಲಿ ಅಧಿಕಾರಿಗಳಿಗೆ ಸೌಲಭ್ಯಗಳನ್ನು ಒದಗಿಸಿ ಕೊಟ್ಟರೂ ಇಂತಹ ಘಟನೆಗಳನ್ನು ನಾವು ನಿಲ್ಲಿಸಬೇಕಾದರೆ, ಈ ಸಮಾಜಗಳಲ್ಲಿ ಈ ಧರ್ಮಗಳಲ್ಲಿ ಇರತಕ್ಕಂತಹ ವೈಮನಸ್ಸುಗಳು ಏನಿವೆ ಈ ವೈಮನಸ್ಸುಗಳನ್ನು ಇವೊತ್ತು ಸರಿಯಾದ ರೀತಿಯಲ್ಲಿ ಸಹೋದರ ಮನೋಭಾವದಲ್ಲಿ ತರಕ್ಕಂತಹ ವಾತಾವರಣವನ್ನು ನಿರ್ಮಾಣ ಮಾಡದೆ ಇದ್ದರೆ ನಾವು ಪೋಲೀಸ್ ಇಲಾಖೆಗೆ ಯಾವುದೇ ರೀತಿಯ ಶಕ್ತಿಯನ್ನು ತುಂಬಿದರೂ ಅಧಿಕಾರಿಗಳು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಲ್ಲ. ವಾಸ್ತಾವಾಂಶವನ್ನು ಈ ಸದನದ ಮುಂದೆ ಇಡಲಿಕ್ಕೆ ಬಯಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಏತಕ್ಕೋಸ್ಕರವಾಗಿ ಈ ರೀತಿಯ ಘಟನೆಗಳು ಇತ್ತೀಚೆಗೆ ಪ್ರಾರಂಭವಾಗಿವೆ, ಇದರ ಬಗ್ಗೆ ನಾನು ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಒಂದು ಬಾರಿ ಬಾಂಬೆಯಲ್ಲಿ blast ಆಯಿತು. ಅಲ್ಲಿ ಒಬ್ಬರು ನಾಯಕರು ಹೇಳಿದರು. ಹಿಂದೂಗಳು ನಾವೆಲ್ಲಾ ಆತ್ಮಾಹುತಿ ದಳವನ್ನು ನಿರ್ಮಾಣ ಮಾಡಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಇದರಿಂದ ನಾವು ಈ ರಾಜ್ಯದಲ್ಲಿ ದೇಶದಲ್ಲಿ ಶಾಂತಿಯನ್ನು ತರಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ಭಾಗದಲ್ಲಿ ಒಂದು ಸಂಘಸಂಸ್ಥೆಯವರು ಹೇಳುತ್ತಾರೆ, ನಾವು ತ್ರಿಶೂಲಗಳನ್ನು ಕೊಟ್ಟು ರಕ್ಷಣೆಯನ್ನು ಪಡೆಯತಕ್ಕಂಥದ್ದಕ್ಕೆ ಟ್ರೈನಿಂಗ್ ಮಾಡಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಕೆಲವರು ಹೇಳುತ್ತಾರೆ. ಈ ರೀತಿಯ ಸಂಘಟನೆಗಳಿಗೆ, ಈ ರೀತಿಯ ವಾತಾವರಣ ನಿರ್ಮಾಣ ಮಾಡತಕ್ಕಂಥದ್ದಕ್ಕೆ ರಾಜಕೀಯ ಪಕ್ಷಗಳು ನಾವುಗಳೇ ಏನು ಪ್ರೇರೇಪಣೆಯನ್ನು ಕೊಡುತ್ತಿದ್ದೇವೆ, ನಮ್ಮಲ್ಲಿರತಕ್ಕಂತಹ ಹುಳುಕುಗಳನ್ನು ಮೊದಲು ಸರಿಮಾಡಿಕೊಳ್ಳಬೇಕಾಗುತ್ತದೆ. ಆಗ ಈ ರಾಜ್ಯದಲ್ಲಿ ಶಾಂತಿಯನ್ನು ತರಲಿಕ್ಕೆ ಸಾಧ್ಯ. ಈ ದೇಶದಲ್ಲಿ ಶಾಂತಿಯನ್ನು ತರಲಿಕ್ಕೆ ಸಾಧ್ಯ ಅಧ್ಯಕ್ಷರೆ, ಪೋಟಾ ಕಾಯಿದೆ ಇದ್ದಂತಹ ಸಂದರ್ಭದಲ್ಲಿ ಪಾರ್ಲಿಮೆಂಟಿನ ಮೇಲೆ ದಾಳಿ ನಡೆಯಿತು, ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಮಾಧ್ಯಮಗಳಲ್ಲಿ ಗಮನಿಸಿದೆ. ಗುಜರಾತಿನಲ್ಲಿ ಬ್ಲಾಸ್ಟ್ ಆದ ತಕ್ಷಣ ಜನರು ಗಾಬರಿಯಾಗಿ ಎಲ್ಲಿ ಅವರ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಸರ್ಕಾರಕ್ಕಿಂತ ಮುಂಚೆಯೇ ಎಲ್ಲಾ ಸಮಾಜಗಳು ಸೇರಿ ಯಾವುದೇ ರೀತಿಯ ಅಂಗಡಿಗಳನ್ನು ಮುಚ್ಚುವುದಕ್ಕಾಗಲಿ, ಬಂದ್ ಆಚರಣೆ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಜನರಲ್ಲಿ ಧೈರ್ಯವನ್ನು ತುಂಬತಕ್ಕಂತಹ ಕೆಲಸವನ್ನು ಮಾಡಬೇಕೆಂದು ಹೇಳಿ, ಹಿಂದೂ ಮತ್ತು ಮುಸಲ್ಮಾನ

ಸಮಾಜದ ಮುಖಂಡರುಗಳು ಸೇರಿ ತಕ್ಷಣವೇ ಕ್ರಮ ತೆಗೆದುಕೊಳ್ಳತಕ್ಕಂತಹ ಕೆಲಸವನ್ನು ಏನು ಮಾಡಿದ್ದಾರೆ, ಅದನ್ನು ನಿಜಕ್ಕೂ ಅಭಿನಂದಿಸುತ್ತೇನೆ. ಆ ರೀತಿಯ ವಾತಾವರಣ ನಿರ್ಮಾಣ ಮಾಡುವಂತದ್ದೂ ನಮ್ಮೆಲ್ಲರ ಕರ್ತವ್ಯ ಇದೆ ಎಂದು ಇವತ್ತು ಈ ಸದನದ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಗುಪ್ತಚರ ಇಲಾಖೆ ವಿಷಯದಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರಲ್ಲಿ ಮನವಿ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಗುಪ್ತಚರ ಇಲಾಖೆಯ ಈಗಿರತಕ್ಕಂತಹ ವ್ಯವಸ್ಥೆಯನ್ನು ನಾವು ಯಾವ ಮಟ್ಟಕ್ಕೆ ಇಟ್ಟಿಕೊಂಡಿದ್ದೇವೆ? ಇಲ್ಲಿ ಮಾನ್ಯ ರೋಷನ್ ಬೇಗ್‌ರವರು ಹೇಳುತ್ತಿದ್ದರು. ಯಾರೋ ತಹಶೀಲ್ದಾರ್ ಹತ್ತಿರ, ಸಂಜೆ ವಾಣಿ ಅಥವಾ ಈ ಸಂಜೆ ಪತ್ರಿಕೆಯಲ್ಲೋ ಯಾವುದರಲ್ಲೋ ಬರತಕ್ಕಂತಹ ವರದಿಯನ್ನು ಬೆಳಿಗ್ಗೆ ಆರು ಗಂಟೆಗೆ ಒಂದು ಸೀಲ್ಡ್ ಕವರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕಛೇರಿಗೆ ತಲುಪಿಸಿರುತ್ತಾರೆ. ಆ ವಿಷಯ ಅವರು ಕೊಡುವುದಕ್ಕಿಂತ ಮುಂಚೆಯೇ ಘಟನೆಗಳು ನಡೆದಿದೆ ಎಂದು ನಮಗೆ ಗೊತ್ತಿರುತ್ತವೆ. ಏನೇನು ವಾಸ್ತವಾಂಶ ಇದೆ ಎನ್ನತಕ್ಕಂಥದ್ದು ಗೊತ್ತಿರುತ್ತದೆ. ಅದರ ಜೊತೆಗೆ ಈ Intelligence ವ್ಯಾಪ್ತಿಯನ್ನು ಎಲ್ಲಿಗೆ ನಾವು ಮೊಟುಕುಗೊಳಿಸಿದ್ದೇವೆ, ಯಾವ ಮಟ್ಟಕ್ಕೆ ಬೆಳೆಸಿದ್ದೇವೆ ಎಂದರೆ ರಾಜಕಾರಣದ ಚಟುವಟಿಕೆಗಳು ಯಾವ ರೀತಿ ನಡೆಯುತ್ತಿವೆ, ಯಾವ ಅಧಿಕಾರಿ ಯಾವ ವಿರೋಧ ಪಕ್ಷದ ನಾಯಕನ ಮನೆಯ ಮುಂದಿದ್ದಾನೆ, ಯಾರನ್ನು ಭೇಟಿ ಮಾಡಿದ್ದ, ಯಾವ ಶಾಸಕರು ಯಾರನ್ನು ಭೇಟಿ ಮಾಡಿದ್ದರು, ಎಂಬ ಮಾಹಿತಿಗಳನ್ನು ಇವತ್ತು ಸಂಗ್ರಹ ಮಾಡತಕ್ಕಂಥದ್ದಕ್ಕೆ ಈ ಇಲಾಖೆಯನ್ನು ನಾವು ಮೊಟಕುಗೊಳಿಸಿದ್ದೇವೆ. ಆ ದೃಷ್ಟಿಯಿಂದ ರಾಜಕೀಯ ಬೆಳವಣಿಗೆಗಳ ವಿಷಯಗಳನ್ನು ಸಂಗ್ರಹ ಮಾಡತಕ್ಕಂಥದ್ದಕ್ಕೆ ಈ ವಿಂಗ್ ಅನ್ನು ಸೆಪರೇಟಾಗಿ ಇಟ್ಟುಕೊಳ್ಳಿ. ಪೊಲೀಸ್ ಇಲಾಖೆಯಿಂದ ಬೇರ್ಪಡಿಸಿ ಈ ಬೇಹುಗಾರಿಕೆ ಸಂಸ್ಥೆಯನ್ನು ದೊಡ್ಡ ಮಟ್ಟದಲ್ಲಿ ಪುನರ್‌ನವೀಕರಣ ಮಾಡಬಾರದು ಸರ್ಕಾರದ ಪ್ರಮುಖವಾದ ಅಂಶ ಎಂದು ಹೇಳುವುದಕ್ಕೆ ಬಯಸುತ್ತೇನೆ. ಯಾವ ಕಾರಣಕ್ಕೋಸ್ಕರ ನಾನು ಹೇಳುತ್ತಿದ್ದೇನೆಂದರೆ, ಇವೊತ್ತು ಆ Intelligence Deapartment ಗೆ ಯಾವುದಾದರೂ ಒಬ್ಬ ಕೆಳಮಟ್ಟದ ಅಧಿಕಾರಿಯನ್ನು ನೀವು ಹಾಕತಕ್ಕಂತಹ ಕೆಲಸ ಮಾಡಿದರೆ, God fatherಗಳು ಇಲ್ಲದೆ ಇರತಕ್ಕಂತಹ ಅಧಿಕಾರಿಗಳಿದ್ದಾರೆ ನಾನು ಈ ಸಂದರ್ಭದಲ್ಲಿ ಜಾತಿ ಹೆಸರಿನಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. Influence ಮಾಡಿ ಪ್ರಮುಖವಾದ ಸ್ಥಳಗಳಿಗೆ ಹೋಗತಕ್ಕಂಥದ್ದಕ್ಕೆ ಶಕ್ತಿ ಇಲ್ಲದೆ ಇರತಕ್ಕಂತಹ ಅಧಿಕಾರಿಗಳು ಯಾರಿದ್ದಾರೆ, ಅಂತಹ ಕೆಳಹಂತದ ಅಧಿಕಾರಿಗಳನ್ನು ಇವತ್ತು ಆ ಗುಪ್ತಚರ ಇಲಾಖೆಗೆ

ನಾವು ವರ್ಗಾವಣೆ ಮಾಡುತ್ತೇವೆ. ಅವರು 10 ರಿಂದ 20 ವರ್ಷಗಳವರೆಗೆ ಅದೇ ಇಲಾಖೆಯಲ್ಲಿರುತ್ತಾರೆ. ಅವರಿಗೆ ಪ್ರಮುಖವಾದ ಸ್ಥಳಗಳನ್ನೂ ಕೊಟ್ಟಿರುವುದಿಲ್ಲ. ಅವರಿಗೆ ಅವರ ಕುಟುಂಬದ ಸಮಸ್ಯೆಯನ್ನು ನೋಡಿಕೊಳ್ಳವುದಕ್ಕೇ ಸಮಯ ಇರುವುದಿಲ್ಲ. ಅವರ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಳ್ಳುವುದಕ್ಕೇ ಸಮಯ ಇರುವುದಿಲ್ಲ. ಈ ರಾಜ್ಯದಲ್ಲಿ ದೇಶದಲ್ಲಿ ನಡೆಯತಕ್ಕಂತಹ ಘಟನೆಗಳ ಬಗ್ಗೆ ಗಮನ ಹರಿಸುವುದಕ್ಕೆ ಆ ಸಣ್ಣ ಪುಟ್ಟ ಅಧಿಕಾರಿಗಳಿಗೆ ಎಲ್ಲಿ ಸಮಯ ಇರುತ್ತದೆ? ಕೆಲಸ ಮಾಡತಕ್ಕಂತಹ ಅಧಿಕಾರಿಗಳು ಮಾನಸಿಕವಾಗಿ ಕುಗ್ಗಿ ಹೋಗಿರುತ್ತಾರೆ. ಆ ದೃಷ್ಟಿಯಿಂದ ಮಾನ್ಯ ದಿನೇಶ್ ಗುಂಡೂರಾವ್ ರವರು ಹೇಳುತ್ತಿದ್ದರು. ಅವರೂ ಕೆಲವೊಂದು ವಾಸ್ತವಾಂಶಗಳಿಗೆ ಸದನದ ಗಮನ ಸೆಳೆದಿದ್ದಾರೆ. ಈ ಇಲಾಖೆಗಳಿಗೆ ಯಾವ ರೀತಿ ಸೌಲಭ್ಯಗಳನ್ನು ಕೊಡಬೇಕೆಂಬುದರ ಬಗ್ಗೆ, ಈ Intelligence ಇಲಾಖೆಯನ್ನು ಪ್ರತ್ಯೇಕ ಮಾಡಿ, ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳಿಗೆ ಹೆಚ್ಚಿನ ಸ್ಯಾಲರಿಯನ್ನು ಕೊಡತಕ್ಕಂಥದ್ದು, incentive ಕೊಡತಕ್ಕಂಥದ್ದು, ಆ ರೀತಿಯ ವ್ಯವಸ್ಥೆಯನ್ನು ತಂದಾಗ ಮಾತ್ರ ಸಮರ್ಪಕವಾಗಿ Intelligence ಇಲಾಖೆ ಕೆಲಸ ಮಾಡತಕ್ಕಂಥದ್ದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಗಮನಕ್ಕೆ ತರುತ್ತಾ, ಹಿಂದಿನ ಸರ್ಕಾರದಲ್ಲಿ ನಮ್ಮ ಅಧಿಕಾರಿಗಳ ಹಲವಾರು ಸಭೆಗಳನ್ನು ಮಾಡಿದಂತಹ ಸಂದರ್ಭದಲ್ಲಿ ನಮ್ಮ ಇಲಾಖೆಗೆ ಯಾವ ರೀತಿಯ ಸೌಕರ್ಯಗಳು, ಯಾವ ರೀತಿಯ ಹಣದ ವ್ಯವಸ್ಥೆ ಆಗಬೇಕಾಗಿದೆ ಎಂದು ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ಏನು ತಂದಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೇ ಆರ್ಥಿಕ ಸಚಿವರಾಗಿರುವುದಿರಂದ ಆ ಇಲಾಖೆಯನ್ನು ಸದೃಢಗೊಳಿಸಿ, ಯಶಸ್ವಿಯಾಗಿ ಕೆಲಸವನ್ನು ನಿರ್ವಹಿಸಬೇಕಾದರೆ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ನಾನು ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ... ಇಂಥ ಒಂದು ಘಟನೆಗಳು ಯಾವುದೇ ರಾಜಕೀಯವನ್ನು ಬೆರೆಸತಕ್ಕಂಥದ್ದಕ್ಕೆ ಹೋಗದೆ ಇವೊತ್ತು ಯಾವುದೇ ಸರ್ಕಾರಗಳಿದ್ದರೂ ಕೂಡ ಇವೊತ್ತಿನ ರಾಜಕಾರಣದ ವ್ಯವಸ್ಥೆಯೊಳಗೆ ಮತ್ತು ದೇಶದಲ್ಲಿರತಕ್ಕಂಥ ಇಂಥ ವ್ಯವಸ್ಥೆಯೊಳಗೆ ಇಂಥ ಘಟನೆಗಳು ಆಗತಕ್ಕಂಥದ್ದು ಸಾಮಾನ್ಯ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಆದುದರಿಂದ ಸರ್ಕಾರ ಇವೊತ್ತು ಅಸಮರ್ಥರಾದರು ಮತ್ತು ಅಧಿಕಾರಿಗಳು

ಅಸಮರ್ಥರಾದರು ಎನ್ನತಕ್ಕಂಥ ಮಾತುಗಳಿಂದ ನಾವು ಟೀಕೆಯನ್ನು ಮಾಡುವುದಕ್ಕಿಂತ ಹೆಚ್ಚಾಗಿ ಇಂಥ ಸಮಸ್ಯೆಗಳು ಮರುಕಳಿಸದೇ ಇರತಕ್ಕಂಥದ್ದಕ್ಕೆ ಒಂದು ಕಡೆ ಸರ್ಕಾರದ ಇಲಾಖೆಯನ್ನು ಸದೃಢಗೊಳಿಸತಕ್ಕಂಥ ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿಯ ಘಟನಾವಳಿಗಳಿಗೆ ಪ್ರೋತ್ಸಾಹ ಕೊಡತಕ್ಕಂಥ ಯಾವುದೇ ಶಕ್ತಿಗಳಲ್ಲಿ ಆ ಶಕ್ತಿಗಳನ್ನು ಬಗ್ಗುಬಡಿಯತಕ್ಕಂಥದ್ದಕ್ಕೆ ಒಂದು ಕಡೆ ಸರ್ಕಾರ ಸಮರ್ಥವಾಗಿ ಕೆಲಸವನ್ನು ಮಾಡುವುದರ ಜೊತೆಗೆ ಇವೊತ್ತು ರಾಜಕೀಯ ಪಕ್ಷಗಳು ಮತ್ತು ಅದರ ಜೊತೆಗೆ ಸಂಘ ಸಂಸ್ಥೆಗಳು ಮತ್ತು ಸಮಾಜದಲ್ಲಿರತಕ್ಕಂಥ ವೈಮನಸ್ಸುಗಳೇನಿವೆ ಇಂಥ ವೈಮನಸ್ಸುಗಳನ್ನು ಸರಿಪಡಿಸಿ ಪ್ರತಿಯೊಬ್ಬರಲ್ಲಿಯೂ ಒಂದು ರೀತಿಯ ಸಹೋದರ ಮನೋಭಾವನೆಯನ್ನು ನಿರ್ಮಾಣ ಮಾಡತಕ್ಕಂಥದ್ದಕ್ಕೆ ಕೆಲಸವನ್ನು ಮಾಡುವುದರ ಮುಖಾಂತರ ಈ ರೀತಿಯ ಘಟನೆಗಳು ಈ ರಾಜ್ಯದಲ್ಲಿ ಮರುಕಳಿಸದೇ ಇರತಕ್ಕಂಥ ರೀತಿಯ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥದ್ದಕ್ಕೆ ಸರ್ಕಾರ ಗಮನವನ್ನು ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸರ್ಕಾರದ ಉತ್ತರ.

(ಈ ಹಂತದಲ್ಲಿ ಹಲವಾರು ಸದಸ್ಯರುಗಳು ಮಾತನಾಡಲು ಅವಕಾಶ ಕೊಡಬೇಕೆಂದು ಒಮ್ಮೆಗೆ ಎದ್ದುನಿಂತರು)

ಅಧ್ಯಕ್ಷರು:– ಈಗಾಗಲೇ ಸಾಕಷ್ಟು ಸಮಯವನ್ನು ಚರ್ಚೆಗೆ ಕೊಟ್ಟಿದ್ದೇನೆ. ಸುಮಾರು ಎರಡೂವರೆ ಗಂಟೆಗಿಂತಲೂ ಹೆಚ್ಚು ಸಮಯ ಚರ್ಚೆಯಾಗಿದೆ. ಈಗ ಸರ್ಕಾರ ಮೊದಲು ಉತ್ತರ ಕೊಡಲಿ. ಆಮೇಲೆ ಅದರ ಮೇಲೆ ಕ್ಲಾರಿಫಿಕೇಶನ್ ಕೇಳುವುದಿದ್ದರೆ ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ. ನಾನು ಹೇಳುವುದೇನೆಂದರೆ,

ಅಧ್ಯಕ್ಷರು:– ಶಿವಲಿಂಗೇಗೌಡರೆ, ನಿಮ್ಮ ನಾಯಕರು ಎಲ್ಲದರ ಬಗ್ಗೆಯೂ ಮಾತನಾಡಿದ್ದಾರೆ. ಚರ್ಚೆ ಮಾಡುವ ವಿಷಯಗಳು ಇನ್ನೂ ಬಹಳಷ್ಟಿವೆ. ಈಗ ಸರ್ಕಾರದ ಕಡೆಯಿಂದ ಉತ್ತರವನ್ನು ಮಾನ್ಯ ಗೃಹ ಸಚಿವರು ಕೊಡಿ.

(ಈ ಹಂತದಲ್ಲಿಯೂ ಕೂಡ ಮಾನ್ಯ ಶಿವಲಿಂಗೇಗೌಡರು ಮತ್ತು ಮಾನ್ಯ ನೆ.ಲ. ನರೇಂದ್ರಬಾಬುರವರು ತಮಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ಒಮ್ಮೆಗೆ ಮನವಿ ಮಾಡಿಕೊಳ್ಳುತ್ತಿದ್ದರು.)

ಅಧ್ಯಕ್ಷರು:– ಕೇವಲ ಒಂದು ನಿಮಿಷದಲ್ಲಿ ಹೇಳಿ ಮುಗಿಸಬೇಕು. ಮೊದಲು ಶಿವಲಿಂಗೇಗೌಡರು ಮಾತನಾಡಲಿ. ತದನಂತರ ನರೇಂದ್ರಬಾಬುರವರು ಮಾತನಾಡಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಯಾವ ಹೆಣ್ಣು ಮಗಳು ದುರ್ದೈವಿ ಸತ್ತುಹೋಗಿದ್ದಾಳೆ ಆ ಹೆಣ್ಣುಮಗಳು ನಮ್ಮ ಅರಸೀಕೆರೆ ಕ್ಷೇತ್ರದ ಸಾಲಪುರದ ಮಹಿಳೆ. ಆ ಮಹಿಳೆಗೆ ಹಿಂದೆ ಮದುವೆಯಾಗಿತ್ತು. ಚಿಕ್ಕನಾಯಕನಹಳ್ಳಿ ಅಣ್ಣಿಗೇರಿಗೆ ಮದುವೆ ಮಾಡಿಕೊಟ್ಟಿದ್ದರು. ಆ ಗಂಡನ ಜೊತೆಯ ವೈಮನಸ್ಸಿನಲ್ಲಿ ಆ ಮಹಿಳೆ ಆ ಊರನ್ನು ತ್ಯಜಿಸಿ ಪುನಃ ಅರಸೀಕೆರೆ ತಾಲ್ಲೂಕಿಗೆ ಬಂದು ವಾಸವಾಗಿದ್ದಳು. ಅಂಥ ಸಂದರ್ಭದಲ್ಲಿ ಕೂಲಿಗೋಸ್ಕರ ಕೆಲಸ ಹುಡುಕಿಕೊಂಡು ಇವೊತ್ತು ಅವರ ತಾಯಿಯ ಪೋಷಣೆಯಲ್ಲಿದ್ದುಕೊಂಡೇ ಆ ಮಹಿಳೆ ಬೆಂಗಳೂರು ನಗರಕ್ಕೆ ಬಂದರು. ಇವೊತ್ತೇನು ರವಿ ಎನ್ನತಕ್ಕಂಥವನು ಮಹಿಳೆಗೆ ಎರಡನೆಯ ಗಂಡ ಎಂದು ಹೇಳುತ್ತಿದ್ದೀರಿ, ಆ ಎರಡನೆಯ ಗಂಡನಿಗೂ ಮತ್ತು ಆ ಮಹಿಳೆಗೂ ಸಂಬಂಧವಿರಬಹುದು. ಆದರೆ ಪೋಷಣೆಯನ್ನು ಮಾಡುತ್ತಿದ್ದಂಥವಳು ಅ ಮಹಿಳೆಯ ತಾಯಿ. ಅ ತಾಯಿ ಮೊನ್ನೆ ದಿವಸ ಹೆಣ ತರಬೇಕಾದರೆ ಬೆಂಗಳೂರಿಗೆ ಬಂದು 4 ಸಾವಿರ ರೂಪಾಯಿ ಸಾಲ ಮಾಡಿಕೊಂಡು ಆ ಹೆಣ ತೆಗೆದುಕೊಂಡು ಹೋಗಿ ಅರಸೀಕೆರೆಯಲ್ಲಿ ಅಂತ್ಯಕ್ರಿಯೆ ಮಾಡಿದ್ದಾರೆ, ಆದುದರಿಂದ ನಾನು ಹೇಳುವುದೇನೆಂದರೆ, ಈ ಸರ್ಕಾರದಿಂದ ಘೋಷಣೆ ಮಾಡಿರತಕ್ಕಂಥ ಪರಿಹಾರಕ್ಕಾಗಿ ಈಗ ಅಲ್ಲಿ ಎರಡು ಕಡೆ ಪೈಪೋಟಿ ಪ್ರಾರಂಭವಾಗಿದೆ. ಅದಕ್ಕೋಸ್ಕರ ದಯಮಾಡಿ ಆವೊತ್ತಿನಿಂದ ಇವೊತ್ತಿನವರೆಗೂ ಆ ತಾಯಿ ಈ ಮಹಿಳೆಯನ್ನು ಏನು ಪೋಷಣೆಯನ್ನು ಮಾಡಿಕೊಂಡು ಬಂದಿದ್ದಳೋ ಅವಳಿಗೆ ಪರಿಹಾರದ ಹಣವನ್ನು ಕೊಡಬೇಕು. ಏಕೆಂದರೆ ಅವರದು ಬಹಳ ಬಡ ಕುಟುಂಬ. ಯಾವುದೋ ತೋಟ ಕಾದುಕೊಂಡು ಜೀವನವನ್ನು ಮಾಡುತ್ತಿದ್ದಾಳೆ. ಈಗಾಗಲೇ ಸರ್ಕಾರ ಪರಿಹಾರವನ್ನು ಕೊಡುವುದಾಗಿ ಏನು ಪ್ರಕಟಣೆ ಮಾಡಿದೆ, ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಆವೊತ್ತು ಒಂದು ಲಕ್ಷ ರೂಪಾಯಿಯ ಪರಿಹಾರ ಎಂದು ಹೇಳಿದ್ದಾರೆ, ಬಹುಶಃ ಗೋಲಿಬಾರ್ ಆದ ಕಡೆಯೆಲ್ಲಾ ಪರಿಹಾರವನ್ನು ಎರಡೆರಡು ಲಕ್ಷ ರೂಪಾಯಿ

ಕೊಡುವುದಾಗಿ ಘೋಷಣೆಯನ್ನು ಮಾಡಿ ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿಯೂ ಸಹ ಎರಡು ಲಕ್ಷ ರೂಪಾಯಿಗಳನ್ನು ಆ ಮಹಿಳೆಯ ಕುಟುಂಬಕ್ಕೆ ಕೊಟ್ಟು ....

ಒಬ್ಬ ಮಾನ್ಯ ಸದಸ್ಯರು:– 5 ಲಕ್ಷ ಎಂದು ಹೇಳಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– 5 ಲಕ್ಷ ಎಂದು ಹೇಳಿದ್ದರೆ 5 ಲಕ್ಷ ರೂಪಾಯಿಗಳನ್ನೇ ಕೊಡಿ. ನಾನು ಹೇಳುವ ಮಾಹಿತಿ ತಪ್ಪಾಗಿದ್ದರೆ ನೀವು ಹೇಳಿರುವಂತೆಯೇ 5 ಲಕ್ಷ ರೂಪಾಯಿಗಳನ್ನು ಕೊಡಿ. ದಯಮಾಡಿ ಈ ಪರಿಹಾರದ ಹಣವನ್ನು ಆ ತಾಯಿಗೇ ಕೊಟ್ಟು ಆ ಸಂಸಾರವನ್ನು ಉದ್ಧಾರ ಮಾಡಬೇಕು. ಇವೊತ್ತು ಯಾರೋ ಕೆಲವರು ಮಧ್ಯವರ್ತಿಗಳು ಬಂದು ಆ ರವಿ ಎನ್ನುವವವನಿಗೂ ಏಟಾಗಿದೆ, ಅ ವ್ಯಕ್ತಿ ಸತ್ತ ಮಹಿಳೆ ನನ್ನ ಹೆಂಡತಿ ಎಂದು ಹೇಳಿಕೊಂಡಿದ್ದಾನೆ ಎಂದಿದ್ದಾರೆ. ಅದರೆ ಅದಕ್ಕೆ ಅಗತ್ಯವಾಗ ಆಧಾರವಾಗಿರುವಂಥ ಯಾವ ದಾಖಲಾತಿಗಳೂ ಇಲ್ಲ. ಅಣ್ಣಿಗೇರಿಯ ಮೊದಲನೆಯ ಗಂಡನ ಮನೆಯವರೆಲ್ಲರೂ ಶವಸಂಸ್ಕಾರಕ್ಕೆ ಬಂದಿದ್ದರು. ಆಧಾರ ಇವೊತ್ತಿನ ದಿವಸ ಆ ಮಹಿಳೆ ಸೇರಿದಂತೆ ಮೂರು ಜನ ಹೆಣ್ಣುಮಕ್ಕಳ ಪೋಷಣೆಯನ್ನು ಆ ತಾಯಿ ಮಾಡಿಕೊಂಡು ಬಂದಿದ್ದಾಳೆ, ಆಕೆಗೇ ಸರ್ಕಾರದಿಂದ ದೊರೆಯತಕ್ಕಂಥ ಪರಿಹಾರದ ಹಣವನ್ನು ಕೊಡಬೇಕೆನ್ನುವುದೇ ನನ್ನ ಕಳಕಳಿಯ ಮನವಿ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ (ದಕ್ಷಿಣ):– ಸರಣಿ ಬಾಂಬ್ ಸ್ಫೋಟಗಳು ಯಾವುದಿದೆ. ಅದು ಒಂದು ಮುಖ್ಯವಷ್ಟೇ. ಬಹುಶಃ ಅದರ ಹಿನ್ನೆಲೆಯಲ್ಲಿ ಇರುವಂಥ ಇನ್ನಷ್ಟು ಉಗ್ರಗಾಮಿ ಚಟುವಟಿಕೆಗಳ ಬಗ್ಗೆ ಕೂಡ ಸರ್ಕಾರ ಗಮನ ಹರಿಸಬೇಕು. ಒಂದು ಕಡೆಯಲ್ಲಿ ಹವಾಲ. ಇನ್ನೊಂದು ಕಡೆಯಲ್ಲಿ ಬೇನಾಮಿ ಹೆಸರಿನಲ್ಲಿ ಜಾಗಗಳನ್ನು ಖರೀದಿ ಮಾಡುವಂಥದ್ದು. ಮೂರನೆಯದಾಗಿ ಖೋಟಾ ನೋಟುಗಳ ವಿಸ್ತರಣೆಗೆ ಸಂಬಂಧಪಟ್ಟಂತೆ ಇರುವ ಜಾಲ. ಬಹುಶಃ ಇಂಥ ಅನೇಕ ರೀತಿಯ ದೇಶದ ಮತ್ತು ರಾಜ್ಯದ ಆರ್ಥಿಕ ಸ್ಥಿರತೆಯನ್ನು ಅಸ್ಥಿರಗೊಳಿಸುವಂಥ ಒಂದು ಷಟ್ಯಂತ್ರ ನಡೆಯುತ್ತಿದೆ. ಇವೊತ್ತು ಬೇರೆ ರಾಜ್ಯದ ಹಾಗೂ ಬೇರೆ ರಾಷ್ಟ್ರದಲ್ಲಿ ಆಗಿರುವಂಥ ಉಗ್ರಗಾಮಿ ಚಟುವಟಿಕೆಗಳನ್ನು ಖಂಡಿಸುಂಥ ಸಂದರ್ಭದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಬಹಳ ಅಪಾಯಕಾರಿಯಾಗಿರುವಂಥ ಸನ್ನಿವೇಶಗಳು ಉಂಟಾಗುತ್ತಿರುವುದರ ಬಗ್ಗೆ ನಮ್ಮ ಸರ್ಕಾರ ವಿಶೇಷವಾಗಿ ಕಾರ್ಯಾಚರಣೆ ಮಾಡಬೇಕಾದಂಥ ಅವಶ್ಯಕತೆ ಇದೆ ಎನ್ನುವಂಥ ಮಾತನ್ನು ಕೂಡ ನಾನು ಹೇಳಲಿಚ್ಛಿಸುತ್ತೇನೆ. ಬಹುಶಃ ಇದರ ಬಗ್ಗೆ ಹಿಂದಿನ ಅಧಿವೇಶನದಲ್ಲಿ ನಾವು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಪಾಕಿಸ್ಥಾನ ಕಡೆಯಿಂದ, ಬಾಂಗ್ಲಾದೇಶದ ಕಡೆಯಿಂದ

ಎಷ್ಟೋ ಜನರು ಪ್ರವಾಸಿಗರ ರೂಪದಲ್ಲಿ ಇಲ್ಲಿಗೆ ಬಂದು ಎಷ್ಟು ಜನ ಮಿಸ್ಸಿಂಗ್ ಆಗಿದ್ದಾರೆ, ಎಷ್ಟು ಜನ ಅವ್ಯಕ್ತವಾಗಿ ಬೇರೆ ಬೇರೆ ಕಡೆಗಳಲ್ಲಿ ಇದ್ದಾರೆ ಎನ್ನುವುದರ ಬಗ್ಗೆ ಕೂಡ ಪ್ರಶ್ನೆ ಹಾಕಿ ಇಲ್ಲಿ ಚರ್ಚೆ ನಡೆದಿತ್ತು. ಇದರ ಬಗ್ಗೆ ಕೂಡ ಕೂಲಂಕಷವಾಗಿ ಇವೊತ್ತು ಚರ್ಚೆ ನಡೆಯಬೇಕಾಗಿದೆ. ಮಾನ್ಯ ಅಧ್ಯಕ್ಷರೆ, ತಾವು ಈ ಸಂದರ್ಭದಲ್ಲಿ ನನಗೆ ಸಮಯಾವಕಾಶವನ್ನು ಹೆಚ್ಚು ಕೊಡುತ್ತಿಲ್ಲ. ನಾನು ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಇರುವಂಥ ಸ್ಲೀಪರ್ ಸೆಲ್‌ಗಳ ಬಗ್ಗೆ ವಿಶೇಷವಾದಂಥ ಕಾರ್ಯಾಚರಣೆ ಮಾಡಬೇಕಾದಂಥ ಅವಶ್ಯಕತೆ ಇದೆ ಎಂದು ಹೇಳಬಯಸುತ್ತೇನೆ. ಇದರ ಹಿನ್ನೆಲೆಯಲ್ಲಿರುವಂಥವರಿಗೆ ಆರ್ಥಿಕ ಶಕ್ತಿಯನ್ನು ಕೊಡುತ್ತಿರುವಂಥವರು ಯಾರು? ಆರ್ಥಿಕ ಶಕ್ತಿ ಮಾತ್ರವಲ್ಲ. ಕಾನೂನು ರೀತಿಯಲ್ಲಿ ಕೂಡ ಅವರಿಗೆ ನೆರವು ಕೊಡುವಂಥವರು ಯಾರು? ಬಹುಶಃ ಈ ಬಗ್ಗೆ ತಾವು ಗಮನಿಸಿದ್ದಲ್ಲಿ ಈ ಸರಣಿ ಬಾಂಬ್ ಸ್ಫೋಟದ ಹಿಂದೆ ಇರುವಂಥ ವ್ಯಕ್ತಿಗಳಲ್ಲಿ ಸ್ಥಳೀಯರನ್ನು ಉಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳುವಂಥದ್ದನ್ನು ನಾನು ಎತ್ತಿ ತೋರಿಸುತ್ತಿದ್ದೇನೆ. ಸ್ಥಳಿಯರನ್ನು ಪ್ರಚೋದಿಸಿ ಈ ರೀತಿಯ ಕಾರ್ಯ ಷಡ್ಯಂತ್ರವನ್ನು ಮಾಡಬೇಕು ಎಂದೆ ಅದರ ಹಿಂದೆ ಇರುಂಥ ವ್ಯವಸ್ಥೆಗಳೇನು? ಕೇವಲ ಕೆಲವು ಸಂಘಟನೆಗಳ್ನು ಬ್ಯಾನ್ ಮಾಡಿದ ತಕ್ಷಣ ಆಗುವುದಿಲ್ಲ. ಈ ಬ್ಯಾನ್ ಮಾಡುವುದರ ಜೊತೆ ಜೊತೆಯಲ್ಲಿ ಅವರು ಬೇರೆ ಬೇರೆ ಹೆಸರಿನಲ್ಲಿ ಕಾರ್ಯಾಚರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಕಡೆಯಲ್ಲಿ ಇಡೀ ಒಂದು ಷಡ್ಯಂತ್ರವನ್ನು, ಜಾಲವನ್ನು ಯಾವ ರೀತಿಯಲ್ಲಿ ಮೆಟ್ಟಿ ಹಾಕಬೇಕು ಎಂದು ಹೇಳುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇನ್ನು ಮಾನ್ಯ ಕುಮಾರಸ್ವಾಮಿಯವರು ಹೇಳಿದಂತೆ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಆಂತರಿಕ ಸೇವಾ ಭದ್ರತೆಗೆ ಸಂಬಂಧಪಟ್ಟಂತೆ ಯಾವ ರೀತಿಯಲ್ಲಿ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬ ಬಗ್ಗೆ ವಿಶೇಷವಾಗಿ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಬಹುಶಃ ಎಲ್ಲ ಕಡೆಗಳಲ್ಲಿ ಇದನ್ನು ಸಮರ್ಪಕವಾಗಿ ಮಾಡಲು ಅದಕ್ಕೆ ಬೇಕಾಗುವಂಥ ಎಲ್ಲ ರೀತಿಯ ಶಕ್ತಿಯನ್ನು ಕೊಟ್ಟಾಗ ಮಾತ್ರ ಈ ಒಂದು ಕಾರ್ಯಚರಣೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬಹುಶಃ ಪೊಲೀಸ್ ಇಲಾಖೆಯಿಂದ ಬೇರೆಯಾಗಿರುವ ಇಂಥ ಸೆಲ್ ಅನ್ನು ಮಾಡುವಂಥದ್ದು ಮಾತ್ರವಲ್ಲ, ಮಾನ್ಯ ಅಧ್ಯಕ್ಷರೆ, ಗುಪ್ತಚರ ಇಲಾಖೆಗೆ ಸಂಬಂಧಪಟ್ಟ ಕೆಲವು ಅಧಿಕಾರಿಗಳ ಜೊತೆಯಲ್ಲಿ ನಾನು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಅವರು ಹೇಳುವುದೇನೆಂದರೆ, ನಾವು ವರದಿಗಳನ್ನು ಕಳುಹಿಸುತ್ತಿದ್ದೇನೆ, ಅದರೆ ಯಾರೂ ಕಿವಿಗೆ ಹಾಕಿಕೊಳ್ಳುವುದಿಲ್ಲವೆಂದು ಹೇಳುವಂಥ ಮಾತುಗಳನ್ನು ಕೂಡ ಅವರು ಹೇಳುತ್ತಿದ್ದಾರೆ.

ಬಹುಶಃ ಇದರ ಬಗ್ಗೆ ಕೂಡ ನಾವು ಯೋಚನೆಯನ್ನು ಮಾಡಬೇಕು. ಈ ಸಂದರ್ಭದಲ್ಲಿ ನಮ್ಮ ಸರ್ಕಾರ ಯಾವ ರೀತಿಯಲ್ಲಿ ಕಾರ್ಯಾಚರಣೆಯನ್ನು ಮಾಡುತ್ತದೆ? ಮತ್ತು ಈ ವ್ಯವಸ್ಥೆಯನ್ನು ಹೇಗೆ ಸದೃಢಗೊಳಿಸುತ್ತದೆ? ಮುಂದಿನ ದಿವಸಗಳಲ್ಲಿ ಬೇರೆ ಕಡೆಗಳಲ್ಲಿ ಇಂಥ ಪ್ರಕರಣಗಳು ನಡೆಯದಂತೆ ನಾವು ಯಾವ ರೀತಿಯಲ್ಲಿ ಕಾರ್ಯವನ್ನು ಮಾಡಬಹುದು? ಈಗ ನಡೆದಿರುವಂಥ ಬಾಂಬ್ ಸ್ಫೋಟದಲ್ಲಿ ಅದಕ್ಕೆ ಹತ್ತಿರ ಇರುವಂಥ ಇನ್ನೊಂದು ಕ್ಷೇತ್ರದಲ್ಲಿ ಅದಕ್ಕೆ ರಿಹರ್ಸಲ್ ನಡೆಯುತ್ತದೆ ಎಂದರೆ ಆ ಸಂದರ್ಭದಲ್ಲಿ ನಮ್ಮ ವ್ಯವಸ್ಥೆ ಏನು? ಯಾವ ರೀತಿಯಲ್ಲಿ ಯೋಚನೆ ಮಾಡಿತ್ತು ? ಏನು ಕಾರ್ಯಾಚರಣೆ ಅಲ್ಲಿ ನಡೆಯಿತು ? ಏಕೆ ಅಲ್ಲಿ ವಿಫಲತೆ ಆಗಿದ್ದು? ಬಹುಶಃ ಇವೆಲ್ಲದರ ಬಗ್ಗೆ ನಾವು ವಸ್ತುನಿಷ್ಠವಾಗಿ ನಾವು ಇದರ ಬಗ್ಗೆ ವಿಶ್ಲೇಷತೆ ಮಾಡುವಂಥ ಅವಶ್ಯಕತೆ ಇದೆ. ವಿಶೇಷವಾಗಿ ಆಂತರಿಕ ಸೇವಾ ಭದ್ರತೆಗೆ ಸಂಬಂಧಪಟ್ಟಂತೆ ಸೆಲ್ ಅನ್ನು ಮಾಡುವಂಥದ್ದು ಮತ್ತು ಅದಕ್ಕೆ ವಿಶೇಷವಾದಂಥ ಸ್ಥಾನವನ್ನು ಕೊಟ್ಟು ಬೇಕಾಗಿರುವಂಥ ಪ್ರೋತ್ಸಾಹಗಳನ್ನುಕೊಡತಕ್ಕಂಥದ್ದು ಅವಶ್ಯಕತೆ ಇದೆ. ನಾನು ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಕ್ಸಲ್ ನಿಗ್ರಹ ದಳಕ್ಕೆ ಹಿಂದಿನ ಸರ್ಕಾರಗಳಲ್ಲಿ ಕೊಟ್ಟಿರುವಂಥ ಒಂದು ಪ್ರಾಮುಖ್ಯತೆಯಲ್ಲಿ ಯಾವ ರೀತಿಯಲ್ಲಿ ಕಾರ್ಯಾಚರಣೆ ವಿಫಲತೆ ಆಗಿದೆ ಎನ್ನುವಂಥದ್ದನ್ನು ಹೇಳಿದರೆ, ಅದಕ್ಕೆ ಯಾವ ತರಹದ ಮೂಲಭೂತ ಸೌಲಭ್ಯಗಳನ್ನು ಕೊಡದೇ ಇರುವುದರಿಂದ ಇವೊತ್ತು ಅದರ ಕಾರ್ಯಾಚರಣೆ ವಿಫಲತೆ ಆಗಿದೆ. ಬಹಶಃ ಅದಕ್ಕೂ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಕೊಡುವಂಥ ನಿಟ್ಟಿನಲ್ಲಿ ನಾವು ಕಾರ್ಯಾಚರಣೆಯನ್ನು ಮಾಡಬೇಕು ಮತ್ತು ಈಗಿರುವಂಥ ವ್ಯವಸ್ಥೆಗಳಲ್ಲಿ ಕೂಡ ಸುಧಾರಣೆಯನ್ನು ತರಬೇಕೆನ್ನುವ ವಿನಂತಿಯನ್ನು ಕೂಡ ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿಪುರಂ):- ಮಾನ್ಯ ಅಧ್ಯಕ್ಷರೆ, ತಾವು ಪ್ರತಿಪಕ್ಷದ ನಾಯಕರು ಮಂಡಿಸಿದ ನಿಲುವಳಿ ಸೂಚನೆ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಬೆಂಗಳೂರು ಉದ್ಯಾನ ನಗರ ಇವೊತ್ತು ಉಗ್ರರ ನೆರಳಿನಲ್ಲಿದೆ ಎನ್ನತಕ್ಕಂಥದ್ದನ್ನು ಹೇಳಿ ಇವೊತ್ತು ಎಲ್ಲೆಡೆ ಒಂದು ರೀತಿಯಲ್ಲಿ ಭಯದ ವಾತಾವರಣ, ಆತಂಕದ ವಾತಾವರಣ, ಶಾಲೆಗಳಿಂದ ಹಿಡಿದು, ಕಛೇರಿಗಳಲ್ಲಿ ಹಾಗೂ ಎಲ್ಲ ಕಡೆ ಅತಂಕ ಇರತಕ್ಕಂಥದ್ದನ್ನು ನಿಜವಾಗಿಯೂ ಖಂಡಿಸುತ್ತೇನೆ. ಏಕೆಂದರೆ ಬೆಂಗಳೂರು ನಗರದ ಇತಿಹಾಸ ಮತ್ತು

ಭಾರತದ ಇತಿಹಾಸ ನೋಡಿದಾಗ ಬಹುಶಃ ಮೊದಲಿಂದಲೂ ಸಹ ಭಾರತ ದೇಶದ ಮೇಲೆ ಮತ್ತು ಈ ಸಂಸ್ಕೃತಿ ಮೇಲೆ ಮತ್ತು ಇವೊತ್ತು ಬೆಂಗಳೂರು ನಗರ ಆರ್ಥಿಕವಾಗಿ ಏನು ಬೆಳೆದು ನಿಂತಿದೆ ಅದರ ಮೇಲೆ ಕಣ್ಣಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಬೆಂಗಳೂರು ನಗರದಲ್ಲಿ ಭದ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಸಮರೋಪಾದಿಯಲ್ಲಿ ಒಂದು ಲಾಂಗ್ ಟರ್ಮ್, ಶಾರ್ಟ್ ಟರ್ಮ್ ಪ್ಲಾನ್ ಅನ್ನು ಬಹುಶಃ ರಾಜ್ಯ ಸರ್ಕಾರ ಮಾಡತಕ್ಕಂಥದ್ದು ಅತ್ಯಗತ್ಯವಿದೆ. ಕೇವಲ "ಯುದ್ಧಕಾಲೇ ಶಸ್ತ್ರಾಭ್ಯಾಸ" ಎಂದು ಆ ರೀತಿ ಮಾಡುವುದನ್ನು ನಿಲ್ಲಿಸಬೇಕು. Comprehensiveಆಗಿ Plan ಮಾಡುವ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದಂತಹ ಸಂದರ್ಭದಲ್ಲಿ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ದಿನೇಶ್‌ರವರು London ನಗರದ ವಿಚಾರವನ್ನು ಉಲ್ಲೇಖ ಮಾಡಿದ ಹಾಗೆ IT, B.T City ಎಂದು ಬೆಂಗಳೂರು ನಗರವನ್ನು ಏನು ಕರೆಯುತ್ತೇವೆ, entire city ಯನ್ನು ನೀವು satellite ಉಪಯೋಗಿಸುತ್ತೀರೋ, ಯಾವರೀತಿಯ technology ಉಪಯೋಗಿಸುತ್ತೀರೋ ಎಲ್ಲಿ incident ನಡೆಯಿತು? ಹೇಗೆ ನಡೆಯಿತು? ಎನ್ನುವ ಬಗ್ಗೆ Scan ಮಾಡುವ ವ್ಯವಸ್ಥೆ ಆಗಬೇಕು. ಜನನಿಬಿಡ ಪ್ರದೇಶಗಳಲ್ಲಿ theatre ಗಳಲ್ಲಿ C.C.D. camera ಗಳನ್ನು ಅಳವಡಿಸಬೇಕು. ಎಂದು ಒಂದು circular ಬಂತು. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನನ್ನ ಕ್ಷೇತ್ರದಲ್ಲಿ ಇಸ್ಕಾನ್ ಎಂಬ ಧಾರ್ಮಿಕ ಸಂಸ್ಥೆ ಇದ್ದು. ಯಶವಂತಪುರದಲ್ಲಿ ಸಿಕ್ಕಂತಹ ಮಾಹಿತಿ ಪ್ರಕಾರ ಉಗ್ರರ ಮನೆಯಲ್ಲಿ ಇಸ್ಕಾನ್ ಹೇಗೆ blast ಮಾಡಬೇಕು. ಎನ್ನವುದನ್ನು ಒಳಗೊಂಡ ಒಂದು ನಕಾಶೆ ಇತ್ತು ಎಂದು ತಿಳಿದು ಬಂತು. ಇನ್ನು ಎಷ್ಟೋ ವಿಷಯಗಳು ಹೊರಗಡೆ ಬರದೆ ಇರುವಂತಹ ವಿಚಾರಗಳು ಇವೆ. ಬೇಹುಗಾರಿಕೆಯನ್ನು ಚುರುಕುಗೊಳಿಸುವಂತಾದ್ದು ಆಗಬೇಕಾಗಿದೆ ಮತ್ತು ಯಾವುದರಲ್ಲೂ ಕೂಡ ಸೂಕ್ತವಾದ professionalism ಕಾಣುತ್ತಿಲ್ಲ. Punishment transfer ಕೊಟ್ಟು ಅಧಿಕಾರಗಳನ್ನು ಅಲ್ಲಿ ಹಾಕಿದರೆ ಪ್ರಯೋಜನವಾಗುವುದಿಲ್ಲ. ಈ ದಿಕ್ಕಿನಲ್ಲಿ ಸರ್ಕಾರ ಇವೊತ್ತು ಯೋಚನೆ ಮಾಡಬೇಕಾಗುತ್ತದೆ. Electronic ಬೇಹುಗಾರಿಕೆಗೆ ಸಂಬಂಧಪಟ್ಟ ಹಾಗೆ ವ್ಯವಸ್ಥೆ ಮಾಡಬೇಕು. ನಿನ್ನೆ ಶಾಸಕರ ಭವನದಲ್ಲಿ ಬೆಂಕಿ ಎಂದು ಇತ್ತು. ಶಾಸಕರ ಭವನದಲ್ಲಿ ಬಾಂಬ್ ಎಂದು ಹೇಳುವುದು. ನಾನು House Committee ನಲ್ಲಿ ಎರಡು ಬಾರಿ ಸದಸ್ಯನಾಗಿದ್ದಾಗ C C D Camera ಹಾಕಬೇಕೆಂದು ಹೇಳಿದೆವು. ಮೊನ್ನೆ ,scanner ತಂದು ಇಟ್ಟಿದ್ದಾರೆ, ಅದಕ್ಕೆ ತರಬೇತಿ

ಕೊಟ್ಟು ಎಷ್ಟು effective ಆಗಿ ಉಪಯೋಗಿಸುತ್ತಿದ್ದಾರೆ. ಗೊತ್ತಿಲ್ಲ. ಬಹುಶಃ ಮುಂದಿನ ದಿನಗಳಲ್ಲಿ ಬೆಂಗಳೂರು costly ಆಗಬಹುದೆಂದು, ಅದು ಅನಿವಾರ್ಯ. ಕಳೆದ ವರ್ಷ ಹಿಂದಿನ ಸರ್ಕಾರ ನಮ್ಮನ್ನು ಚೈನಾಗೆ ಕಳುಹಿಸಿದ್ದೀರಿ. ಆ ದೇಶದಲ್ಲಿ ಯಾರೇ ಬಂದರೂ ಸಹ, ಬಹಳ ಸಂಶಯದಿಂದ ಬಹಳ ಬುದ್ಧಿವಂತಿಕೆಯಿಂದ ಬೇಹುಗಾರಿಕೆಯನ್ನು ಮಾಡುತ್ತಾರೆ. ನಮ್ಮ ಬೆಂಗಳೂರಿನಂತಹ ನಗರದಲ್ಲಿ ಯಾರು ಬರುತ್ತಾರೆ, ಯಾರು ಹೋಗುತ್ತಾರೆ, ಯಾವ apartment ನಲ್ಲಿ ಯಾರು ಇರುತ್ತಾರೆ, ಯಾವ slumನಲ್ಲಿ ಯಾರು ಇರುತ್ತಾರೆ, ಯಾವುದೂ ಗೊತ್ತಾಗುವುದಿಲ್ಲ. ಇಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರಿಗೆ ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗಬಹುದು. ಬಹಳಷ್ಟು ವಿಷಯಗಳನ್ನು ಮಾನ್ಯ ಕುಮಾರ ಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ಧರ್ಮ ಗುರುಗಳ ಗುರಿ ಏನಾಗಿರಬೇಕು? ಮನುಷ್ಯ ಮನುಷ್ಯರ ನಡುವೆ ಕಂದಕ ಉಂಟಾಗುತ್ತದೆ. ಇಲ್ಲಿ ಹಲವಾರು ವರ್ಗಗಳು ಕೆಲಸ ಮಾಡಬೇಕಾಗಿದೆ. ಈ ರಾಷ್ಟ್ರದ ಮತ್ತು ವಿಶ್ವದ ಮನುಕುಲ ಉಳಿಯಬೇಕಾದರೆ ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕು. ಅದಕ್ಕೋಸ್ಕರ ಸರ್ಕಾರ ಹಂತಹಂತವಾಗಿ ಏನು ಮಾಡಬೇಕು ಎಂದರೆ ಯಾವುದೇ ಪಕ್ಷ, ಯಾವುದೇ ಧರ್ಮ ಎನ್ನುವ ಭಾವನೆ ಇಲ್ಲದೆ ರಾಷ್ಟ್ರದ ಸಾರ್ವಭೌಮತ್ವವನ್ನು ಕಾಪಾಡುವ ದಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಬೇಕು. ಆ ದಿಕ್ಕಿನಲ್ಲಿ ನಮ್ಮ ಸಂಪೂರ್ಣ ಸಹಕಾರ ಇದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ಗೃಹ ಸಚಿವರು ತಾವು ಹೇಳಿ. ಈಗಾಗಲೇ ಬಹಳ ಸಮಯವಾಯಿತು, ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು):– ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ತಾವು ನಿಯಮ 69ರಲ್ಲಿ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ ಎಂದು ಹೇಳುತ್ತಿದ್ದೀರಿ. ನಾನು ಬೇಗ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು:– ಗೃಹ ಸಚಿವರು statement ಮಾಡುತ್ತಿದ್ದರು. ಈಗಾಗಲೇ ಎಲ್ಲಾ ಚರ್ಚೆಯಾಗಿದೆ. ಗೃಹ ಸಚಿವರು reply ಕೊಡುತ್ತಾರೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು):– ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ದಿನಾಂಕ: 25 ರಂದು ರಾಜಧಾನಿ ಬೆಂಗಳೂರಿನಲ್ಲಿ ನಡೆದಂತಹ ಸರಣಿ ಬಾಂಬ್ ಸ್ಫೋಟ ಏನಿದೆ, ಅದರಿಂದ ರಾಜಧಾನಿ

ಜನತೆ ಮಾತ್ರ ಅಲ್ಲ. ಇಡೀ ಕರ್ನಾಟಕ ರಾಜ್ಯದ ಜನತೆ ಜೊತೆಗೆ ಇಡೀ ದೇಶದ ಜನತೆಗೆ ಒಂದು ರೀತಿಯಲ್ಲಿ ದಿಗ್ಭ್ರಮೆಯಾಯಿತು. ಏಕೆಂದರೆ ಒಂದು ಗಂಟೆ ಅವಧಿಯಲ್ಲಿ ಒಂಭತ್ತು ಕಡೆ ಸ್ಫೋಟವಾಗಿದೆ. ಅದೃಷ್ಟವಶಾತ್ ಅವುಗಳು ಬಹಳ ಶಕ್ತಿಶಾಲಿ ಬಾಂಬ್‌ಗಳಾಗಿರಲಿಲ್ಲ. ಇಲ್ಲದೇ ಇದ್ದರೆ ಭಾರೀ ಸಾವು ನೋವುಗಳಾಗಿ ದೊಡ್ಡ ಅನಾಹುತಗಳು ನಡೆಯಬೇಕಾಗಿತ್ತು. ಈಗಾಗಲೇ ಮಾತನಾಡಿಸುವಂತಹ ಸದಸ್ಯರುಗಳು ಅದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ. ಇತ್ತೀಚೆಗೆ ಈ ರೀತಿಯ ವಿಧ್ವಂಸಕ ಕೃತ್ಯಗಳು ಏನು ನಡೆಯುತ್ತಿದೆ. ಅದರ ಬಗ್ಗೆ ಪೊಲೀಸ್ ಇಲಾಖೆಯ ಹೇಳಿಕೆಗಳನ್ನು ಕೂಡ ನಾವು ನೋಡುತ್ತಿದ್ದೇವೆ. ಒಂದು ಕಡೆ, 2005ರ ನಂತರ ನಮ್ಮ ರಾಜಧಾನಿಯಲ್ಲಿ ಯಾವುದೇ ರೀತಿಯಾದ ಭಯೋತ್ಪಾದಕ ಕೃತ್ಯಗಳು ನಡೆದಿಲ್ಲ. ಉಗ್ರರ ದಮನ ಮಾಡುವುದಕ್ಕೆ ನಮ್ಮ ಪೊಲೀಸರು ಶಕ್ತರಾಗಿದ್ದಾರೆ. ಜನವರಿಗೆ ಆತಂಕ ಬೇಡ ಎಂದು ಪೊಲೀಸ್ ಇಲಾಖೆಯವರು ಹೇಳಿದ್ದಾರೆ. ಆದರೆ ಇಲ್ಲಿ ಸರಣಿ ಸ್ಫೋಟ ನಡದೇಹೋಗಿದೆ. ಒಂಭತ್ತು ಕಡೆ 60 ನಿಮಿಷಗಳ ಅಂತರದಲ್ಲಿ ನಡೆದಂತಹ ಘಟನೆ ನಮ್ಮೆಲ್ಲರಿಗೂ ಕೂಡ ದಿಗ್ಭ್ರಮೆಯಾಗಿರತಕ್ಕಂಥ ವಿಷಯ. ಇದನ್ನು ನೋಡಿದಾಗ ಬೆಂಗಳೂರು ನಗರ ಉಗ್ರರ ಸಂಚು ಮತ್ತು ದಾಳಿಯಿಂದ ಮುಕ್ತಿಯಾಗಿಲ್ಲ. ಎನ್ನುವುದನ್ನು ನಾವು ಕಾಣುತ್ತಿದ್ದೇವೆ. ಇದನ್ನೆಲ್ಲಾ ನೋಡಿದಾಗ ಉಗ್ರರು ಯಾವುದೇ ಸಮಯದಲ್ಲಿಯಾದರೂ ಕೂಡ ದಾಳಿ ಸ ನಡೆಸಬಹುದು ಎನ್ನುವುದು ಈ ಘಟನೆಗಳ ಹಿನ್ನೆಲೆಯಲ್ಲಿ ನಮಗೆ ಈಗ ಗೊತ್ತಾಗಿರತಕ್ಕಂಥಾದ್ದು. ಇದರ ಬಗ್ಗೆ ಈಗಾಗಲೇ ಮಾತನಾಡಿರುವಂತಹ ಸದಸ್ಯರುಗಳೆಲ್ಲ ಹೇಳಿರಬಹುದು. ಇದಕ್ಕೆ ಕಾರಣ ನಮ್ಮ State Intelligence wing in the Department. ಅದೂ ಮತ್ತು ನಮ್ಮಲ್ಲಿರತಕ್ಕ Anti Terrorist Cell ಏನಿದೆ. ಇದರ ಸಂಪೂರ್ಣ ವೈಫಲ್ಯತೆಯಿಂದ ಕೂಡ ಈ ರೀತಿ ಆಗಿದೆ. ಇತ್ತೀಚೆಗೆ ನಾನು ಮಣಿಪುರಕ್ಕೆ ಸಂಬಂಧಪಟ್ಟ ಹಾಗೆ ನೋಡಿದಾಗ, ಮಣಿಪುರದ ಉಗ್ರಗಾಮಿ ಸಂಘಟನೆ revolutionary party ಕಂಗ್ಲಿಫೋವಾಕ್ ಎನ್ನುವವರು ನಗರದ ಹತ್ತಾರು ಬಡಾವಣೆಗಳಲ್ಲಿ ಏಳು ತಿಂಗಳಿನಿಂದ ಇಲ್ಲಿಯೇ ವಾಸ ಮಾಡುತ್ತಿದ್ದರು. ನಮ್ಮ State Intellegence Wing ನವರಿಗೆ ಇದರ ಬಗ್ಗೆ ಮಾಹಿತಿಯೇ ಗೊತ್ತಿಲ್ಲ. ಬಹುಶಃ ಏಳು ತಿಂಗಳಿನಿಂದ ಅವರು ಇಲ್ಲಿ ಇರುವುದು ಗೊತ್ತಾಗದಿರುವುದು ಸೇನಾ ಗುಪ್ತ ದಳದವರು ಮಾಹಿತಿಯನ್ನು ಅನುಸರಿಸಿ ಬೆಂಗಳೂರಿಗೆ ಬಂದು ಆರು ಜನರನ್ನು arrest ಮಾಡಿದಮೇಲೆ ಗೊತ್ತಾಗಿದ್ದು, ಅಲ್ಲಿಯವರೆಗೆ ಗೊತ್ತಿರಲಿಲ್ಲ. ಎಷ್ಟು ವೈಫಲ್ಯ ಕಾಣುತ್ತಿದೆ.

ಎನ್ನುವುದು ಗೊತ್ತಾಗುತ್ತದೆ. ಗೃಹ ಸಚಿವರೆ, ಒಂದು ಬಾರಿ ಹೊಸಪೇಟೆಯಿಂದ ನಗರಕ್ಕೆ ಬಸ್ಸಿನಲ್ಲಿ ಇಬ್ರಾನ್ ಅಲಿಯಾಸ್ ಬಿಲಾಲ್ ಎನ್ನುವ ಉಗ್ರಗಾಮಿ ಬರುತ್ತಿದ್ದನು. ಅವನು ಬರುತ್ತಿರುವುದು ಬಹುಶಃ ನಮ್ಮ State Intelligence ನವರಿಗೆ ಗೊತ್ತೆ ಇಲ್ಲ. ಆದರೆ ಕೇಂದ್ರ ಸರ್ಕಾರದ ಗುಪ್ತ ದಳದವರು ತಿಳಿಸಿದ್ದರಿಂದ, ಒಂದು ದೊಡ್ಡ ಅನಾಹುತ ಆಗುವುದು ತಪ್ಪಿತು, ಇಲ್ಲದೆ ಇದ್ದರೆ ಬಹುಶಃ ಈಗ ಬಹಳ ದೊಡ್ಡ ಅನಾಹುತಗಳು ನಡೆಯುತ್ತಿರತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಹಾಗಾಗಿ ನಾನು ತಮಗೆ ತಿಳಿಸತಕ್ಕಂಥಾದ್ದು. State Intellegence Wing ಏನಿದೆ ಅದು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ನಮ್ಮಲ್ಲಿ Anti Terrorist Cell ಏನಿದೆ, ಅದರಲ್ಲಿ ಯಾರಿದ್ದಾರೆ? ಒಬ್ಬ IGP ಇದ್ದಾರೆ. ಅಲ್ಲಿ ಎಷ್ಟು ಸಿಬ್ಬಂದಿ ಇದೆ ಎಂದು ಅಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ತಿಳಿಸಬೇಕು. ಅಲ್ಲಿ IGP ಏನಿದ್ದಾರೆ, ಅವರ ಕೈ ಕೆಳಗೆ ಕೆಲಸ ಮಾಡವುದಕ್ಕೆ ಸಾಕಷ್ಟು ಸಿಬ್ಬಂದಿ ಇದೆಯೇ? ಅದರಲ್ಲೂ ಬೆಂಗಳೂರಿಗೆ ಪ್ರತ್ಯೇಕವಾದ Anti-Terrorist cell ಇದೆ. ನನಗೆ ತಿಳಿದಮಟ್ಟಿಗೆ ಅಲ್ಲಿರುವಂತಹ ಸಿಬ್ಬಂದಿಗಳಿಗೆ ಕುಳಿತುಕೊಳ್ಳುವುದಕ್ಕೆ ಕೂಡ ಸ್ಥಳ ಇಲ್ಲವೆನ್ನುವ ರೀತಿ ಇದೆ. ಇದರ ಬಗ್ಗೆ ಎಷ್ಟು ತಾತ್ಸಾರ ಇದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಒಂದು ಕಾಲದಲ್ಲಿ ಈಗ ನಡೆದಿರಕ್ಕಂಥಹ ಘಟನೆ ನೋಡಿದರೆ ಮುಂದೆ ಬರತಕ್ಕಂಥ ದಿನಗಳಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ನಾವು ತುಂಬಾ Alert ಆಗಬೇಕಾಗಿದೆ. ಎನ್ನುವ ಮುನ್ಸೂಚನೆಯನ್ನು ನಾವೆಲ್ಲರೂ ಕೂಡ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಇದು ಕೇವಲ ಕರ್ನಾಟಕ ಅಲ್ಲ, ನಮ್ಮ ದೇಶದ ಅನೇಕ ಭಾಗಗಳಲ್ಲಿ, ಅದು ಜೈಪುರ ಇರಬಹುದು. ಬಾಂಬೆ ಇರಬಹುದು, ಅಹಮದಾಬಾದ್, ಭೂಪಾಲ್ ಮತ್ತು ನಮ್ಮ ಬೆಂಗಳೂರಿನಲ್ಲಿ ನಡೆದಿರುವಂತಹ ಸಂದರ್ಭದಲ್ಲಿ ನಮ್ಮ Intellegence Wingಗೆ ಪೂರ್ಣ ಮಾಹಿತಿ ಇರಬೇಕು. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ, ಯಾರು ಉಗ್ರಗ್ರಾಮಿಗಳು ಬರುತ್ತಾರೆ. ಅದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಇಟ್ಟುಕೊಳ್ಳುವ ರೀತಿಯಲ್ಲಿ ಎಚ್ಚರಿಕೆಯನ್ನು ವಹಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸಿ ಹೇಳುತ್ತೇನೆ. ಒಟ್ಟಾರೆ ಇವೊತ್ತು ನನಗೆ Intelligence ಪ್ರಶ್ನೆ ಬಂದಂತಹ ಸಮಯದಲ್ಲಿ ನಮ್ಮ Intelligence network ಎಷ್ಟು failure ಆಗುತ್ತಿದೆ, ಅದರ effigency effective ಆಗಿ ಇಲ್ಲವೆನ್ನುವುದನ್ನು ನಾವೆಲ್ಲರೂ ಕೂಡ, ಯೋಚನೆ ಮಾಡಿದರೆ, ನನಗೆ ವೀರಪ್ಪನ್ ಕಾರ್ಯಾಚರಣೆ ಬಗ್ಗೆ ಹೆಳುವುದಾದರೆ, ಏಕೆಂದರೆ

ನಾನು ಅಲ್ಲಿಂದ ಜನಪ್ರತಿನಿಧಿಯಾಗಿ ಆರಿಸಿಬಂದವನು. ವೀರಪ್ಪನ್ ವಿಚಾರದಲ್ಲಿ ಯೋಚನೆ ಮಾಡಬೇಕಾಗಿರುವಂಥಾದ್ದು ಏನೆಂದರೆ ಇವತ್ತು Bangalore City Commissioner ಯಾರಿದ್ದಾರೆ, ಅವರಿಗೆ ಸಂಪೂರ್ಣವಾಗಿ ಅದರ ಬಗ್ಗೆ ಗೊತ್ತಿದೆ. ಅವರು Task force ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ವೀರಪ್ಪನ್ ಬಗ್ಗೆ ಬಹಳ ಜನ ಮಾಡತನಾಡುತ್ತಾ. ಒಬ್ಬ ಯಕ:ಶ್ಚಿತ್ ಕಾಡುಗಳ್ಳನನ್ನು ಹಿಡಿಯುವುದಕ್ಕೆ ಏಕೆ ಆಗುತ್ತಿಲ್ಲ ಎಂದು ಕೇಳುತ್ತಿದ್ದರು. Para Military Force ಅನ್ನು ಎಲ್ಲಾ ಕರೆಸಿದೆವು. ಅವನನ್ನು ಹಿಡಿಯುವುದಕ್ಕೆ ಏಕೆ ಆಗುತ್ತಿಲ್ಲವೆನ್ನುವ ಪ್ರಶ್ನೆ ಬಂದಾಗ, ಇಷ್ಟು ದಟ್ಟವಾದ ಕಾಡಲ್ಲಿ. ಅವನನ್ನು physically search ಮಾಡಿ, ಅವನನ್ನು ಹಿಡಿದುಕೊಳ್ಳುವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿ intelligence network ಇದ್ದಾಗ ಮಾತ್ರ ಮಾಹಿತಿ ಕಲೆಹಾಕಿ ಆಗ ಮಾತ್ರ ಆತನನ್ನು encounterನಲ್ಲಿ ಮುಗಿಸುವುದಕ್ಕೆ ಸಾಧ್ಯ ಎನ್ನವಂತಹ ಮಾತನ್ನು ಹೇಳುತ್ತಿದ್ದೆ. ಬಹುಶ: ನಮ್ಮಲ್ಲಿ Ingelligence network ಚೆನ್ನಾಗಿ ಆದಮೇಲೆ ವೀರಪ್ಪನ್‌ನನ್ನು ಚಟುವಟಿಕೆಗಳಿಗೆ ಕಡಿವಾಣ ಹಾಕಿದ ಹಾಗೆ ಆಯಿತು. ಆನಂತರ ಆತನನ್ನು ಮುಗಿಸುವುದಕ್ಕೆ ಸಾದ್ಯವಾಯಿತು ಎನ್ನವುದನ್ನು ನಾನು ತಮಗೆ ಹೇಳುತ್ತಿದ್ದೇನೆ. ಇವೊತ್ತು ತಾವು ಗೃಹ ಸಚಿವರು ಯೋಚನೆ ಮಾಡಬೇಕು. Anti Terrorist cellಗೆ ಬೇಕಾದಂತಹ ರೀತಿಯಲ್ಲಿ ಎಲ್ಲಾ ammunitions ಇದೆಯಾ, weapons ಇದೆಯಾ, ನಾವು ಅದಕ್ಕೆ ಸಜ್ಜಾಗಿದ್ದೇವಾ ಎನ್ನುವ ಪ್ರಶ್ನೆ ಇದೆ. ಇಲ್ಲದೆ ಇದ್ದರೆ ನಾವು ಕೇಂದ್ರ ಸರ್ಕಾರದಿಂದ ಸಹಾಯವನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಈಗಾಗಲೇ ನಮಗೆ NSG ಇದೆಯಾ, ಇಲ್ಲವೇ? ಇದರ ಬಗ್ಗೆ ಪೂರ್ಣ ಮಾಹಿತಿ ಇದೆಯಾ ಎನ್ನುವುದನ್ನು ನಾವು ನೋಡಿಕೊಳ್ಳಬೇಕಾಗಿದೆ. ಹಾಗಾಗಿ ಇವೊತ್ತು ನಮಗೆ ತುಂಬಾ Intelligence network ತುಂಬಾ ಅವಶ್ಯಕತೆ ಇರುವಂಥಾದ್ದು ಇದೆ. ನೀವು Intelligence network ಅನ್ನು ಎಷ್ಟು effective ಆಗಿ, efficient ಆಗಿ ಇಡುತ್ತೀರೋ ಅಷ್ಟು ಒಳ್ಳೆಯದು. ನಾನು ದೆಹಲಿಯಲ್ಲಿ ನೋಡಿದ್ದೇನೆ. ಅಲ್ಲಿರುವಂತಹ Intelligence ಈ ರೀತಿಯಾಗಿ ಏನಾದರೂ effective ಆಗಿ, efficiency ಇಲ್ಲದೇ ಇರುವಂಥಾದ್ದು ಆದರೆ ಪ್ರತಿಯೊಂದು ಗಂಟೆಗೂ ಕೂಡ ಈ ರೀತಿಯ ವಿಧ್ವಂಸಕ ಕೃತ್ಯಗಳು ಅಲ್ಲಿ ನಡೆಯುವುದಕ್ಕೆ ಸಾಧ್ಯವಿರುತ್ತದೆ. ಆದುದರಿಂದ ಅಲ್ಲಿ ಎಷ್ಟು ಎಚ್ಚರಿಕೆಯಿಂದ ಇದ್ದಾರೆನ್ನುವಂಥಾದ್ದು ತಮಗೆ ಗೊತ್ತಿರುವಂಥಾ ವಿಚಾರವಾಗಿದೆ. ಇವೊತ್ತು Prevention Terrorist Act ಇವೊತ್ತು ಇಲ್ಲ. ಅದನ್ನು repeal ಮಾಡಬೇಕು ಇವೊತ್ತು ಇಲ್ಲಿ ಮೊನ್ನೆ

ಅಹಮದಾಬಾದ್ ಮತ್ತು ಬೆಂಗಳೂರಿನಲ್ಲಿ ನಡೆದಿರುವಂಥ ಘಟನೆಗಳ ಬಗ್ಗೆ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯದ ಮುಖ್ಯಮಂತ್ರಿಯವರನ್ನು ಕರೆಸಿ, ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಭಯೋತ್ಪಾದನೆಯನ್ನು ನಿಗ್ರಹ ಮಾಡುವುದಕ್ಕೆ ಯಾವ ರೀತಿಯಾದಂಥ Act ಇವೊತ್ತು ಬೇಕಾಗಿದೆಯೆನ್ನುವ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗುತ್ತಿದೆಯೆನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ತಮಗೆ ಹೇಳಲಿಚ್ಚಿಸುತ್ತೇನೆ, ಬೆಂಗಳೂರು ನಗರದಲ್ಲಿ ಎಂಭತ್ತು ಲಕ್ಷ ಜನಸಂಖ್ಯೆ ಇದೆ. ಇಲ್ಲಿ ಈಗ ಇರುವಂಥಾದ್ದು ಸಾಕಾಗುವುದಿಲ್ಲ. Law & order problem ಕೂಡ, ಅದರಲ್ಲೂ ವಿಶೇಷವಾಗಿ ಈ ರೀತಿಯಾದಂಥ ಉಗ್ರರ ದಾಳಿ, ಈ ರೀತಿಯಾದಂಥವಿಧ್ವಂಸಕ ಕೃತ್ಯಗಳು, ಅವರು ಅಲ್ಲಿ ನಡೆಸುವಂಥ ಕೃತ್ಯಗಳು, ಇಲ್ಲಿ IT, BT ಇರುವುದರಿಂದ, ಬೇರೆ ಕಡೆಗಳಿಂದ ಇಲ್ಲಿ ಬಂದು ಸೇರಿಕೊಳ್ಳುವ ಅವಕಾಶಗಳು ಇವೊತ್ತು ಇರುವುದರಿಂದ, ಈ ಬಗ್ಗೆ ನನಗನಿಸುವುದೇನೆಂದರೆ ಈಗಿರುವಂಥ ADGP rank ನಿಂದ DGP ಯವರೆಗೆ ಅದನ್ನು elevate ಮಾಡಿ Poice Commissioner ಅನ್ನು ಇಬ್ಬರು ADGP rankನವರನ್ನು. ಇಬ್ಬರು Joint Secretaryಗಳನ್ನು ನೀವು ಇಲ್ಲಿಗೆ ಮಾಡಬೇಕಾಗುತ್ತದೆ. ಆ ರೀತಿ ಮಾಡಿದ್ದೇ ಆದರೆ ಜವಾಬ್ದಾರಿ ಹೆಚ್ಚಾಗಿ ಅದಕ್ಕೆ ಬೇಕಾದಂಥ ಎಲ್ಲ ರೀತಿಯಲ್ಲಿ ನಾನು ಮೊದಲೆ ಹೇಳಿದೆ, State Intelligence Wing as well as Anti-Terrorist Cell ಇವೆಲ್ಲವನ್ನು ಕೂಡ ನೀವು efficient ಆಗಿ, effective ಆಗಿ ಇದನ್ನು ಮಾಡಿದರೆ, ಬಹುಶಃ ಇದನ್ನೆಲ್ಲಾ ತಡೆಯುವುದಕ್ಕೆ ಸಾಧ್ಯವೆನ್ನುವ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ನಾನು ಹೇಳುವುದೇನೆಂದರೆ. ಇಲ್ಲಿ ಮಾಡಿರುವ ವ್ಯವಸ್ಥೆ ಸಾಲದು, terrorist target ಎಲ್ಲಾ ನಿಮಗೆ ಗೊತ್ತಿದೆ. ಇಂಥಾ ಸ್ಥಳಗಳಲ್ಲಿ, ಅವರು Assembly ಇರುವಂಥ ಕಡೆಗಳಲ್ಲಿ ಅವರು attack ಮಾಡಿ ಅವರು Terroize ಮಾಡುವಂಥ ಪ್ರಯತ್ನಗಳನ್ನು ಕೂಡ ಅವರು ಮಾಡುತ್ತಾರೆ. ಈಗ ನೋಡಿದರೆ ಅವರು ಯಾವ ಕ್ಷಣದಲ್ಲಿ ಬೇಕಾದರೂ ಮಾಡಬಹುದು. ಆದುದರಿಂದ ನನ್ನ ಸಲಹೆ ಏನೆಂದರೆ ಇವೊತ್ತು Parliment House ಇರುವಂಥಾ ಕಡೆಯಲ್ಲೂ ಅಷ್ಟು ಕಟ್ಟುನಿಟ್ಟಾಗಿರುವಂಥಾ ಕಣ್ಣಲ್ಲಿ ಕಣ್ಣನ್ನು ಇಟ್ಟು ಎಚ್ಚರವಾಗಿ ಕಾಯುವಂಥ ಸ್ಥಳದ ಮೇಲೂ attack ಆಯಿತು. ಇಲ್ಲಿಯೂ ಯಾರು ಜನರು ಬರಬಾರದೆಂದು ಅಲ್ಲ. It is a democratic institution. ಇದು ಪ್ರಜಾಪ್ರಭುತ್ವದ ಸಂಸ್ಥೆ. ಜನರು ಬರಬೇಕು, ಹೋಗಬೇಕು, ನಮ್ಮನ್ನೆಲ್ಲಾ ಅವರು

ಮಾತನಾಡಿಸಬೇಕು, ಅವರು ಕಷ್ಟ-ಸುಖಗಳಿಗೆ ಬರಬೇಕಾಗಿದೆ. ಆದರೆ ಈ ರೀತಿಯಾಗಿ ಉಗ್ರಗ್ರಾಮಿ ಚಟುವಟಿಕೆಗಳು ಏನು ನಡೆಯುತ್ತಿವೆ. ಇಂಥಾದ್ದು ನಡೆಯುವಂಥಾ ಸಂದರ್ಭದಲ್ಲಿ ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಆದುದರಿಂದ ತಮಗೆ ದಯಮಾಡಿ ನಾನು ತಿಳಿಯವಂಥಾದ್ದು ಏನೆಂದರೆ Parliament Houseಗೆ ಯಾವ ರೀತಿಯಾಗಿ security arrangements ಇದೆ, ಅದು ಅಲ್ಲಿ ಚೆನ್ನಾಗಿದೆ. ಆ ರೀತಿಯಾಗಿ ನೀವೂ ವಿಧಾನಸೌಧಕ್ಕೆ ಮಾಡಬೇಕಾಗುತ್ತದೆ. ಇಲ್ಲವೆಂದರೆ ಒಂದಲ್ಲ ಒಂದು ದಿವಸ ನಾವು ಪರಿತಪಿಸಬೇಕಾಗುತ್ತದೆ. ಇಲ್ಲಿ ಅವರು ನಮ್ಮನ್ನು ಬಹಳ ಸುಲಭವಾಗಿ attack ಮಾಡಬಹುದು. ಈ ರೀತಿಯಾದ target ಅನ್ನು ಇಟ್ಟುಕೊಂಡು terroristಗೆ ಆ ರೀತಿಯಾದಂಥ ಅವಕಾಶಗಳು ಇವೆ. ತಾವು ದಯವಿಟ್ಟು ಯೋಚನೆ ಮಾಡಿ, ಇಲ್ಲಿ securityಗೆ ಯಾರು ಇದ್ದಾರೆ, ಅವರು security arrangement ಯಾವ ರೀತಿಯಾಗಿ ಮಾಡಬೇಕು. ಬಿಡಬೇಕೆಂಬ ಬಗ್ಗೆ ಮತ್ತು ಯಾವ ರೀತಿಯಾಗಿ ಮಾಡಬೇಕು, ಎಷ್ಟು ಎಚ್ಚರವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ Parliament Houseಗೆ ಯಾವ ರೀತಿಯಾಗಿ security arrangement ಆಗಿದೆ, ಆ ರೀತಿಯಲ್ಲಿ ಇಲ್ಲೂ ಕೂಡ ತಾವು ಮಾಡಬೇಕು. ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು, ಏಕೆಂದರೆ ಘಟನೆಗಳು ನಡೆದಂಥ ಸಮಯದಲ್ಲಿ ನಾವು ಮಾಡುತ್ತೇವೆ. ನಾನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನಾನು ಮಾಧ್ಯಮದಲ್ಲಿ ನೋಡಿದ್ದೇನೆ. ಪೊಲೀಸ್ ಇಲಾಖೆ ಮತ್ತು Intellegenceನಲ್ಲಿ ಎಷ್ಟು ಬೇಜವಾಬ್ದಾರಿಯಾಗಿರುತ್ತೆಂಬುದನ್ನು ನಾವು ನೋಡಿದ್ದೇವೆ. ನಾನು ಉಗ್ರರ ದಾಳಿ ಎಲ್ಲಿ, ಎಂದೂ ಎಂಬುದನ್ನು ನೋಡಿದೆ. ನಿಮಗಿಲ್ಲವೇನು, ಈ ಮಾಹಿತಿ? ನೀವು ಎಷ್ಟು ಹಗುರವಾಗಿ ತೆಗೆದುಕೊಂಡು ಹೇಳಿಬಿಡುತ್ತೀರಾ, ಪೊಲೀಸ್ ಇಲಾಖೆಯವರು ಅಥವಾ ಗೃಹ ಇಲಾಖೆಗೆ ಸಂಬಂಧಪಟ್ಟ ಮುಖ್ಯಸ್ಥರು ಎನ್ನುವಂಥಾದ್ದನ್ನು ನಾನು ನೋಡಿದೆ, ಇದು 1996ರಿಂದ ಒಂದಲ್ಲ ಒಂದು ರೀತಿಯಲ್ಲಿ ಸತತವಾಗಿ ನಡೆಯುತ್ತಿರುವಂಥಾದ್ದನ್ನು ನೋಡಿದೆ. 1996ರಲ್ಲಿ ಬೆಂಗಳೂರಿನಲ್ಲಿ Miss World ನಡೆಯುತ್ತಿರುವಂಥಾದ್ದನ್ನು ವಿರೋಧಿಸಿ cricket stadium, double road ಸೇರಿದಂತೆ ನಾಲ್ಕು, ಐದು ಕಡೆಗಳಲ್ಲಿ ಸರಣಿ ಜೆಲಟಿನ್ ಸ್ಫೋಟ ನಡೆದಿದೆ. ಮೊನ್ನೆ ಅಮೋನಿಯಂ ನೈಟ್ರೇಟ್‌ನಿಂದ ನಡೆದಿದ್ದರಿಂದ ಅದು ಅಷ್ಟು ಹೆಚ್ಚಾಗಿ ಏನೂ ಅನಾಹುತವಾಗಲಿಲ್ಲ, ಇಲ್ಲವೆಂದರೆ ಬಹಳ ಅನಾಹುತಗಳು ಆಗುತ್ತಿದ್ದವು. ಅದು ಆದ ನಂತರ 2000ನೇ ಇಸವಿಯ ಜೂನ್, ಜುಲೈ ತಿಂಗಳಲ್ಲಿ ಹುಬ್ಬಳ್ಳಿ, ಗುಲ್ಬರ್ಗಾ ಹಾಗೂ

ಬೆಂಗಳೂರಿನಲ್ಲಿ ಚರ್ಚ್‌ಗಳಲ್ಲಿ ದೀನ್‌ದಾರ್ ಅಂಜುಮಾನ್ ಸಂಘಟನೆ ಸದಸ್ಯರಿಂದ ಸ್ಫೋಟವಾಗಿದೆ. ಇದರ ರೂವಾರಿಗಳು ಬೆಂಗಳೂರಿನ ಜೆ.ಜೆ. ನಗರದಲ್ಲಿ ನಡೆದ ಕಾರು ಸ್ಫೋಟದಲ್ಲಿ ಸಾವನ್ನಪ್ಪಿದಂಥಾದ್ದು ಇದೆ. ಆನಂತರ ತಮಗೂ ಗೊತ್ತಿದೆ, 2005ರ ಡಿಸೆಂಬರ್ 25ನೇ ತಾರೀಖಿನಂದು IISc (Indian Institute of Science) ಮೇಲೆ ನಡೆದಂಥ ಉಗ್ರರ ದಾಳಿ, ನಾವು ಆಗ ಒಂದು ಅಮೂಲ್ಯವಾದ ಜೀವವನ್ನು ಕಳೆದುಕೊಳ್ಳಬೇಕಾಯಿತು. ಅವರು ವಿಜ್ಞಾನಿ ಡಾ: ಎಂ.ಸಿ. ಪುರಿಯವರ ಸಾವು ಕೂಡ ಆಗ ಆಗಿರುವಂಥಾದ್ದು ತಮಗೆ ಗೊತ್ತಿದೆ. ಅದು ಆದ ನಂತರ 2005ರ ಮಾರ್ಚ್ 7ನೇ ತಾರೀಖಿನಂದು ನಗರದ Cantonment Railway ನಿಲ್ದಾಣದಲ್ಲಿ ಭಾರಿ ಪ್ರಮಾಣದ ಸ್ಫೋಟಕ ವಸ್ತುಗಳು ಪತ್ತೆಯಾದವು, ಅವು ಪಿಸ್ತೂಲ್,ಕಾರ್ಬೈನ್ ಬಂದೂಕ, 149 ಸುತ್ತು ಗುಂಡುಗಳು, ಪತ್ತೆಯಾಗಿರುವಂಥಾದ್ದನ್ನು ನಾವು ನೋಡಿದ್ದೇವೆ. ಅದು ಆದನಂತರ 2005ರ ಏಪ್ರಿಲ್ 10ರಂದು ಚೀನಾ ದೇಶದ ಪ್ರಧಾನಮಂತ್ರಿಯವರು ಬಂದಾಗ, ನಮ್ಮಲ್ಲಿ Intellegence wing ಎಷ್ಟು effective ಆಗಿ ಎಷ್ಟು alert ಆಗಿ ಇದ್ದಾರೆನ್ನುವುದಕ್ಕೆ ಹೇಳುವಂಥಾದ್ದು. ಚೀನಾ ದೇಶದ ಪ್ರಧಾನಿಯವರು ಬೆಂಗಳೂರಿಗೆ ಭೇಟಿ ನೀಡದ ಸಂದರ್ಭದಲ್ಲಿ ಟಿಬೆಟ್ಟಿಯನ್ ಯುವಕನೊಬ್ಬ I.I.Sc ಆಡಳಿತ ವಿಭಾಗದ ಬ್ಲಾಕ್‌ನ ತುತ್ತ ತುದಿಯನ್ನು ತಲುಪಿ ಟಿಬೆಟ್ಟಿನ ಧ್ವಜವನ್ನು ಹಿಡಿದಿದ್ದನು. pamphlet ಅನ್ನು ತೂರಿ ಪ್ರತಿಭಟನೆಯನ್ನು ನಡೆಸಿದನು. ಇವೆಲ್ಲವನ್ನು ನೋಡಿದಾಗ ನಾವು ಎಷ್ಟು alert ಆಗಬೇಕಾಗಿರುತ್ತದೆಂಬುದಕ್ಕೆ ನೋಡಬೇಕು. ನಮ್ಮ Ingellegence name sakeಗೆ ಮಾತ್ರ ಇದೆ ಎಂಬುದನ್ನು ತಾವು ನೋಡಬೇಕು. ಅದೇ ರೀತಿಯಲ್ಲಿ 2006 ಜನವರಿ 1 ರಂದು ಬೆಂಗಳೂರು ಸೇಲಂ ರೈಲು ಮಾರ್ಗವನ್ನು ಅನಿಲ ಸಿಲಿಂಡರ್ ಹಾಗೂ ಗ್ಯಾಸ್ cutter ಮೂಲಕ ಕತ್ತರಿಸಿ, ಭಾರೀ ಅವಘಡ ಮಾಡುವುದಕ್ಕೆ ಸಂಚು ರೂಪಿಸಿದ ದುಷ್ಕರ್ಮಿಯನ್ನು ಪೊಲೀಸರು ಬಂಧಿಸಿರುವಂಥಾದ್ದನ್ನು ನೋಡಿದ್ದೇವೆ. ಆನಂತರ ಈಗ 2007ರ ಜನವರಿ I.I.Sc ಮೇಲೆ ದಾಳಿಗೆ ರುವಾರಿಯಾಗಿದ್ದ ಇಮ್ರಾನ್‌ನ ಬಂಧನವಾಗಿರುವಂಥಾದ್ದು. ಈಗ ಮೊನ್ನೆ 2008ರ ಜುಲೈನಲ್ಲಿ ನಗರದಲ್ಲಿ 7 ಸರಣಿ ಸ್ಫೋಟದಲ್ಲಿ ಒಬ್ಬರ ಸಾವು ಆಗಿರುವಂಥಾದ್ದು, ಇವೆಲ್ಲಾ ಮಾಹಿತಿಗಳು ಮಾಧ್ಯಮದವರಿಗೆ ಸಿಗುತ್ತದೆ. ನಾವೆಲ್ಲಾ ನೋಡುತ್ತೇವೆ. ಆದರೆ ಗೃಹ ಇಲಾಖೆ ಏನು ಮಾಡುತ್ತಿದೆ. ಎನ್ನುವಂಥಾದ್ದು ಇಷ್ಟೆಲ್ಲಾ ನೋಡಿದಾಗ ಮಾನ್ಯ ಮುಖ್ಯಮಂತ್ರಿಯವರೆ, ನಮ್ಮಲ್ಲಿರುವಂಥ Intellegence Wing, ಏನು ಇದೆ, Anti Terrorist Squad or Cell

ಏನು ಇದೆ, ಇವರೆಡೂ ಕೂಡ ಸರಿಯಾದಂಥ ರೀತಿಯಲ್ಲಿ ಕೆಲಸಗಳನ್ನು ಮಾಡದೇ ಇರುವುದರಿಂದ ಅವರು ಅದರ ಬಗ್ಗೆ ಹೆಚ್ಚು alert ಆಗದೇ ಇರುವುದರಿಂದ ಈ ರೀತಿಯಾದಂಥ ಕೃತ್ಯಗಳು, ಘಟನೆಗಳು, ವಿಧ್ವಂಸಕ ಕೃತ್ಯಗಳು ನಡೆಯುತ್ತಿವೆ. ಇವೊತ್ತೊ ಉಗ್ರರ ತಂಗುದಾಣ ಏನು ಆಗುತ್ತಿದೆ. ಇವೊತ್ತು ಎಲ್ಲಾ ರೀತಿಯ ಉಗ್ರರು ಅವರು ಬೆಂಗಳೂರನ್ನು ಕೇಂದ್ರಿಕೃತ ಮಾಡಿಕೊಂಡಿರುವಂಥಾದ್ದನ್ನು ನೋಡಬಹುದು. ನಾವು ಬೆಂಗಳೂರು ಸಿಲಿಕಾನ್ ಸಿಟಿ ಎಂದು ಹೆಮ್ಮೆಯಿಂದ ಏನು ಹೇಳುತ್ತೇನೆ. ಇದೇ ರೀತಿಯಲ್ಲಿ ಘಟನೆಗಳು ನಡೆದಾಗ ಮಾತ್ರ ಅದರ ಬಗ್ಗೆ ಎಚ್ಚರ ವಹಿಸಿ, ಚರ್ಚೆ ಮಾಡಿ, ಯೋಚನೆ ಮಾಡುವಂಥಾದ್ದು ಆಗಿ, ಅನಂತರ ಅದರ ಬಗ್ಗೆ ತಾತ್ಸಾರವಾದಂಥ ರೀತಿಯಲ್ಲಿ ನಮ್ಮ ಮನೋಭಾವವಿದ್ದರೆ, ಬಹಳ ಅಪಾಯಕಾರಿವಾದಂಥ ಘಟನೆಗಳು ನಡೆಯುವ ಸಾಧ್ಯತೆಗಳು ಇವೆ. ಇನ್ನು ಮುಂದಾದರೂ ನಾವು ಎಚ್ಚೆತ್ತು ಕಣ್ಣಲ್ಲಿ ಕಣ್ಣಿಟ್ಟು, ಈ ರೀತಿಯಾದ ಭಯೋತ್ಪಾದನೆ ಕೊನೆ ಮಾಡುವ ರೀತಿಯಲ್ಲಿ ಇದನ್ನು ಎದುರಿಸುವಂತಹ ರೀತಿಯಲ್ಲಿ ಸರ್ಕಾರ ಸಜ್ಜಾಗಬೇಕೆಂಬ ಮಾತನ್ನು ತಮ್ಮ ಮುಖಾಂತರ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ: 25–7–2008 ಶುಕ್ರವಾರದಂದು ನಡೆದಂಥ ಘಟನೆ ಬಗ್ಗೆ ಪ್ರತಿಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ಡಿ.ಕೆ. ಶಿವಕುಮಾರ್ ರವರು, ಶ್ರೀ ಆರ್. ರೋಷನ್‌ಬೇಗ್, ಶ್ರೀ ವಿ. ಸೋಮಣ್ಣನವರು, ಶ್ರೀ ಹೆಚ್.ಡಿ. ರೇವಣ್ಣನವರು, ಶ್ರೀ ವಿ. ಮುನಿಯಪ್ಪನವರು, ಶ್ರೀ ಆರ್. ದಿನೇಶ್ ಗುಂಡೂರಾವ್‌ರವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು, ಶ್ರೀ ಶಿವಲಿಂಗೇಗೌಡರು, ಶ್ರೀ ಯೋಗೇಶ್ ಭಟರು, ಶ್ರೀ ನೆ.ಲ. ನರೇಂದ್ರಬಾಬು, ಶ್ರೀ ಶ್ರಿನಿವಾಸ ಪ್ರಸಾದ್‌ರವರು, ಸುಮಾರು 12 ಜನ ಸದಸ್ಯರು ತಮ್ಮ ಮಹತ್ವದ ಅಭಿಪ್ರಾಯಗಳನ್ನು, ಸಲಹೆಗಳನ್ನು ಎಚ್ಚರಿಕೆಗಳನ್ನು ಕೊಟ್ಟಿದ್ದಾರೆ. ಒಂದು ಸಮಾಧಾನದ ಸಂಗತಿ ಎಂದರೆ ಈ ಚರ್ಚೆ ಒಟ್ಟು ರಾಜ್ಯದ ಹಿತದೃಷ್ಟಿ, ಬೆಂಗಳೂರಿನ ಹಿತದೃಷ್ಟಿ ರಕ್ಷಣೆ ಇದರ ಬಗ್ಗೆ ರಚನಾತ್ಮಕವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅದಕ್ಕೋಸ್ಕರ ಸದನದ ಎರಡೂ ಭಾಗದ ಸದಸ್ಯರುಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ ಇದು ರಚನಾತ್ಮಕವಾಗಿ ರಾಜ್ಯದ ಹಿತದೃಷ್ಟಿಯಿಂದ ಈ ಚರ್ಚೆ ನಡೆದಿದೆ. ನಾನು ಸರ್ಕಾರದ ಪರವಾಗಿ ಒಂದು statement ಅನ್ನು ಮೊದಲು ಓದುತ್ತೇನೆ. ಆನಂತರ ತಾವು ಕೇಳುವ

ಪ್ರಶ್ನೆಗಳಿಗೆ ತಾವು ಪ್ರಸ್ತಾಪ ಮಾಡಿದ ಪ್ರಶ್ನೆಗಳಿಗೆ ಸರ್ಕಾರದ ಕಡೆಯಿಂದ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ದಿನಾಂಕ : 25–07–2008 ರಂದು ಎಂಟು ಸ್ಥಳಗಳಲ್ಲಿ ಸರಣಿ ಬಾಂಬ್‌ಗಳನ್ನು ಮಧ್ಯಾಹ್ನ 1.00 ಗಂಟೆಯಿಂದ ಮಧ್ಯಾಹ್ನ 1.40 ಗಂಟೆಯ ಒಳಗೆ ಸ್ಫೋಟಿಸಲಾಗಿದೆ. ಈ ಬಾಂಬ್ ಸ್ಫೋಟಗಳು ಮೈಸೂರು ರಸ್ತೆ ಕಾನ್‌ಕಾರ್ಡ್ ಮೋಟಾರ್ಸ್ ಬಳಿ, ರಾಜಾರಾಮ್ ಮೋಹನ್ ರಾಯ್ ರಸ್ತೆಯ ಐ.ಟಿ.ಸಿ. ಬಿಲ್ಡಿಂಗ್ ಬಳಿ, ಹೊಸೂರು ರಸ್ತೆಯ ಸೆಂಟ್ ಜಾನ್ಸ್ ಆಸ್ಪತ್ರೆಯ ಬಳಿ, ಆಡುಗೋಡಿಯ ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬಳಿ, ಆಡುಗೋಡಿಯ ಸುಬ್ಬಣ್ಣ ಗಾರ್ಡನ್ ಚರಂಡಿ ಬಳಿ ಶಾಂತಿನಗರದ ಬುರ್ಲೆ ಗಲ್ಲಿಯಲ್ಲಿರುವ ಹರ್ಕ್ಯುಲಸ್ ಸರ್ಕಲ್ ಶೋ ರೂಂ ಎದುರು, ಮೈಸೂರು ರಸ್ತೆಯ ಪಂತರ ಪಾಳ್ಯದ ಪಾಪಣ್ಣ ಬಿಲ್ಡಿಂಗ್ ಎದುರು ಮತ್ತು ಮೈಸೂರು ರಸ್ತೆಯ ಹೊಸ ಗುಡ್ಡದ ಹಳ್ಳಿ ಪ್ರೀಮಿಯರ್ ಇರಿಗೇಷನ್ ಕಚೇರಿ ಎದುರು ಸಂಭವಿಸಿರುತ್ತದೆ.

ಮಡಿವಾಳ ಚಕ್ ಪೋಸ್ಟ್ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಶ್ರೀಮತಿ ಸುಧಾ ತಂದೆ : ತಿಮ್ಮಶೆಟ್ಟಿ ಕುರುಬರ ಬೀದಿಹಳ್ಳಿ, ಜಾವಗಲ್, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ, ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಈ ಎಲ್ಲಾ ಬಾಂಬ್ ಸ್ಫೋಟದಲ್ಲಿ ಒಟ್ಟು 10 ಜನರಿಗೆ ಸಾದಾ ಅಥವಾ ತೀವ್ರ ಪ್ರಮಾಣದ ಗಾಯಗಳಾಗಿರುತ್ತದೆ. ಗಾಯಗೊಂಡವರ ಹೆಸರುಗಳು ಬಳಗನಹಳ್ಳಿಯ ರವಿ (32), ಬೊಮ್ಮಸಂದ್ರದ ಗುಳ್ಳಮ್ಮ (75), ಆಡುಗೋಡಿಯ ಎಸ್ ಮುನಿಯಪ್ಪ (25) ಮತ್ತು ಅನ್ಬು (19), ಸಂಪಂಗಿರಾಮನಗರದ ಎಂ. ಮುನಿರಾಜು (29), ವಿಜಯನಗರದ ಚೇತನ್ ಕುಮಾರ್ (22), ಲಕ್ಕಸಂದ್ರದ ರಮೇಶ್ (22), ರವೀಂದ್ರ (22), ವಿವಿಯನ್ ಮತ್ತು ಜಿತೇಂದ್ರ ಎಂಬುದಾಗಿ ಇರುತ್ತದೆ.

ಗಾಯಗೊಂಡ ವ್ಯಕ್ತಿಗಳಿಗೆ ಮಲ್ಯ, ಸೇಂಟ್ ಜಾನ್ಸ್ ಮತ್ತು ನಿಮಾನ್ಸ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗಿದೆ. ರವಿ ಎಂಬುದವರಿಗೆ ತಲೆ ಗಾಯವಾದ ಕಾರಣ ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಯಿಂದ ನಿಮಾನ್ಸ್ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಇವರು ಪ್ರಾಣಾಪಾಯದಿಂದ ಪಾರಾಗಿರುತ್ತಾರೆ. ಅವರು ಮತ್ತು ಇತರ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿರುತ್ತಾರೆ.

ಈ ಸ್ಫೋಟಗಳಿಂದ ವಾಹನಗಳ ಸಂಚಾರವು ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಕಾಲ ಕಡಿಮೆಯಾಗಿರುತ್ತದೆ. ಬಾಂಬ್ ಸ್ಫೋಟಗಳ ರೀತಿಯನ್ನು ಗಮನಿಸಿದರೆ, ಅವು ಬೆಂಗಳೂರು–ಹೊಸೂರು ರಸ್ತೆಯ ಮಡಿವಾಳ ಮತ್ತು ಆಡುಗೋಡಿ ಹಾಗೂ ಬೆಂಗಳೂರು–

ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿ ಮತ್ತು ಪಂತರಪಾಳ್ಯಕ್ಕೆ ಸೀಮಿತವಾಗಿರುವುದು ಸ್ಪಷ್ಟವಾಗುತ್ತದೆ. ಒಂದು ಬಾಂಬ್ ಸ್ಫೋಟ ಮಾತ್ರ ಸಂಪಂಗಿರಾಮನಗರ ಸರಹದ್ದಿನ ರಾಜಾರಾಮ್ ಮೋಹನ್ ರಾಯ್ ರಸ್ತೆಯ ಬಳಿ ಸಂಭವಿಸಿರುತ್ತದೆ. ಎಲ್ಲಾ ಬಾಂಬ್ ಸ್ಫೋಟಗಳು ಪ್ರಮುಖ ರಸ್ತೆಗಳ ಪಾದಚಾರಿ ದಾರಿಗಳ ಮೇಲೆ ಸಂಭವಿಸಿದ್ದು, ಇವುಗಳನ್ನು ಭಯೋತ್ಪಾದಕರು ವಾಹನಗಳಲ್ಲಿ ತಂದು ಅವಿತಿಟ್ಟಿರುವುದು ಸ್ಪಷ್ಟವಾಗುತ್ತದೆ.

ಸ್ಫೋಟಗೊಳ್ಳದ ಒಂದು ಬಾಂಬ್ ಬೆಂಗಳೂರು-ಹೊಸೂರು ರಸ್ತೆಯ ಫೋರಂ ಮಾಲ್ ಬಳಿ ದಿನಾಂಕ : 26-07-2008 ರಂದು ಸುಮಾರು 11.00 ಘಂಟೆಗೆ ಪತ್ತೆಯಾಗಿರುತ್ತದೆ. ಸ್ಫೋಟಗೊಳ್ಳದ ಈ ಬಾಂಬ್‌ನ್ನು ಸಿಮೆಂಟ್ ಕಾಸ್ಟಿಂಗ್‌ನಲ್ಲಿ ಕಬ್ಬಿಣದ ಬೋಲ್ಟ್ ಮತ್ತು ನಟ್‌ಗಳನ್ನು ಹುದುಗಿಸಿ, ಡಿಜಿಟಲ್ ಪ್ರಿಂಟೆಡ್ ಸರ್ಕ್ಯೂಟ್, ಡೆಟೋನೇಟರ್‌ಗಳನ್ನು ಮತ್ತು ಅಮೋನಿಯಂ ನೈಟ್ರೇಟ್ ಸ್ಫೋಟಕ ವಸ್ತುಗಳಿಗೆ ಒಳಗಡೆ ಜೋಡಿಸಿ, ಸಿಮೆಂಟ್ ಕಾಂಕ್ರೀಟ್ ಬಾಂಬ್‌ನ್ನು ತಯಾರಿಸಿರುವುದು ಸ್ಪಷ್ಟವಾಗುತ್ತದೆ. ಹೈದ್ರಾಬಾದ್‌ನ ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯದ, ದೆಹಲಿಯ ಎನ್.ಎಸ್.ಜಿ. ಹಾಗೂ ಬೆಂಗಳೂರಿನ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಈ ಬಾಂಬ್‌ನ್ನು ಪರೀಕ್ಷಿಸಿದ್ದು, ಅವರ ಅಭಿಪ್ರಾಯದಂತೆ ಇದೊಂದು ಶಕ್ತಿಯುತ ಸ್ಫೋಟಕ ಬಾಂಬ್ ಆಗಿದ್ದು, ಇದು ಹಲವಾರು ಜನರ ಜೀವಗಳನ್ನು ತೆಗೆಯುವ ಹಾಗು ಆಸ್ತಿಪಾಸ್ತಿಗಳನ್ನು ತೆಗೆಯುವ ಹಾಗು ಆಸ್ತಿಪಾಸ್ತಿಯನ್ನು ನಾಶಪಡಿಸುವ ಸಾಮರ್ಥ್ಯವನ್ನು ಹೊಂದಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಹೊರನೋಟಕ್ಕೆ ಈ ಬಾಂಬ್ ಸಿಮೆಂಟ್‌ನ ಹೂವಿನ ಕುಂಡದಂತೆ ಕಂಡುಬರುತ್ತದೆ. ರಾಜ್ಯ ಗುಪ್ತವಾರ್ತೆಯ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳವು ಈ ಕಾಂಕ್ರಿಟ್ ಬಾಂಬ್‌ನ್ನು ದಿನಾಂಕ 26-07-2008 ರಂದು ನಿಷ್ಕ್ರಿಯಗೊಳಿಸುವುದರಲ್ಲಿ ಮಹತ್ತರವಾದ ಪಾತ್ರವಹಿಸಿದೆ. ಶ್ವಾನದಳ ಮತ್ತು ಬೆರಳಚ್ಚು ತಜ್ಞರ ಸೇವೆಯನ್ನು ತನಿಖಾ ಕ್ರಮದಲ್ಲಿ ಈಗಾಗಲೇ ಬಳಸಿಕೊಳ್ಳಲಾಗಿದೆ.

ಸರಣಿ ಬಾಂಬ್ ಸ್ಫೋಟಗಳ ಕುರಿತಂತೆ ಬೆಂಗಳೂರು ನಗರದ ಠಾಣೆಗಳಲ್ಲಿ ಹಲವಾರು ಕಲಂಗಳ ಹಾಗೂ ಕಾಯಿದೆಗಳ ಅಡಿಯಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿಕೊಂಡು ಜಂಟಿ ಪೊಲೀಸ್ ಆಯುಕ್ತರನ್ನು ಒಳಗೊಂಡಂತೆ ವಿಶೇಷವಾದ ತನಿಖಾದಳವನ್ನು ರಚಿಸಿಕೊಂಡು ತನಿಖೆ ನಡೆಸಲಾಗಿರುತ್ತದೆ.

ಚನ್ನಪಟ್ಟಣ ಪೊಲೀಸರು ಕಬ್ಬಿಣದ ಪೆಟ್ಟಿಗೆಯಲ್ಲಿ ಇಟ್ಟಿದ್ದ ಸ್ಫೋಟಕ ವಸ್ತುಗಳನ್ನು ಚನ್ನಪಟ್ಟಣದ ಕುವೆಂಪುನಗರದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟಾಯ್ಸ್ ಎಂಪೋರಿಯಂ ಬಳಿ ದಿನಾಂಕ 24-07-2008 ರಂದು ವಶಪಡಿಸಿಕೊಂಡಿರುತ್ತಾರೆ. ಇದರಲ್ಲಿದ್ದ ಬಾಂಬ್ ಕಬ್ಬಿಣದ ಪೆಟ್ಟಿಗೆಯಲ್ಲಿಯೇ ಒಳ ಸ್ಫೋಟಗೊಂಡಿರುತ್ತದೆ. ಈ ಪ್ರಕರಣವನ್ನು ಕೇಂದ್ರ ವಲಯದ ಐ.ಜಿ.ಪಿ. ರವರ ನೇತೃತ್ವದ ತಂಡ ತನಿಖೆ ನಡೆಸುತ್ತಿದೆ. ವಶಪಡಿಸಿಕೊಂಡಿದ್ದ ಸ್ಫೋಟಕ ವಸ್ತುಗಳನ್ನು ಬೆಂಗಳೂರು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಲಾಗಿದೆ.

ಕರ್ನಾಟಕ ಸರ್ಕಾರವು ಮೃತಪಟ್ಟ ಶ್ರೀಮತಿ ಸುಧಾರವರ ವಾರಸುದಾರರಿಗೆ ರೂ. 1,00,000/- ಗಳ ಪರಿಹಾರ ಧನ ಘೋಷಿಸಿದೆ ಹಾಗೂ ಸಾದಾ ಪ್ರಮಾಣದ ಮತ್ತು ತೀವ್ರ ಪ್ರಮಾಣದ ಗಾಯಗೊಂಡವರಿಗೆ ಕ್ರಮವಾಗಿ ರೂ. 25,000/- ರಿಂದ ರೂ. 50,000/- ಗಳ ಮೊತ್ತದ ಪರಿಹಾರವನ್ನು ಘೋಷಿಸಿದೆ. ಸರ್ಕಾರವು ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳವು ಸ್ಫೋಟಗೊಳ್ಳದ ಬಾಂಬನ್ನು ನಿಷ್ಕ್ರಿಯಗೊಳಿಸಿದ ಉತ್ತಮ ಕಾರ್ಯಕ್ಕಾಗಿ ರೂ. 1,00,000-00 ಗಳನ್ನು ಬಹುಮಾನವನ್ನು ಘೋಷಿಸಿದೆ.

ಬೆಂಗಳೂರು ನಗರದಲ್ಲಿ ಸಂಭವಿಸಿದ ಸರಣಿ ಸ್ಫೋಟಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಹಾಗೂ ಕರ್ನಾಟಕದ ಇತರ ಕಡೆಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಎಚ್ಚರಿಕೆ ಸಂದೇಶಗಳನ್ನು ಘಟಕಾಧಿಕಾರಿಗಳಿಗೆ ಕಳುಹಿಸಿ, ಇನ್ನು ಮುಂದೆ ಬೆಂಗಳೂರಿನಲ್ಲಾಗಲೀ ಅಥವಾ ಕರ್ನಾಟಕದ ಇತರ ಪ್ರದೇಶಗಳಲ್ಲಾಗಲೀ ಇಂತಹ ಸ್ಫೋಟಗಳು ಜರುಗದಂತೆ ನೋಡಿಕೊಳ್ಳುವಂತೆ ಸೂಚಿಸಲಾಗಿದೆ. ಪೊಲೀಸ್ ಸಿಬ್ಬಂದಿಯನ್ನು ಸೂಕ್ಷ್ಮ ಹಾಗೂ ಇತರ ಸಂಭವನೀಯ ಪ್ರದೇಶಗಳಲ್ಲಿ ಬಾಂಬ್‌ಗಳನ್ನು ಸಿಡಿಸದಂತೆ ತಡೆಗಟ್ಟಲು ಇತರ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಾನೂ ಸೇರಿದಂತೆ ಹಿರಿಯ ಸಚಿವರು ಹಾಗು ಅಧಿಕಾರಿಗಳು ಸ್ಥಳಗಳಿಗೆ ಭೇಟಿ ನೀಡಿ ಸೂಕ್ತ ನಿರ್ದೇಶನಗಳನ್ನು ನೀಡಿರುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಆಸ್ಪತ್ರೆಗಳಿಗೆ ಭೇಟಿ ನೀಡಿ ಗಾಯಾಳುಗಳನ್ನು ಮಾತನಾಡಿಸಿರುತ್ತಾರೆ.

ತನಿಖಾ ತಂಡದ ಅಧಿಕಾರಿಗಳು ದೇಶದ ಇತರ ಭಾಗಗಳ ಪೊಲೀಸ್ ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ. ರಾಜ್ಯ ಗುಪ್ತವಾರ್ತೆ ಮತ್ತು ಕೇಂದ್ರ ಗುಪ್ತವಾರ್ತೆ ಇಲಾಖೆಗಳು ಮಾಹಿತಿಯನ್ನು ನಗರ ಪೊಲೀಸ್ ಅಧಿಕಾರಿಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ಪೊಲೀಸ್

ಮಾಧ್ಯಮಗಳ ಮತ್ತು ಸಂಘ ಸಂಸ್ಥೆಗಳ ಮುಖಾಂತರ ಸಾರ್ವಜನಿಕರಿಗೆ ಗುರುತಿಸಿದ ವಸ್ತುಗಳ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ.

ಸರ್ಕಾರವು ಭಯೋತ್ಪಾದಕ ನಿಗ್ರಹ ದಳಗಳಿಗೆ ಬೇಕಾದ ಸವಲತ್ತುಗಳನ್ನು ಪೂರೈಸಿ, ಇವುಗಳನ್ನು ಸುಭದ್ರಗೊಳಿಸುವ ಕ್ರಮ ಕೈಗೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಆಂತರಿಕ ಭದ್ರತೆ) ಹುದ್ದೆಯನ್ನು ಈಗಾಗಲೇ ಸೃಜನೆ ಮಾಡಿ, ಒಬ್ಬ ಅಧಿಕಾರಿಯನ್ನು ನೇಮಕ ಮಾಡಲಾಗಿದೆ. ಸರ್ಕಾರವು ಭಯೋತ್ಪಾದಕ ಕೃತ್ಯಗಳನ್ನು ರಾಜ್ಯದಲ್ಲಿ ಹತ್ತಿಕ್ಕಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ದೃಢ ನಿರ್ಧಾರವನ್ನು ಕೈಗೊಂಡಿದೆ. ಅದೇ ದಿನ ಸಚಿವ ಸಂಪುಟದ ತುರ್ತು ಸಭೆಯನ್ನು ನಡೆಸಿ, ವಸ್ತುಸ್ಥಿತಿಗಳನ್ನು ಪರಿಶೀಲಿಸಲಾಗಿದೆ. ಸರ್ಕಾರದವತಿಯಿಂದ ಪರಿಶೀಲನೆ ಪ್ರತಿದಿನ ನಡೆಯುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಜನತೆಗೆ ಶುಕ್ರವಾರ ಒಂದು ರೀತಿಯ ಕರಾಳ ದಿವಸವಾದರೆ, ಗುಜರಾತಿನ ಅಹಮದಾಬಾದ್ ಮತ್ತಿತರ ನಗರಗಳ ಜನತೆಗೆ ಕೇವಲ ಕರಾಳವಷ್ಟೇ ಅಲ್ಲ, ಅತ್ಯಂತ ಭಯಾನಕವೂ ಆಗಿತ್ತು. ಮತ್ತು ಇಡೀ ದೇಶ ಆತಂಕಗೊಂಡು ಅದರ ಬಗ್ಗೆ ಖಂಡನೀಯ ಹೇಳಿಕೆ ಕೊಟ್ಟಿರುವಂಥಾದ್ದು, ಈ ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ನಮ್ಮ ಕೇಂದ್ರ ಗೃಹ ಸಚಿವರಾದ ಶಿವರಾಜ್ ಪಾಟೀಲ್‌ರವರು, ಅವರಿಗೆ ಏನು ಗೊತ್ತಿತ್ತೋ ಆ ಎಲ್ಲ ವಿವರಗಳ ಬಗ್ಗೆ ಸುಮಾರು ಅರ್ಧ ಗಂಟೆ ಕಾಲ ನನ್ನ ಜೊತೆ ಮಾತನಾಡಿ, ನಿರ್ದಾಕ್ಷಣ್ಯವಾಗಿ, ನಿರ್ಭೀತಿಯಿಂದ ಕ್ರಮ ತೆಗೆದುಕೊಳ್ಳಿ, ಕೇಂದ್ರ ಸರ್ಕಾರ ಎಲ್ಲ ರೀತಿಯ ನೆರವಿಗೆ ನಿಮ್ಮ ಜೊತೆಗೆ ಇದೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಕೇಂದ್ರದ ನಮ್ಮ ಪ್ರತಿಪಕ್ಷದ ನಾಯಕರಾದ ಮಾಜಿ ಕೇಂದ್ರದ ಗೃಹಸಚಿವರು ಪ್ರತಿ 3-4 ಗಂಟೆಗಳಿಗೊಮ್ಮೆ ನನ್ನನ್ನು ಸಂಪರ್ಕ ಮಾಡಿ ಇಲ್ಲಿನ ಬೆಳವಣಿಗೆಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿದ್ದಾರೆ. ನಾನು ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಘಟನೆ ನಡೆದ ತಕ್ಷಣ ನಮ್ಮ ಸಚಿವ ಸಂಪುಟದ ಹಿರಿಯ ಸಚಿವರು ಎಲ್ಲ ಕಡೆಗೆ ಹೋಗಿ ಬಂದರು. ತಕ್ಷಣ ತುರ್ತು ಕ್ಯಾಬಿಬೆಟ್ ಮೀಟಿಂಗ್ ಅನ್ನು ಮಾಡಿದೆವು. ಮಾಧ್ಯಮದ ಸ್ನೇಹಿತರೊಂದಿಗೆ ಮಾತನಾಡಿ, ರಾಜ್ಯದ ಜನ ಭಯಭೀತರಾಗದೆ ಸಹಕರಿಸಬೇಕು, ನಾವು ನಿಮ್ಮ ಜೊತೆಯಲ್ಲಿದ್ದೇವೆ, ನಿಮಗೆ ರಕ್ಷಣೆ ಕೊಡುತ್ತೇವೆ, ನಿಮ್ಮ ನಿತ್ಯದ ಚಟುವಟಿಕೆಗಳು ಏನಿವೆ, ಅವುಗಳ್ಯಾವುದೂ ನಿಲ್ಲಬಾರದು ಎನ್ನುವ ವಿನಂತಿಯನ್ನು ಮಾಡಿದೆವು. ಆಸ್ಪತ್ರೆಗಳಿಗೆ ಹೋಗಿ ಗಾಯಾಳುಗಳನ್ನು ಭೇಟಿ ಮಾಡಿ ಬಂದೆವು. ಎಲ್ಲಿ, ಯಾವ ರೀತಿಯ ಸೂಚನೆಗಳನ್ನು

ಕೊಡಬೇಕು, ಆ ಸೂಚನೆಗಳನ್ನು ಕೊಡುವಂಥ ಪ್ರಯತ್ನ ಮಾಡಿ, ಶುಕ್ರವಾರ, ನಿನ್ನೆ ಮತ್ತು ಇವತ್ತು ಬೆಳಗ್ಗೆ ಸುಮಾರು 2–3 ಗಂಟೆಗಳ ಕಾಲ ಉನ್ನತ ಪೊಲೀಸ್ ಅಧಿಕಾರಿಗಳ ಜೊತೆ ಏನೇನು ಘಟನಾವಳಿಗಳು ನಡೆದಿವೆ, ನಾವು ಯಾವ ರೀತಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಬಹಳ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಮತ್ತು ಏನೇನು ಸೂಕ್ಷ್ಮ ನಿರ್ಧಾರಗಳನ್ನು ಮಾಡಬೇಕೋ ಅದನ್ನು ಮಾಡಬೇಕು, ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಸೂಚನೆಯನ್ನು ನಾನು ಮತ್ತು ನಮ್ಮ ಗೃಹ ಸಚಿವರು ಕೊಟ್ಟಿದ್ದೇವೆ. ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳುತ್ತೇನೆ, ಇವೊತ್ತು ನಮ್ಮಲ್ಲಿ ಏನೇ ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೂ ಕೂಡ, ನಾವು ನೀವು ಎಲ್ಲ ಸೇರಿ, ಈ ರಾಷ್ಟ್ರ ಎದುರಿಸುತ್ತಿರುವಂಥ ಇಂಥ ಒಂದು ಜ್ವಲಂತ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇಡೀ ಜಗತ್ತಿನ ಜನ ಅಚ್ಚರಿಯಿಂದ ಪ್ರತಿಯೊಂದು ಘಟನಾವಳಿಗಳನ್ನು ನೋಡುತ್ತಿದ್ದಾರೆ, ಆತಂಕ ಗೊಂಡಿದ್ದಾರೆ. ಕೇಂದ್ರ ಸರ್ಕಾರದ ಎಲ್ಲ ಜವಾಬ್ದಾರಿಯುತ ವ್ಯಕ್ತಿಗಳು, ಪ್ರಧಾಯಿವರಿಂದ ಹಿಡಿದು ಎಲ್ಲರೂ ಸಹ ಆತಂಕಗೊಂಡು ನಿತ್ಯ ಇಲ್ಲಿ ನಡೆಯುತ್ತಿರುವಂಥ ವಿಷಯಗಳನ್ನು ತಿಳಿಯುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕೆ ಕೆಲವು ಶಕ್ತಿಗಳೂ ಪಿತೂರಿ ನಡೆಸುತ್ತಿವೆ ಎಂದು ಹೇಳತಕ್ಕಂಥದ್ದು ಇದೆ. ಕೆಲವು ದ್ರೋಹಿಗಳು, ಸಮಾಜಘಾತುಕ ಶಕ್ತಿಗಳು ಪಿತೂರಿ ನಡೆಸುತ್ತಿರುವುದರಿಂದಲೇ ಈ ರೀತಿಯ ಘಟನೆಗಳು ನಡೆಯುತ್ತಿವೆ. ರಾಜಸ್ಥಾನ, ಗುಜರಾತ್ ಮತ್ತು ಕರ್ನಾಟಕ ರಾಜ್ಯಗಳನ್ನು ಮುಖ್ಯಗುರಿಯನ್ನಾಗಿ ಮಾಡುತ್ತಿದ್ದೇವೆ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಆ ಮಾತನ್ನು ಹೇಳಿದ್ದೇನೆ. ಭಯೋತ್ಪಾದಕರ ಚಟುವಟಿಕೆಗಳು ಮತ್ತು ಬಹಳ ವರ್ಷಗಳಿಂದ ಬೆಂಗಳೂರು ಮತ್ತು ರಾಜ್ಯದ ಕೆಲವಡೆಗಳಲ್ಲಿ ಈ ಭಯೋತ್ಪಾದನೆಯ ಬೇರುಗಳನ್ನು ಬುಡಸಹಿತ ಕಿತ್ತು ಹಾಕುವುದಕ್ಕೆ ಕೇಂದ್ರ, ರಾಜ್ಯ ಸರ್ಕಾರ, ನಾಡಿನ ಜನ, ಈ ಮನೆಯ ಎಲ್ಲಾ ಸದಸ್ಯರು ಒಟ್ಟಾಗಿ ನಾವು ಹೋರಾಟವನ್ನು ಮಾಡಬೇಕಾಗಿದೆ. ಇದಕ್ಕೊಂದು ಪರಿಹಾರವನ್ನು ಹುಡುಕಬೇಕಾಗಿದೆ. ಇದು ನಿನ್ನೆ, ಮೊನ್ನೆ ನಡೆದಿದ್ದಲ್ಲ. ನಮ್ಮ ಹಿರಿಯ ಅನೇಕ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಶ್ರೀನಿವಾಸ್ ಪ್ರಸಾದ್‌ರವರು ಗಂಭೀರವಾಗಿ ವಿಷಯ ಪ್ರಸ್ತಾಪಿಸಿದ್ದಾರೆ. ಪ್ರತಿಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಯವರಾದ ಕುಮಾರಸ್ವಾಮಿಯವರು, ಶಿಕುಮಾರ್‌ರವರು, ಅನೇಕ ಸದಸ್ಯರು ಪ್ರಮುಖವಾದ ಸಲಹೆಗಳನ್ನು ಕೊಟ್ಟಿದ್ದಾರೆ. ದಿನಾಂಕ : 09–07–2000 ರಂದು ಬೆಂಗಳೂರಿನ ಕೆಲವಡೆ, ಹುಬ್ಬಳ್ಳಿ, ಗುಲ್ಬರ್ಗಾ, ವಾಡಿಯಲ್ಲಿ ಚರ್ಚ್‌ಗಳ ಮೇಲೆ ಸರಣಿ ಬಾಂಬ್ ಸ್ಫೋಟವಾಯಿತು. ಪಾವಗಡ

ತಾಲ್ಲೂಕಿನ ವೆಂಕಟಮ್ಮನಹಳ್ಳಿ ಶಾಲೆಯಲ್ಲಿ ಮೊಕ್ಕಾಂ ಹೂಡಿದ್ದ KSRP ಸಿಬ್ಬಂಧಿ CPI (ಮಾವೋವಾದಿಗಳು) ಕೈ ಬಾಂಬ್ ದಾಳಿ ನಡೆಸಿ, ಗುಂಡಿನ ಸುರಿಮಳೆಯಾದ ಕಾರಣ 7 ಜನ ಪೊಲೀಸರು ಮತ್ತು ಒಬ್ಬ ನಾಗರಿಕ ವ್ಯತಪಟ್ಟಿದ್ದರು. ದಿನಾಂಕ : 28-12-2005ರಂದು ಭಯೋತ್ಪಾದನೆ ಸಂಘಟನೆಗೆ ಸೇರಿದ ಉಗ್ರಗಾಮಿಗಳು IISc, (Indian Institute of Science) ಸಂಸ್ಥೆಯ ಮೇಲೆ ಕೈ ಬಾಂಬ್ ಹಾಕಿ A.K. 47 ಬಂದೂಕಿನಿಂದ ದಾಳಿ ನಡೆಸಿ ಡಾ॥ ಎಂ.ಸಿ. ಪುರಿ ಎನ್ನುವ ವಿಜ್ಞಾನಿ ಮೃತಪಟ್ಟರು ಮತ್ತು ಇನ್ನಿತರ 4 ವಿಜ್ಞಾನಿಗಳಿಗೆ ಗಾಯಗಳಾದವು. ಭಯೋತ್ಪಾದಕರು, ಹುಬ್ಬಳ್ಳಿಯ 1ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಬಾಂಬ್ ಸ್ಫೋಟ ನಡೆಸಿದರು. ಇನ್ನೂ ಅನೇಕ ರೀತಿಯ ಘಟನಾವಳಿಗಳು ನಡೆದಿರುವುದು ನಿಮಗೆಲ್ಲ ಗೊತ್ತಿರುವ ಸಂಗತಿ. ನಾವು ಕಳೆದ 3 ದಿವಸಗಳಿಂದ ನಿರಂತರವಾಗಿ ಅಧಿಕಾರಿಗಳ ಜೊತೆ, ನಮ್ಮ ಪ್ರತಿಪಕ್ಷದ ನಾಯಕರನ್ನು ಸಹಿತ ಈ ಮನೆಯ ಎಲ್ಲ ಸದಸ್ಯರಿಗೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ಭಯೋತ್ಪಾದನೆ ಬಗ್ಗೆ ರಹಸ್ಯವಾದ ಮಾಹಿತಿಗಳನ್ನು ಸಂಗ್ರಹಿಸುವುದಕ್ಕೆ ಇವೊತ್ತು ರಾಷ್ಟ್ರಮಟ್ಟದಲ್ಲಿ RAW (Research and Analysis Wing) ಇದೆ. Intelligence Bureau ಇದೆ. ರಾಜ್ಯ ಮಟ್ಟದಲ್ಲಿ Intelligence Wing ಇದೆ. ಈ ಎರಡೂ ಸಂಸ್ಥೆಗಳು ಅವರ ಜೊತೆಗೆ ಒಟ್ಟಿಗೆ ಸಮನ್ವಯದಿಂದ ಕೆಲಸ ಮಾಡಬೇಕಾಗಿದೆ. ಈ ದಿಸೆಯಲ್ಲಿ ರಾಜ್ಯದ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವ ದೃಷ್ಟಿಯಲ್ಲಿ ಅಕ್ಕಪಕ್ಕದ ರಾಜ್ಯಗಳಲ್ಲಿ ಏನೇನು ಘಟನೆಗಳಾಗುತ್ತಿವೆ ಎಂಬ ಬಗ್ಗೆ ಕೇಂದ್ರದ ಅಧಿಕಾರಿಗಳ ಜೊತೆ ನಮ್ಮ ಅಧಿಕಾರಿಗಳು ರಾತ್ರಿ ಹಗಲೂ ನಿರಂತರ ಸಂಪರ್ಕದಲ್ಲಿದ್ದಾರೆ. ಈ ರಾಜ್ಯದ Anti-Terrorist Cell ಅನ್ನು ಮತ್ತು Intelligence Wing ಅನ್ನು Law and Order, Police ಆಧುನೀಕರಣಕ್ಕೆ ವಿಶೇಷವಾದ ಅನುದಾನವನ್ನು ನೀಡಲಾಗುತ್ತದೆ. ಇದಕ್ಕಾಗಿ ಹಣದ ಕೊರತೆ ಎಂದು ನಾವು ಹಿಂದೆ ಮುಂದೆ ನೋಡುವುದಿಲ್ಲ. ಅದಕ್ಕೇನೇನು ಮಾಡುವುದಕ್ಕೆ ಸಾಧ್ಯವಿದೆಯೋ, ಅದನ್ನು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ. ನಾವು, ನೀವು ಎಲ್ಲ ಸೇರಿ ಯಾವುದೇ ರಾಜಕಾರಣವನ್ನು ಇದರಲ್ಲಿ ತರದೇ ದೇಶದ ಉದ್ವೆಗಲಕ್ಕೆ ಅನೇಕ ರಾಜ್ಯಗಳಲ್ಲಿ ದೆಹಲಿ ಸೇರಿದಂತೆ, ಇದನ್ನು ಎದುರಿಸುತ್ತಿರುವುದರಿಂದ ಈ ಹಿಂದೆ ಎನ್‌ಡಿಎ ಸರ್ಕಾರವಿದ್ದಾಗ 2002ರಲ್ಲಿ ಅದಕ್ಕೊಂದು ಪೋಟಾ ಕಾಯಿದೆ ಇತ್ತು. ಅದನ್ನು ಮತ್ತೆ ಜಾರಿಗೆ ತರುವುದಕ್ಕೋಸ್ಕರ ನಾವು, ನೀವೆಲ್ಲ ಸೇರಿ ಪ್ರಧಾನಿಯವರನ್ನು, ಕೇಂದ್ರದ ಗೃಹ ಸಚಿವರನ್ನು ಮನವೊಲಿಸಬೇಕಾಗಿದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ. ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಭಯೋತ್ಪಾದನೆ ಹೇಗೆ ಹುಟ್ಟಿಕೊಂಡಿತು ? ಏಕೆ

ಹುಟ್ಟಿಕೊಂಡಿತು? ಅದಕ್ಕೆ ಯಾರಾರು ಪರೋಕ್ಷವಾಗಿ, ಅಪರೋಕ್ಷವಾಗಿ ಕಾರಣೀಭೂತರಾಗಿದ್ದಾರೆ ? ಈ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಗಂಭೀರವಾದ ಚಿಂತನೆಯಾಗಬೇಕಾಗಿದೆ. ಬಹುಶಃ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದಂತೆ, ಭಯೋತ್ಪಾದನೆ ಇವೊತ್ತು ಒಂದು ರಾಷ್ಟ್ರೀಯ ಸಮಸ್ಯೆಯಾಗಿದೆ. ರಾಜ್ಯದ ಗಡಿಯನ್ನು ಮೀರಿ ಭಯೋತ್ಪಾದನೆ ಬೆಳೆದು ನಿಂತಿರುವುದು ನಮಗೂ, ನಿಮಗೂ ಗೊತ್ತಿರುವ ಸಂಗತಿಯಾಗಿದೆ. ಈ ಘಟನೆ ಅತ್ಯಂತ ಹೇಯ ಮತ್ತು ಖಂಡನೀಯವಾಗಿದೆ. ಪಕ್ಷಭೇದ ಮರೆತು ನಾವೆಲ್ಲ ಒಟ್ಟಾಗಿ ಸಮಾಜ ದ್ರೋಹಿ, ರಾಷ್ಟ್ರ ದ್ರೋಹಿ ಶಕ್ತಿಗಳ ವಿರುದ್ಧ ಸಂಘಟಿತರಾಗಿ ಕೆಲಸ ಮಾಡಬೇಕಾಗಿದೆ. ಯಾರೇ ಒಬ್ಬರನ್ನೂ ಬೆಟ್ಟು ಮಾಡಿ ತೋರಿಸದೇ ಇಡೀ ನಾಡಿನ ಎಲ್ಲ ಜನರ ವಿಶ್ವಾಸವನ್ನು ತೆಗೆದುಕೊಂಡು ಈ ದಿಕ್ಕಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ. ಮಾನ್ಯ ರೋಷನ್‌ಬೇಗ್‌ರವರು ಸಲಹೆಯೊಂದನ್ನು ಕೊಟ್ಟರು. ಪೊಲೀಸ್ ಆಧುನೀಕರಣದ ಬಗ್ಗೆ ಕೆಲವು ಮಾಹಿತಿ ಕೊಟ್ಟಿದ್ದಾರೆ. ಪೊಲೀಸ್ ಆಧುನೀಕರಣದ ಬಗ್ಗೆ ಕೆಲವು ಮಾಹಿತಿ ನೀಡಿದ್ದೀರಿ, ಹಣ ಕೊಟ್ಟಿದ್ದರೆ ಉಪಯೋಗವಾಗುತ್ತದೆ ಎಂದು ಹೇಳಿದರು. ನಾನು ನಿನ್ನೆ ಮೊನ್ನೆ ಇದರ ಬಗ್ಗೆ ಎಲ್ಲ ವಿವರವನ್ನು ಪಡೆದಿದ್ದೇನೆ. I am at it. ನೀವೇನೇನು ಸಲಹೆ ಕೊಟ್ಟಿದ್ದೀರೋ ಅವೆಲ್ಲವನ್ನೂ ಸರಿಪಡಿಸುವುದಕ್ಕೆ ನಾನು ಶಕ್ತಿ ಮೀರಿ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ. ನಿನ್ನೆ ಬಾಲಕೃಷ್ಣರವರು ಹೇಳಿದ ಹಾಗೆ ನಾನು ಈಗಾಗಲೇ ಸೂಚನೆ ಕಟ್ಟಿದ್ದು ರಾತ್ರಿ ಗಸ್ತು ಚಟುವಟಿಕೆ ಪ್ರಾರಂಭವಾಗಿದೆ. ಇದರಲ್ಲಿ ಸಾರ್ವಜನಿಕರಿಗೆ ವಿಶ್ವಾಸ ಬರುವ ರೀತಿಯಲ್ಲಿ ಪ್ರಯತ್ನ ಮಾಡುವವರಿದ್ದೇವೆ. ಇದೆಲ್ಲವನ್ನೂ ನಾವು ಮಾಡುತ್ತಿದ್ದೇವೆ. ಮತ್ತೆ ಈ ಇಲಾಖೆಗಳನ್ನು ಭದ್ರ ಪಡಿಸುವುದಕ್ಕೋಸ್ಕರ ಕೇಂದ್ರ ಸರ್ಕಾರದ ನೆರವು ತುಂಬಾ ಅಗತ್ಯವಿದೆ. ಹಿಂದೆ ಎರಡು ಬಾರಿ ಇಂಥ ಘಟನೆಗಳು ನಡೆದಾಗ ಕೇಂದ್ರ ಗೃಹ ಸಚಿವರಾದಂಥ ಶಿವರಾಜ ಪಾಟೀಲ್‌ರವರು ವಿಧಾನಸೌಧಕ್ಕೆ ಬಂದಿದ್ದಾಗ ಅನೇಕ ಭರವಸೆಗಳನ್ನು ಕೊಟ್ಟಿದ್ದರು. ಯಾವುದಾದರೂ ಘಟನೆಗಳಾದಾಗ ಇರುವಂಥ ತೀವ್ರತೆ ಅದು ಆದಮೇಲೆ ಇರುವುದಿಲ್ಲ. ನಾವು ಅದರ ಬೆನ್ನು ಹತ್ತಿ ಹೋಗಬೇಕಾಗುತ್ತದೆ. ನಾನು ಪ್ರಧಾನಿಯವರಿಗೆ, ಗೃಹ ಸಚಿವರಿಗೆ ವಿನಂತಿ ಮಾಡುವವನಿದ್ದೇನೆ. ಆಗಾಗ್ಗೆ ಈ ರೀತಿ ಘಟನಾವಳಿ ನಡೆಯುತ್ತಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಜೊತೆಗೆ ಉನ್ನತ ಪೊಲೀಸ್ ಅಧಿಕಾರಿಗಳನ್ನು ಸ್ವತಃ ಗೃಹ ಸಚಿವರೇ ಪ್ರಧಾನಿಯವರ ಜೊತೆ ಚರ್ಚೆ ಮಾಡಿ ಈ ವಿಚಾರದಲ್ಲಿ ನಾವು ನಮ್ಮ ಶಕ್ತಿಯನ್ನು ಹಾಕಿ ರಾಜ್ಯದಿಂದ ಏನೇನು ಮಾಡಬೇಕು, ಕೇಂದ್ರದ ನೆರವನ್ನು ಯಾವ ರೀತಿ ಕೊಡಬೇಕು, ಈ ರೀತಿ ಒಟ್ಟಾಗಿ

ಇದನ್ನು ಎದುರಿಸುವುದಕ್ಕೆ ನಾವು ಯೋಚನೆ ಮಾಡಬೇಕಾಗಿದೆ. ಈ ಭಯೋತ್ಪಾದನೆ ಅಂತರರಾಷ್ಟ್ರೀಯ ಸಮಸ್ಯೆಯಾಗಿರುವುದರಿಂದ ಅದರ ಬಗ್ಗೆ ನಾವು ಏನೇನು ಮಾಡಬೇಕೋ ಮಾಡೋಣ. ನಾನು ನಾಡಿನ ಜನರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಭಯೋತ್ಪಾದಕರಿಗೆ ರಕ್ಷಣೆ ಕೊಡುವಂಥ, ಶಸ್ತ್ರಾಸ್ತ್ರಗಳನ್ನು ಪೂರೈಸುವಂಥ ಕೆಲವು ಜನ ನಮ್ಮಲ್ಲಿದ್ದಾರೆ. ನಾನು ಕೈಜೋಡಿಸಿ ಅವರಿಗೆ ವಿನಂತಿ ಮಾಡುತ್ತೇನೆ, ಈ ನಾಡಿನ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಎಲ್ಲೆಲ್ಲಿ ಈ ರೀತಿ ಸೂಕ್ಷ್ಮವಾದ ಘಟನೆಗಳು ನಡೆಯುತ್ತಿವೆ, ಅದು ತಮ್ಮ ಗಮನಕ್ಕೆ ಬಂದರೆ ಅದನ್ನು ಎಚ್ಚರಿಕೆಯಿಂದ ನಾಗರಿಕರು ಸಹ ನಮಗೆ ಸಹಕಾರವನ್ನು ಕೊಡಬೇಕು. ಇಲ್ಲದಿದ್ದರೆ, ಯಾವುದೇ ಗುಪ್ತದಳ, ಯಾರೂ ಸಹ ಇಂಥ ದೊಡ್ಡ ರಾಜ್ಯದಲ್ಲಿ ಅವರ ಸಹಕಾರವಿಲ್ಲದೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಸಾರ್ವಜನಿಕರು ಈ ಬಗ್ಗೆ ವಿಶೇಷವಾದ ಗಮನ ಕೊಡಬೇಕು. ಮತ್ತು ಯಾರು ಭಯೋತ್ಪಾದಕರಿಗೆ ಅವಕಾಶವನ್ನೇ ಮಾಡಿಕೊಟ್ಟರೆ ಅವರ ವಿರುದ್ಧ ನಿರ್ಭೀತಿಯಿಂದ ಕ್ರಮ ತೆಗೆದುಕೊಳ್ಳಬೇಕು. ಕೊಲೆ ಮಾಡುವುದು ಹೇಗೆ ಅಪರಾಧವೋ ಅದಕ್ಕೆ ಬೆಂಬಲ ಕೊಡುವುದು ಅಪರಾಧವೆಂದು ಹೇಗೆ ಹೇಳುತ್ತೇವೋ ಹಾಗೆ. ಭಯೋತ್ಪಾದಕರಿಗೆ ಆಶ್ರಯ ಕೊಟ್ಟು, ಅನುಕೂಲ ಮಾಡಿಕೊಡುವ ಪ್ರಯತ್ನವೇನಾದರೂ ನಿಮ್ಮ ಕಣ್ಣಿಗೆ ಕಂಡರೆ ಅದಕ್ಕೆ ಬಿಗಿಯಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ನಿರ್ದಾಕ್ಷಿಣ್ಯವಾಗಿ ಪೋಲೀಸ್‌ನವರಿಗೆ ಅಧಿಕಾರ ಕೊಡುತ್ತೇವೆ, ಅದರಲ್ಲಿ ನಾವ್ಯಾರೂ interfere ಆಗುವುದಿಲ್ಲ. ನೀವು ಆ ದಿಕ್ಕಿನಲ್ಲಿ ಗಮನಿಸಬೇಕು. ಹೊರಗಡೆಯಿಂದ ಯಾರು ಬರುತ್ತಿದ್ದಾರೆ, ಎಲ್ಲಿರುತ್ತಾರೆ, ಎಲ್ಲಿಗೆ ಹೋಗುತ್ತಾರೆ ? ಆಶ್ಚರ್ಯವೆಂದರೆ ನಾವು ನೀವು ಯಾರಾದರೂ visa ತೆಗೆದುಕೊಂಡು ಒಂದು ದೇಶಕ್ಕೆ ಹೋದರೆ ಒಂದು ದಿನ ಕೂಡ ಹೆಚ್ಚಿಗೆ ಇರುವುದಕ್ಕಾಗುವುದಿಲ್ಲ. Impossible. ಜಗತ್ತಿನ ಯಾವುದೇ ದೇಶದಲ್ಲಿ ಯಾವುದೇ ವ್ಯಕ್ತಿ visa ಮುಗಿದ ಮೇಲೆ ಒಂದೇ ಒಂದು ದಿನ ಹೆಚ್ಚಿಗೆ ನಾವು ಉಳಿಯುವ ಹಾಗಿಲ್ಲ. ಆದರೆ, ಭಾರತದಲ್ಲಿ ಯಾರು, ಯಾವಾಗ, ಎಲ್ಲಿಂದ ಬಂದರೂ ಅವರಿಗೆ visa ಇದೆಯೋ, ಇಲ್ಲವೋ ? ಗೊತ್ತಾಗುವುದಿಲ್ಲ. Visa ಅವಧಿ ಮುಗಿದ ಮೇಲೂ ಅವರು ಎಲ್ಲಿದ್ದಾರೆಂಬ ಬಗ್ಗೆ ಖಚಿತವಾದ ಮಾಹಿತಿಯೇ ನಮ್ಮಲ್ಲಿ ಇಲ್ಲ. ಅದೊಂದು ತರಹ ಯಾರು ಬೇಕಾದರೂ ಬರಬಹುದು, ಯಾರು ಬೇಕಾದರೂ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಂಡು ನೆಮ್ಮದಿಯಿಂದ ವಾಪಸ್ಸು ಹೋಗಬಹುದು ಎನ್ನುವ ಪರಿಸ್ಥಿತಿ ಇದೆ. ಇದರ ಬಗ್ಗೆ ಪೋಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಸರ್ಕಾರ ಎಂದ ಮೇಲೆ ಈ ನಾಡಿನ ಜನತೆಗೆ ಕಾನೂನು ಸುವ್ಯವಸ್ಥೆ ಕಾಪಾಡುವುದೇ ಮೊದಲ ಆದ್ಯತೆ. ಬೇರೆಯದು

ಆಮೇಲೆ. ಬಹುಶಃ ಈ ಜಗತ್ತಿನಲ್ಲಿ, ದೇಶದಲ್ಲೇ ಈ ಕರ್ನಾಟಕ ಶಾಂತಪ್ರಿಯ ರಾಜ್ಯ ಇದು. ಇಲ್ಲಿ ಒಳ್ಳೆಯ ವಾತಾವರಣವಿದೆ, ಇದನ್ನು ಕದಡುವ ಪ್ರಯತ್ನವೇನು ಮಾಡುತ್ತಿದ್ದಾರೆ, ಇದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ನಮ್ಮ ದೇಶಕ್ಕೆ ಬಹಳ ಉದ್ದವಾದ ಗಡಿ ಪ್ರದೇಶವಿದೆ. ನಮ್ಮ ರಾಜ್ಯದಲ್ಲಿ ಉದ್ದವಾದ ಕರಾವಳಿ ಪ್ರದೇಶವಿದೆ. ಹಿಂದೆ ಎಲ್ಲ ಸಚಿವರಾಗಿ ಅನುಭವವಿರುವವರು ಇದ್ದೀರಿ. ಸಮುದ್ರದ ಮೂಲಕ ಭಯೋತ್ಪಾದಕರು ಒಳ ನುಸುಳುತ್ತಿರುವ ಬಗ್ಗೆ, ಶಸ್ತ್ರಾಸ್ತ್ರಗಳು ಪೂರೈಕೆಯಾಗುತ್ತಿರುವ ಬಗ್ಗೆ ಸಿಕ್ಕಿಬಿದ್ದ ಹಲವಾರು ಭಯೋತ್ಪಾದಕರು Narco Analysis ಪರೀಕ್ಷೆಯಲ್ಲಿ ಬಾಯಿ ಬಿಟ್ಟಿದ್ದಾರೆ. ಅದರ ಬಗ್ಗೆ ನಮ್ಮ ಹತ್ತಿರ ಅನೇಕ ಮಾಹಿತಿಗಳಿವೆ. ಹಿಂದೇನೇನಾಯಿತು ? ಯಾವ್ಯಾವ ಘಟನೆಗಳಾದವು ? ಇದೆಲ್ಲದರ ಬಗ್ಗೆ ಬಿಗಿ ನಿಲುವು ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕು. ಈ ದಿಕ್ಕಿನಲ್ಲಿ ನಾವೆಲ್ಲ ಪ್ರಯತ್ನ ಮಾಡುತ್ತಿದ್ದೇವೆ. ಈಗ immediate ಆಗಿ ನಾನು ಈಗಾಗಲೇ ಹೇಳಿದಂತೆ ಈ ರೀತಿ ಘಟನೆಗಳು ನಡೆಯುತಿರುವಂಥ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಭಯೋತ್ಪಾದಕತೆಯ ನಿಗ್ರಹಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ಗೃಹ ಸಚಿವರ ಅಧ್ಯಕ್ಷತೆಯಲ್ಲೇ ಸಭೆ ಆಗಬೇಕು. ಈಗಾಗಲೇ ಗೃಹ ಸಚಿವರು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕೇಂದ್ರ ಸರ್ಕಾರ ಸಹ ಇದರ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಂಡಿದೆ. ಆದಷ್ಟು ಬೇಗನೆ ಮುಖ್ಯಮಂತ್ರಿಗಳ ಸಭೆ ಕರೆದು ಅವರಿಗೆ ಸೂಚನೆ ಕೊಟ್ಟು ಏನೇನು ಮಾಡಬೇಕೆನ್ನುವ ದಿಕ್ಕಿನಲ್ಲಿ ಅವರು ಪ್ರಯತ್ನ ಮಾಡುತ್ತಿದ್ದಾರೆ. ಆದಷ್ಟು ಬೇಗ ಈ ರೀತಿಯ ಸಭೆ ಕರೆಯಬೇಕೆಂದು ನಾನು ಕೇಂದ್ರದ ಗೃಹ ಸಚಿವರನ್ನು ಒತ್ತಾಯ ಮಾಡುತ್ತೇನೆ. ಮತ್ತೆ, ನೀವು ಸಹಕಾರ ಕೊಟ್ಟರೆ 2–3 ಪ್ರಯತ್ನ ಮಾಡುತ್ತೇವೆ. ಏನೇ ಕಷ್ಟ ಆಗಲಿ, ನಮ್ಮ ರಾಜ್ಯ ಸರ್ಕಾರ, ರಾಜ್ಯದ ಪ್ರಮುಖ ನಗರಗಳಲ್ಲಿ ವಾಸವಾಗಿರುವ ಜನರಿಗೆ ಒಂದು ಗುರುತಿನ ಚೀಟಿ ಕೊಡಬೇಕು. ಕಷ್ಟ ಆಗುತ್ತದೆ. ನಿಜ. ಸಮಯ ಹಿಡಿಯಲಿ, ಪರವಾಗಿಲ್ಲ. ಆ ದಿಕ್ಕಿನಲ್ಲಿ ವಿಶೇಷ ಪ್ರಯತ್ನ ಮಾಡಬೇಕೆಂದು ನಿನ್ನೆ ಸಲಹೆ ಕೊಟ್ಟರು. ಆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಭಯೋತ್ಪಾದಕತೆಯ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ನೀಡಿ ಅವರೂ ಕೂಡ ಭಯೋತ್ಪಾದನೆ ವಿರುದ್ಧ ಜಾಗರೂಕರಾಗಿರಲು ಜಾಗೃತಿ ಮೂಡಿಸುವ ಕಡೆ ಕೆಲಸ ಮಾಡುವುದಕ್ಕೆ ಗಮನ ಕೊಡುತ್ತೇವೆ. ಬಹಳ ಮುಖ್ಯವಾಗಿ, ನಗರ ಪ್ರದೇಶಗಳಲ್ಲಿ ಅಪರಿಚಿತರಿಗೆ ಬಾಡಿಗೆ ಮನೆ ಕೊಡುವ ವಿಚಾರದಲ್ಲಿ ಒಂದು ಸಾವಿರ ರೂ. ಬಾಡಿಗೆ ಕೊಡುವ ಕಡೆ 5,000 ರೂ. ಕೊಡುತ್ತಾನೆಂದರೆ ಅವನು ಬೇರೆ ಏನೋ ಚಟುವಟಿಕೆಗೆ ಇಲ್ಲಿ ಬಂದಿದ್ದಾನೆಂದು ಅರ್ಥ.

ಆದ್ದರಿಂದ, ಈ ಬಗ್ಗೆ ನಾನು ಅತ್ಯಂತ ವಿನಯದಿಂದ ಈ ಮನೆಯ ಮೂಲಕ ವಿನಂತಿ ಮಾಡುತ್ತೇನೆ, ಯಾರು ಬರುತ್ತಾರೆ, ಅವರ ಪರಿಚಯ ಇಲ್ಲದಿದ್ದರೆ, 5,000 ರೂ. ಕೊಡುವ ಕಡೆ 25 ಸಾವಿರ ರೂ. ಬಾಡಿಗೆ ಕೊಡುತ್ತಾರೆಂದು ಅಂಥವರಿಗೆ ಕೊಟ್ಟರೆ ಅದೂ ಒಂದು ರೀತಿಯ ಅಪರಾಧವಾಗುತ್ತದೆ ಅಥವಾ ಈ ದಿಕ್ಕಿನಲ್ಲಿ ನಾಗರಿಕರಲ್ಲಿಯೂ ಜಾಗರೂಕತೆ ಇರಬೇಕಾಗುತ್ತದೆ. ನನಗೇನೂ ಗೊತ್ತಿರಲಿಲ್ಲವೆಂದು ಎಲ್ಲ ಮುಗಿದ ಮೇಲೆ ಹೇಳಿದರೆ ಪ್ರಯೋಜನವಿಲ್ಲ. ಏನೇನು ಘಟನೆಗಳು ನಡೆದಿವೆ ಎಂಬುದು ನಿಮಗೆ ಗೊತ್ತಿದೆ. ನಾನು ಅದನ್ನು repeat ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಇಂಥ ಅನುಮಾನ ಬಂದಂಥ ವ್ಯಕ್ತಿಗಳ ಚಲನವಲನಗಳ ಬಗ್ಗೆ ನಾಗರೀಕರು ಪೊಲೀಸರಿಗೆ ಮಾಹಿತಿ ನೀಡಿದರೆ ನಾವು ಹೆಚ್ಚು ಗಮನ ಕೊಡುವುದಕ್ಕೆ ಅನುಕೂಲವಾಗುತ್ತದೆ. ಭಯೋತ್ಪಾದಕರೊಂದಿಗೆ ಸಂಬಂಧ ಹೊಂದಿರುವ ವ್ಯಕ್ತಿಗಳನ್ನು ಗುರುತಿಸುವುದಕ್ಕೆ ವಿಶೇಷ ತನಿಖಾ ತಂಡ ಹಾಗೂ ಅವರನ್ನೂ ಮತ್ತು ಭಯೋತ್ಪಾದನೆಯನ್ನು ನಿಗ್ರಹಿಸುವುದಕ್ಕೆ ವಿಶೇಷ ತರಬೇತಿ ನೀಡಿದ ಭಯೋತ್ಪಾದಕರ ವಿರೋಧಿ ದಳವನ್ನು ರಚಿಸಬೇಕು, ಪೊಲೀಸರಿಗೆ ಮಾನಸಿಕ ಸ್ಥೈರ್ಯ ತುಂಬಬೇಕೆಂದು ನಾವು ಯೋಚಿಸುತ್ತಿದ್ದೇವೆ. ಮತ್ತೆ, ಖಂಡಿತ ಆ ಪ್ರಯತ್ನ ಮಾಡೋಣ. ಇದಕ್ಕಿಂತ ಆದ್ಯತೆ ಬೇರೆ ಇಲ್ಲ. ನಾನು ಈಗಾಗಲೇ ಪೊಲೀಸ್ ಕಮಿಷನರ್, ಡಿಜಿಪಿ ಯವರೆಲ್ಲರ ಹತ್ತಿರ ಮಾತನಾಡಿದ್ದೇನೆ. ಪೊಲೀಸ್ ಇಲಾಖೆಗೆ ಭಯೋತ್ಪಾದಕತೆಯ ನಿಗ್ರಹಕ್ಕೆ ವಿಶೇಷ ತರಬೇತಿ ನೀಡುವುದು, ಮತ್ತು ಪೊಲೀಸ್ ಇಲಾಖೆಗೆ ಆಧುನಿಕ ಶಸ್ತ್ರಾಸ್ತ್ರ ತಂತ್ರಜ್ಞಾನ ಒದಗಿಸುವುದಕ್ಕೆ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಿದ್ದೇವೆ. ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಬಹಳ ಮುಖ್ಯವಾಗಿ, ನೂರಾರು ಕಡೆ ಅಲ್ಲ, ಸಾವಿರಾರು ಕಡೆ ಸೂಕ್ಷ್ಮ ಪ್ರದೇಶಗಳಲ್ಲಿ ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಿ ಸಂಶಯಾಸ್ಪದ ವ್ಯಕ್ತಿಗಳ ಚಲನವಲನಗಳ ಮೇಲೆ ನಿಗಾ ವಹಿಸಿ ಭಯೋತ್ಪಾದನೆಯನ್ನು ತಡೆಯುವುದಕ್ಕೆ ನಮ್ಮ ಶಕ್ತಿ ಮೀರಿ ನಿಮ್ಮನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಯತ್ನ ಮಾಡುತ್ತೇವೆ. ಈ ಮನೆಯ ಆ ಕಡೆ ಈ ಕಡೆ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ಈ ರೀತಿಯ ಸೂಕ್ಷ್ಮ ವಿಷಯದಲ್ಲಿ ಯಾರೂ ಆಕಸ್ಮಾತ್ ಯಾವುದೇ ಹೇಳಿಕೆಯನ್ನು ದಯಮಾಡಿ ಕೊಡಬಾರದು. ತಾವೆಲ್ಲ ಒಟ್ಟಾಗಿ ಸಹಕರಿಸಿದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲೂ ನನ್ನನ್ನೂ ಸೇರಿಸಿ ಯಾವುದೇ ಹೇಳಿಕೆಗಳು ಪ್ರತಿಪಕ್ಷದಲ್ಲಿರುವಂಥ ಯಾವುದೇ ಜನರಿಗೆ ಯಾವುದೇ ತಪ್ಪು ಗ್ರಹಿಕೆಗೆ ಅವಕಾಶವಾಗದ ರೀತಿಯಲ್ಲಿ ಅತ್ಯಂತ ಕಟ್ಟೆಚ್ಚರದಿಂದ ನಾವು ಹೇಳಿಕೆ ಕೊಡಬೇಕು. ಎಲ್ಲರೂ ಹೇಳಿಕೆ ಕೊಡುವ ಅಗತ್ಯವಿಲ್ಲ. ಮಾಧ್ಯಮದ ಸ್ನೇಹಿತರು

ಬರುತ್ತಾರೆ ಎಂದ ತಕ್ಷಣ, Electronic Media ದವರನ್ನು ನೋಡಿದ ತಕ್ಷಣ ಮಾತನಾಡುವ ಹವ್ಯಾಸಗಳೇನಿದೆ, ಅದನ್ನು ಎಲ್ಲರೂ ಸೇರಿ ಸ್ವಲ್ಪ ಹಿಡಿತ ಇಟ್ಟುಕೊಂಡು, ಸ್ವಲ್ಪ ಎಚ್ಚರಿಕೆ ವಹಿಸಿದರೆ ಅನುಕೂಲವಾಗಬಹುದು. ನಾನು ಇವೊತ್ತು Question Hour ಅನ್ನು ಬದಿಗೊತ್ತಿ ಅತ್ಯಂತ ಗಂಭೀರವಾದ ಚರ್ಚೆಯಾದಾಗ ಬಹಳ ಗಂಭೀರವಾದ ಸಲಹೆಗಳನ್ನು, ನಿಮ್ಮ ಅನುಭವದಿಂದ ಕೆಲವು ಮಾಹಿತಿಗಳನ್ನು ಕೊಟ್ಟಿದ್ದೀರಿ. ನಿಮಗೇನನಿಸುತ್ತದೆ ಆ ಸಲಹೆಗಳನ್ನು ಕೊಡಿ, ನಾವು ಬಿಚ್ಚು ಮನಸ್ಸಿನಿಂದ ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಮತ್ತೆ ಮತ್ತೆ ಈ ರೀತಿಯ ಘಟನಾವಳಿಗಳು ಆಗದ ರೀತಿಯಲ್ಲಿ ಕಟ್ಟೆಚ್ಚರ ವಹಿಸುತ್ತೇವೆನ್ನುವ ಭರವಸೆಯನ್ನು ನಾನು ಈ ಮನೆಗೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :– Home Minister ರವರು ದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇ ರೀತಿ ಮುಖ್ಯಮಂತ್ರಿಗಳು ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ, ನನಗೆ ಒಂದು ವಿಷಯ ಅರ್ಥವಾಗಲಿಲ್ಲ. ಏಕೆಂದರೆ, ನಾವು specific ಆಗಿ ಅವರಿಗೆ ಕೇಳಿದ್ದೇವೆ. ಕೆಲವು ವಿಚಾರಗಳನ್ನು ವಿಶೇಷವಾಗಿ ಈ Police Station jurisdiction ನಲ್ಲಿ ಯಾರೇ ಹೊರಗಿನವರು ಬಂದಾಗ ಆ Police Station ನಲ್ಲಿ ಅವರ ಬಗ್ಗೆ ಮಾಹಿತಿ ಪಡೆದುಕೊಳ್ಳತಕ್ಕಂಥದ್ದು ಆಗಬೇಕೆನ್ನುವುದು ಒಂದು. ಎರಡನೆಯದು, 10.30 ಗಂಟೆಗೆ ಆ Forum Mall ನಲ್ಲಿ ಬಾಂಬ್ ಇಟ್ಟಿದ್ದು ಅವರಿಗೆ ಗೊತ್ತಾದ ಮೇಲೆ ಈ 24 ಗಂಟೆಗಳಲ್ಲಿ ಎಲ್ಲ ಕಡೆ alert ಮಾಡಿದ್ದರೂ ಕೂಡ, ಅದು ಹೇಗಾಯಿತು ? ಏಕಾಯಿತು ? ಆ lapses ಆಗಿದ್ದರ ಬಗ್ಗೆ ಅವರು ಏನೂ ಹೇಳಲಿಲ್ಲ. ಮೂರನೆಯದಾಗಿ, specific ಆಗಿ ನಾವು ಇಂಥದ್ದು ತೆಗೆದುಕೊಳ್ಳುತ್ತೇವೆ, ಇಂಥದ್ದು ಮಾಡುತ್ತೇವೆ, ಇಷ್ಟು allocation ಮಾಡುತ್ತೇವೆ, ಇಂಥ machinery ತರುತ್ತೇವೆನ್ನುವ ಕುರಿತು ಹೇಳಲಿಲ್ಲ. Defuse ಮಾಡುವ ಬಗ್ಗೆ ನಾನು ಹೇಳಿದೆ. ಈಗೇನೋ ಒಂದು ಕಡೆಯಲ್ಲಿ ಘಟನೆ ಆಗಿದೆ. ಇಲ್ಲಿ ಯಾರೋ ಒಬ್ಬರಿಗೆ training ಕೊಟ್ಟಿದ್ದೀರಿ. ಆ ರೀತಿ training ಪಡೆದವರಲ್ಲಿ ಸುಕುಮಾರ್ ಎನ್ನುವವರು ಒಬ್ಬರು. ಆದರೆ, ಇದೇ ರೀತಿಯಾಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇಲ್ಲಿ ಏಕ ಕಾಲದಲ್ಲಿ ಸ್ವಲ್ಪ ಎಲ್ಲೋ ಹೆಚ್ಚು ಕಡಿಮೆಯಾದಾಗ, ಅದು ಆಗಬಾರದೆಂಬುದು ನಮ್ಮೆಲ್ಲರ ಇಚ್ಛೆ ಇದೆ, ಆದರೆ, ಏನೋ ಅಪ್ಪಿ ತಪ್ಪಿ ಆದಾಗ ಅಂಥ ಕಡೆಯೂ ಕೂಡ ಮಾಡುವುದಕ್ಕೆ ವ್ಯವಸ್ಥಿತವಾದಂಥ equipments ಸಜ್ಜಾಗಿರಬೇಕು ಎನ್ನುವ ಬಗ್ಗೆ ನಾನು ಕೇಳಿದೆ. ಅದರ ಬಗ್ಗೆಯೂ ಕೂಡ ಏನೂ ಹೇಳಲಿಲ್ಲ. ಯಾರೂ ಕೂಡ ವಿರೋಧ ಪಕ್ಷದವರಾಗಲಿ, ಬೇರೆಯವರಾಗಲಿ ಪ್ರಚೋದನಕಾರಿ

statement ಕೊಡಬಾರದು, ಹೇಳಬಾರದು ಎಂದು ಅವರು appeal ಮಾಡಿದರು. ಸಂತೋಷ, ಆದರೆ, ನಾವೇ appeal ಮಾಡಿಕೊಂಡಿದ್ದೇವೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಚೋದನಕಾರಿ statement ಕೊಡುವ ಕೆಲಸ ಅವರ ಕಡೆಯಿಂದಲೇ ಆಗುತ್ತಿದೆ. ಆಗಿದೆ. ನೀವುಗಳೆಲ್ಲ ನೋಡಿರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ಬಗ್ಗೆ ಬಹಳಷ್ಟು ಉತ್ತರ ಕೊಡಬೇಕಾಗುತ್ತದೆ. ಯಾರ್ಯಾರು ಏನೇನು ಹೇಳಿಕೆ ಕೊಟ್ಟರು. ನನ್ನನ್ನೂ ಸೇರಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಾನು ಹೇಳಿಕೆ ಕೊಟ್ಟಿದ್ದರೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಯಾರು ಏನು ಹೇಳಿದರೂ, ನಾನು ಯಾವುದನ್ನೂ ಪ್ರಸ್ತಾಪ ಮಾಡದೆ, ನನ್ನನ್ನೂ ಸೇರಿಸಿ ಎಚ್ಚಿಕೆಯಿಂದ ಇಂಥ ವಿಷಯಗಳಲ್ಲಿ ಹೇಳಿಕೆ ಕೊಡೋಣ ಎಂದು ಹೇಳಿದೆ. ಅದನ್ನು ನಾನೂ ಅನುಸರಿಸುತ್ತೇನೆ, ನೀವೂ ಅನುಸರಿಸಿ ಎಂದು ಹೇಳಿದ್ದೇನೆ. ಆದ್ದರಿಂದ, ಯಾರು ಹೇಳಿದರು, ಏಕೆ ಹೇಳಿದರು ಎನ್ನುವುದು ಈಗ ಬೇಡ. ಯಾವ ಹಿನ್ನೆಲೆಯಲ್ಲಿ ಹೇಳಿದ್ದೇನೆಂಬುದನ್ನೂ ಹೇಳಿದ್ದೇನೆ. ನಿಮಗೆ ಮಾತನಾಡುವುದಕ್ಕೆ ಸ್ವಾತಂತ್ರ್ಯವಿದೆ, ಮಾತನಾಡಿ, ನನ್ನದೇನೂ ಅಭ್ಯಂತರವಿಲ್ಲ. ನಾನು ಅಡ್ಡಿಯೂ ಮಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನೀವು ಇಲ್ಲಿ ಇದ್ದಿರಿ, ಉತ್ತರ ಕೊಡುತ್ತಿದ್ದೀರಿ. ಹೊರಗಡೆ ನಿಮ್ಮ ಕೆಲವು ಮುಖಂಡರಿದ್ದಾರೆ. ಅವರು ಟಿ.ವಿ.ನಲ್ಲಿ ಹೇಳುತ್ತಿರುತ್ತಾರೆ. ನೀವು ಅವರಿಗೂ ಹೇಳಿ. ಈಗ ಇಲ್ಲಿ ನೀವು ಏನೋ ಹೇಳಿದಿರಿ, ಒಪ್ಪಿಕೊಂಡಿರಿ. ನಾವೂ ಇದರ ಬಗ್ಗೆ ಚಕಾರ ಶಬ್ಧ ಹಿಂದೆಯು ಹೇಳಿಲ್ಲ, spot inspection ಮಾಡಿದಾಗಲೂ ಹೇಳಿಲ್ಲ, Hospital ಗೆ ಹೋಗಿ ನೋಡಿಬಂದಾಗಲೂ ಹೇಳಿಲಿಲ್ಲ. ಏಕೆ ಹೇಳಲಿಲ್ಲವೆಂದರೆ, ನಮ್ಮ ಹೇಳಿಕೆಯಿಂದ investigationಗೆ ತೊಂದರೆಯಾಗಬಾರದು, ಅಡೆ ತಡೆ ಬರಬಾರದು ಮತ್ತು ಯಾರಿಗಾದರೂ ಗುರುತಿಸಿ ನಾವು ಹೇಳೀದರೆ ಅದರಿಂದ ಅಪಾಯವಾಗಬಾರದೆಂದು ಸಂಯಮದಿಂದ ನಾವಿದ್ದೇವೆ. ಆದ್ದರಿಂದ, ದಯವಿಟ್ಟು ನಿಮ್ಮ ಪಕ್ಷದ ಮುಖಂಡರು ಟಿ.ವಿ. ಸಿಕ್ಕಿದರೆ ಸಾಕು ಬಾಯಿಯೇ ತೆರೆದುಬಿಡುತ್ತಾರೆ. ದಯವಿಟ್ಟು, ಅವರ ಬಾಯಿ ಮುಚ್ಚಿಸುವ ಕೆಲಸವನ್ನು ಇಂಥದ್ದರಲ್ಲಾದರೂ ಮಾಡಿ. ಬಾಕಿ ರಾಜಕಾರಣ ಇರುತ್ತದೆ, ನೀವು ನಾವು ಘೋಡಾ ಇದೆ ಮೈದಾನ ಇದೆ ಯಾರಿಗೆ ಹೆಚ್ಚು ತಾಕತ್ತು ಇದೆಯೋ ಓಡೋಣ. ಆ ಮಾತು ಬೇರೆ. ಕನಿಷ್ಠ ಪಕ್ಷ ಇಂತದ್ದರಲ್ಲಾದರೂ ಸಹಕರಿಸಬೇಕು. ನಾನು specific ಆಗಿ ಕೇಳಿದ್ದೇನೆ. ಏಕೋ ಈ ವಿಷಯದ ಬಗ್ಗೆ Home Minister ರವರೂ

ಹೇಳಲಿಲ್ಲ, ನೀವೂ ಹೇಳಲಿಲ್ಲ. ಈ 24 ಗಂಟೆಗಳ gap ನಲ್ಲಿ ಇಂಥ incident ನಡೆಯಿತು. ಇದಕ್ಕೆ ಕಾರಣವೇನು ? ಎಲ್ಲಿ lapse ಇದೆ ಎನ್ನುವ ಬಗ್ಗೆ ಹೇಳಬೇಕು. Police jurisdiction ನಲ್ಲಿ ಈ ಘಟನೆಗಳು ನಡೆದಾಗ ಯಾವ action ತೆಗೆದುಕೊಂಡಿದ್ದೀರಿ, specific ಆಗಿ ಇದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ ? Equipments ಎಷ್ಟು ತರಸಿಕೊಳ್ಳುತ್ತೀರಿ? ಎಂದು ಕೇಳಿದೆ. ಅದಕ್ಕೂ ಉತ್ತರ ಹೇಳಲಿಲ್ಲ. Investigation details ಹೇಳಬಾರದು. ಆದರೆ, equipment ತರಸುವುದಕ್ಕೆ, ಹಣವನ್ನು allot ಮಾಡುವುದಕ್ಕೆ ಅಥವಾ ಆ ಘಟನೆ ನಡೆದಿದ್ದು ತಪ್ಪಾಗಿದೆ, ಇದನ್ನು ಸರಿಪಡಿಸುತ್ತೇವೆಂದು ಹೇಳುವುದಕ್ಕೆ ಇದರಲ್ಲೇನಿದೆ ? ವಿಶೇಷವಾಗಿ ಮುಚ್ಚಿಡತಕ್ಕಂಥದ್ದು ಏನೂ ಇಲ್ಲ. ದಯವಿಟ್ಟು, ಇಂಥವನ್ನೆಲ್ಲ ನೀವು ಗಂಭೀರವಾಗಿ ತೆಗೆದುಕೊಳ್ಳಬೇಕು. ನೀವೇನೋ ಉತ್ತರವನ್ನು ಬರೆದುಕೊಂಡು ತಂದು ಓದಿದ್ದೀರಿ. ಮುಗಿಯಿತು. ಆದರೆ, ಉಳಿದಿದ್ದನ್ನು ನಾವೂ ಕೂಡ ನೋಡಿದ್ದೇವೆ, ಹೇಳಿದ್ದೇವೆ. ಇದರ ಬಗ್ಗೆ ಸಹ ಜನರಿಗೆ ಕೂಡ ಸಂಶಯ ಮೂಡುತ್ತದೆ, ಏನು, 25ನೇ ತಾರೀಖು ಒಂದು ಘಟನೆ ನಡೆದು ಒಂದು ದಿವಸವಾಯಿತು. ಪುನಃ 26ನೇ ತಾರೀಖು ಹೀಗಾಗುತ್ತದೆ, ಅದೂ ಕೂಡ ಅದೇ ಸ್ಥಳದಲ್ಲಿ ಆಗಬೇಕೆಂದರೆ ಕಾರಣವೇನು ? ಅದಕ್ಕೆ ಸ್ಪಷ್ಟೀಕರಣ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ :– ಮುಖ್ಯಮಂತ್ರಿಗಳು, ಎಲ್ಲರೂ ನಮ್ಮಷ್ಟಕ್ಕೇ ನಾವೇ ನಿಯಂತ್ರಣ ಹಾಕಿಕೊಳ್ಳಬೇಕೆಂದು ಹೇಳಿರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಆದರೆ, ಈ ಘಟನೆ ನಡೆದು ಈಗಾಗಲೇ ಮೂರು ದಿವಸಗಳಾಗಿವೆ. ಮೂರು ದಿವಸಗಳಾದಾಗ ಪತ್ರಿಕೆಗಳಲ್ಲಿ ಅವರದೇ ಆದ ವಿಶ್ಲೇಷಣೆಗಳು ಬರುತ್ತವೆ. ಈ ಕೃತ್ಯದ ಹಿನ್ನೆಲೆಯಲ್ಲಿ ಯಾರ್ಯಾರದೋ ಕೈವಾಡವಿದೆ ಎನ್ನುವ ರೀತಿಯಲ್ಲಿ ಊಹೆ ಮಾಡಿ ಬರೆದಾಗ ಯಾರ ಮೇಲೆಯೋ ಗೂಬೆ ಕೂರಿಸುವ ಕೆಲಸವಾಗುತ್ತದೆ. ಆ ಕಾರಣಕ್ಕೋಸ್ಕರ ಅದಕ್ಕೇನಾದರೊಂದು ಆಧಾರವಿರಬೇಕು. ಊಹೆ ಮಾಡಿ ಬರೆಯುವುದಿಲ್ಲ. ಏನು ಆಧಾರವಿದೆ ? ಮೂರು ದಿವಸಗಳಲ್ಲಿ ಪೊಲೀಸ್‌ನವರು ಇಲ್ಲಿಯವರೆಗೆ investigation ಮಾಡಿದಾಗ ಯಾರ ಮೇಲಾದರೂ doubt ಬಂತೇ ? ಏನು ಎನ್ನುವುದರ ಬಗ್ಗೆ ನೀವು ಅದನ್ನು ನೀವೇನಾದರೂ ಮುನ್ಸೂಚನೆ ಕೊಟ್ಟರೆ ಪತ್ರಿಕೆಯಲ್ಲಿ, ಮಾಧ್ಯಮದಲ್ಲಿ magnify ಮಾಡಿ ಜನರಿಗೆ ಅನುಮಾನ ಬರುವ ರೀತಿಯಲ್ಲಿ ಪ್ರಶ್ನೆಗಳನ್ನು ಹಾಕುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದಿಶೆಯಲ್ಲಿ ನಿಮ್ಮ clarifications ಬೇಕಾಗುತ್ತದೆ ಎಂದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಭಯೋತ್ಪಾದನೆ ಹತ್ತಿಕ್ಕಬೇಕೆನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಏಕೆಂದರೆ, ಇಲ್ಲಿ ಆಗಿರುವ ಘಟನೆ ಜನಗಳ ಮನಸ್ಸಿನಲ್ಲಿರುವ ಭಾವನೆ, ಆತಂಕ, ಇವು ಹೋಗಬೇಕಾದಾಗ ಇನ್ನೂ ಸ್ಪಷ್ಟವಾದ ಸಂದೇಶ ಈ ಮನೆಯಿಂದ, ನಿಮ್ಮ ಬಾಯಿಂದ ಹೋಗಬೇಕು ಎನ್ನುವುದು ನನ್ನ ಅಪೇಕ್ಷೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) :– ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕರು ಸಹಕಾರ ಕೊಡಲಿಲ್ಲವೆಂದರೆ ಬಹಳ ಕಷ್ಟಾಗುತ್ತದೆಂದು ಹೇಳಿದರು. ನಾನು ಇದನ್ನು ಒಪ್ಪುತ್ತೇನೆ. ಆದರೆ, ಎಂಟು ಹತ್ತು ಕಡೆ ಈ ಘಟನೆ ಆಗಿರಬೇಕಾದರೆ, ಕೇವಲ ಒಂಭತ್ತು, ಹತ್ತು ಜನ ಒಂದೊಂದು ಕಡೆ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದೊಂದು ದೊಡ್ಡದಾದ ಗುಂಪು, ಕನಿಷ್ಠ ಒಂದೊಂದು ಕಡೆ ಆಪರೇಟ್ ಮಾಡುವಾಗ, ಅದನ್ನು ಇಡುವ ಜಾಗ, ನೋಡುವುದು, ಯಾರಾದರೂ ನೋಡುತ್ತಿದ್ದಾರೆಯೇ, ಇವೆಲ್ಲಾ ಸೇರಿ ಒಂದೊಂದು ಕಡೆ ಸುಮಾರು 5–6 ಜನ ಸೇರಿಕೊಂಡು ಮಾಡಿ ಸುಮಾರು 50–60 ಜನರ ಗ್ಯಾಂಗ್‌ನವರು ಸೇರಿಕೊಂಡು ಆ ಒಂದು ದಿನದ ಆಪರೇಷನ್ ನಡೆದಿರಬಹುದು. ಇಷ್ಟೊಂದು ಜನ ಬೆಂಗಳೂರಿನಲ್ಲಿ ಸೇರಬೇಕಾದರೆ, ಇವರನ್ನು ಹಿಡಿಯಲಿಕ್ಕೆ ಜನ ಕೂಡ ಸಹಕರಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಜನರು ಸಹಕರಿಸಬೇಕೆಂದರು. ನಾನು ತಮಗೆ ಒಂದು ಸಲಹೆ ಕೊಡುವುದು, ಬೇರೆ ರಾಜ್ಯಗಳಲ್ಲಿ ನಾನು ನೋಡಿದೆ. ಇವರ ಬಗ್ಗೆ ಯಾರ್ಯಾರು ಕ್ಲೂ ಕೊಡುತ್ತಾರೆ ಅವರಿಗೇನಾದರೂ ಬಹುಮಾನ ಕೊಡುತ್ತೇವೆ ಎನ್ನುವ ಘೋಷಣೆಯನ್ನು ತಾವು ಇಲ್ಲಿ ಮಾಡಿದರೆ, ಹತ್ತು ಲಕ್ಷ, ಇಪ್ಪತ್ತೈದು ಲಕ್ಷ, ಬಹುಮಾನ ಕೊಡುತ್ತೇವೆಂದು ಘೋಷಣೆ ಮಾಡಿದರೆ, ಜನರು ಇದಕ್ಕೆ ಸಾಕಷ್ಟು ಆಸಕ್ತಿ ವಹಿಸಿ ಸಹಕಾರ ಕೊಟ್ಟಾಗ ಅವರನ್ನು ಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ, ಇಂಥ ವಿಚಾರಗಳನ್ನು ಪರ್ಚೇಸ್ ಮಾಡುವಂಥ ಸಂದರ್ಭದಲ್ಲಿ ಬಹಳ ರಿಸ್ಕ್ ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಈಗಲೇ ಇಲ್ಲಿ ಹತ್ತಿಪ್ಪತ್ತೈದು ಲಕ್ಷ ರೂಪಾಯಿಗಳ ಬಹುಮಾನವನ್ನು ಘೋಷಣೆ ಮಾಡಬೇಕಾಗುತ್ತದೆ. ಏಕೆಂದರೆ, ಜನರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿಕೊಳ್ಳಬೇಕಾಗುತ್ತದೆ. ಜನರನ್ನು ಇನ್‌ವಾಲ್ವ್ ಮಾಡಿಕೊಂಡಾಗ ಮಾತ್ರ ಇದರಲ್ಲಿ ಯಶಸ್ವಿಯಾಗಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ಗೃಹ ಸಚಿವರು ಕೇವಲ ಪತ್ರಿಕೆಯಲ್ಲಿ ಬಂದಿದ್ದನ್ನು ಮಾತ್ರ ಓದಿದರು ಇದು ಬಹಳ ಸಪ್ಪೆಯಾಯಿತು. ಇನ್ನೇನೂ ಹೇಳಲಿಲ್ಲ. ಮುಖ್ಯಮಂತ್ರಿಗಳು ಮಾತ್ರ ಒಂದೆರಡು ವಿಚಾರ ಹೇಳಿದರು. ತಾವು ನಿಂತುಕೊಳ್ಳಿ, ನಾವು ನಿಮ್ಮ ಜೊತೆಯಲ್ಲಿ ಇದ್ದೇವೆ, ಹೆದರುವುದು ಬೇಕಾಗಿಲ್ಲ. ಉಡುಪಿ ವಿಚಾರ ಅದು ಇದು ಸಣ್ಣ ವಿಚಾರಗಳನ್ನು ನಾವೆಲ್ಲ ಸೈಡ್‌ಗೆ ಇಟ್ಟುಬಿಡೋಣ. we will stand by you. ಏಕೆಂದರೆ, ನಾವೆಲ್ಲ

ಉಳಿಸಿಕೊಳ್ಳಬೇಕು. ಈ ಭೂಮಿಯ ಸ್ವಾಭಿಮಾನವನ್ನು ನಾವೆಲ್ಲ ಉಳಿಸಿಕೊಳ್ಳಲಿಲ್ಲವೆಂದರೆ ಹೇಗೆ ? ನಮ್ಮ ರಕ್ಷಣೆ ಬಹಳ ಮುಖ್ಯವಾದ ವಿಚಾರ. ಪೊಲೀಸ್‌ರವರಿಗೂ ಸಹಕರಿಸೋಣ. ನಾವೇನು ಪಾಲಿಟಿಕ್ಸ್ ಮಾಡುವುದು ಬೇಡ. ನಾವು ಇದ್ದರೂ ಅವರೇ ಇರುವವರು, ನೀವು ಬಂದರೂ ಅವರೇ ಇರುವವರು, ಯಾರು ಬಂದರೂ ಅವರೇ. ಅದೇ ಮೂರು ಸ್ಟಾರ್, ಬೇರೆ ಏನೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಹೀಗಿರುವಾಗ ಅವರಿಗೂ ಶಕ್ತಿ ಕೊಡೋಣ. ನಿಮಗೂ ಕೂಡ ನಾವು ಶಕ್ತಿ ಕೊಡುತ್ತೇವೆ.

ಶ್ರೀ ವಿ.ಸೋಮಣ್ಣ (ಗೋವಿಂದರಾಜನಗರ) :– ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ರಾತ್ರಿ ಗಸ್ತಿನಲ್ಲಿ ತಿರುಗತಕ್ಕಂಥ ಪೊಲೀಸ್ ಪೇದೆಯವರು ಒಬ್ಬರೇ ಇರುವುದರಿಂದ, ನಮ್ಮಲ್ಲಿ ಹೋಂಗಾರ್ಡ್ಸ್ ಹಾಗೂ ಮಿಲಿಟರಿ ಎಕ್ಸ್‌ಸರ್ವಿಸ್ ಮೆನ್ ಸಾಕಷ್ಟು ಜನರು ಇದ್ದಾರೆ. ಅಂಥವರನ್ನು ಕರೆದುಕೊಂಡು ರಾತ್ರಿ ಪಾಳಿಗೆ ಗಸ್ತು ತಿರುಗಿಸುವ ವ್ಯವಸ್ಥೆ ಮಾಡಬಹುದು. ಹೋಂಗಾರ್ಡ್‌ಗಳನ್ನು ಉಪಯೋಗಿಸಿಕೊಳ್ಳಬಹುದು. ಒಂದು ಲಕ್ಷ ಪರಿಹಾರ ಎಂದು ಹೇಳಿದ್ದಾರೆ. ನಾವು ದಯಮಾಡಿ ವಿನಂತಿಸುತ್ತೇವೆ, ಆ ಹೆಣ್ಣು ಮಗಳಿಗೆ ಇನ್ನು ಸ್ವಲ್ಪ ಜಾಸ್ತಿ ಪರಿಹಾರವನ್ನು ತಾವು ಘೋಷಣೆ ಮಾಡಬೇಕು.

ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ) :– ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ನಾನು ಸ್ವಾಗತಿಸುತ್ತೇನೆ. ತಾವು ಕೋಸ್ಟಲ್ ಪೊಲೀಸ್ ಫೋರ್ಸ್ ಬಗ್ಗೆ, ಕರಾವಳಿ ಪ್ರದೇಶ ನಮ್ಮ ರಾಜ್ಯದಲ್ಲಿ 300 ನಾಟಿಕಲ್ ಮೈಲ್ಸ್ ಇದೆ. ಅಲ್ಲಿಗೆ ಎಷ್ಟು ಶಿಪ್ ಬುರುತ್ತವೆ? ಲೋಡಿಂಗ್ ಮತ್ತು ಅನ್–ಲೋಡಿಂಗ್ ಆಗುತ್ತದೆ. ಆ ಶಿಪ್‌ನಲ್ಲಿ ಸುಮಾರು 50 ಜನ ಕೆಲಸ ಮಾಡುವವರು ಇರುತ್ತಾರೆ, ಆ ಶಿಪ್ ಸುಮಾರು ಮೂರ್ನಾಲ್ಕು ದಿವಸ ಅಲ್ಲಿ ಇರುತ್ತದೆ. ಅಲ್ಲಿ ಲೋಡಿಂಗ್ ಮತ್ತು ಅನ್–ಲೋಡಿಂಗ್ ಆಗುತ್ತದೆ. ಆ 30–40 ಜನ ಏನು ಕೆಲಸ ಮಾಡುತ್ತಾರಲ್ಲ ಅವರು ಕೆಲಸ ಮುಗಿದ ಮೇಲೆ ಆಚೆ ಬರುತ್ತಾರೆ, ಅವರು ಎಲ್ಲಿಗೆ ಹೋಗುತ್ತಾರೆ ? ಯಾರ ಮನೆಯಲ್ಲಿ ಮಲಗುತ್ತಾರೆ ? ಯಾವ ಬಾರ್‌ಗೆ ಹೋಗುತ್ತಾರೆ ? ಸ್ವಾಮಿ, virtually, ಅಲ್ಲಿ ಸರಿಯಾಗಿ R.A.W., I.B., ಜೊತೆಗೆ co-ordination ಇಲ್ಲ. ಕೋಸ್ಟಲ್ ಬೆಲ್ಟ್ ಎಂದರೆ, ಇಂತಿಷ್ಟು ಕೋಸ್ಟಲ್ ಬೆಲ್ಟ್ ಸ್ಟೇಟ್ ಪೊಲೀಸ್ ಫೋರ್ಸ್ ಇರುತ್ತದೆ, ಇಂತಿಷ್ಟು ಕೋಸ್ಟಲ್ ನಾಟಿಕಲ್ ಮೈಲ್ಸ್ Coastal Guards ಗೆ ಬರುತ್ತದೆ. ಅರ್ಧ ಪಾರ್ಟ್ ಕೊಚ್ಚಿನ್ Navy ಗೆ ಬರುತ್ತದೆ, ಅರ್ಧ ಪಾರ್ಟ್ ಗೋವಾಕ್ಕೆ ಬರುತ್ತದೆ. ಇದರಲ್ಲಿ ಒಂದಕ್ಕೊಂದು co-ordination ಇಲ್ಲ. ಇದನ್ನೆಲ್ಲಾ ನಾವು

ಸದನದಲ್ಲಿ ಹೇಳಬೇಕೆ ? ಆ ಪೊಲೀಸ್‌ನವರಿಗೇನು ಬುದ್ಧಿಯಿಲ್ಲವೆ ? ಮುಖ್ಯಮಂತ್ರಿಗಳೇ ತಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಅದಕ್ಕೆ ಯಾರನ್ನೋ ಹಿಡಿದು ಟಿ.ವಿಯಲ್ಲಿ ಮೆಲೋಡ್ರಾಮ ಮಾಡಿ ಪೊಲೀಸ್‌ನವರು ಪಬ್ಲಿಸಿಟಿ ಮಾಡುತ್ತಾರೆ. ರಾಜಕಾರಣಿಗಳಿಗೆ ಪಬ್ಲಿಸಿಟಿ ಬೇಕು. ಪೊಲೀಸ್ ಅಧಿಕಾರಿಗಳಿಗೆ ಏಕೆ ಬೇಕು ? ಪೊಲೀಸ್‌ನವರು ಬರಿ ಸ್ಟಂಟ್ ಮಾಡುವುದಕ್ಕೆ, ಬರಿ ಪಬ್ಲಿಸಿಟಿಗೋಸ್ಕರ ಎಲೆಕ್ಟ್ರಾನಿಕ್ ಮೀಡಿಯದಲ್ಲಿ ಯಾರಿಗೋ ಹಿಡಿದುಕೊಂಡು ಹೋಗುವುದನ್ನು ತೋರಿಸಿಕೊಂಡು ಹೋಗುವುದನ್ನು ಜಾಸ್ತಿ ಮಾಡಬೇಡಿ. ಯಾರು ಇರುತ್ತಾರೋ ಅವರನ್ನು ಗಲ್ಲಿಗೆ ಹಾಕಿ. But ಸುಮ್ಮನೆ ಪೊಲೀಸ್‌ನವರು ಡ್ರಾಮ ಮಾಡುವುದಕ್ಕೆ ಬಿಡಬೇಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) :- ನಾವು ಇಷ್ಟೆಲ್ಲಾ ಚರ್ಚೆ ಮಾಡಿದ್ದೇವೆ. ಒಟ್ಟಾರೆಯಾಗಿ ಗುಪ್ತದಳದ ವೈಫಲ್ಯ ಎನ್ನುವುದು ಗೊತ್ತಾಗುತ್ತದೆ. ಅದರಲ್ಲೂ ನಮ್ಮ ಗುಪ್ತದಳಕ್ಕೆ ಸಂಬಂಧಪಟ್ಟ ಹಾಗೆ ಇಂಟೆಲಿಜೆನ್ಸ್ ಬ್ಯೂರೋದಿಂದಲೂ ಮಾಹಿತಿ ಬಂದಿದೆ. ಮಣಿಪುರದಲ್ಲಿ ಬಂದಿರತಕ್ಕಂಥ ಸಂದರ್ಭದಲ್ಲಿ ಸೇನೆಯಿಂದ ಅವರು ಕೊಟ್ಟಿರುವುದು. ಈ ಘಟನೆ ನಡೆದಾಕ್ಷಣ ಗೃಹ ಸಚಿವರು ರಿಯಾಕ್ಟ್ ಮಾಡಿದರು. ಕೇಂದ್ರದ ಗೃಹ ಸಚಿವರು, ಮುಂಚಿತವಾಗಿ ತಮಗೆ ಆಂಧ್ರ, ಕರ್ನಾಟಕ ರಾಜ್ಯಗಳಿಗೆ ವಿಶೇಷವಾಗಿ ತಿಳಿಸಿರುವುದಾಗಿ ಹೇಳಿದರು. ತಮ್ಮ ಹೇಳಿಕೆಯನ್ನು ನೋಡಿದೆ. ಅವರು ಕೂಡ ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕಂಥವರು, ಕೇಂದ್ರದ ಗೃಹ ಇಲಾಖೆಯ ರಾಜ್ಯ ಸಚಿವರು, ಮುಂಜಾಗ್ರತೆಯಿಂದ ಇರಬೇಕೆಂದು ನಾವು ಇಷ್ಟು ಮುಂಚಿತವಾಗಿ ಎಚ್ಚರಿಕೆ ಕೊಟ್ಟಿದ್ದಾಗಲೂ ಸಹ ತಾವು ಎಚ್ಚರಿಕೆಯಿಂದ ಇರಲಿಲ್ಲವೆಂದು ಹೇಳಿದ್ದಾರೆ. ನಾನೇಕೆ ಈ ಮಾತುಗಳನ್ನು ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು.

ಡಾ|| ವಿ.ಎಸ್. ಆಚಾರ್ಯ (ಗೃಹ ಸಚಿವರು) :- ಕೇಂದ್ರದಿಂದ ಬಂದಿರತಕ್ಕಂಥ ವಿಚಾರದಲ್ಲಿ ನಾವು ಯಾವುದೇ ರಾಜಕೀಯ ಅಥವಾ ಕೇಂದ್ರದ ಜೊತೆಗೆ ಚರ್ಚೆ ಮಾಡುವ ಮಟ್ಟಿಗೆ ಆಗಲಿ ನಾವು ಮಾಡಿದ್ದೇ ಅಲ್ಲ. ಮಾನ್ಯ ಸದಸ್ಯರು ಗಮನಿಸಬೇಕು. ರಾಜಸ್ಥಾನದಲ್ಲಿ ಮೇ ತಿಂಗಳಲ್ಲಿ ಸರಣಿ ಬಾಂಬ್‌ಗಳ ಪ್ರಕರಣ ಆದಮೇಲೆ ಒಂದು ಸಾಮಾನ್ಯ ಸ್ವರೂಪದ ಸುತ್ತೋಲೆ ಎಲ್ಲ ಕಡೆಗೂ ಬಂದ ಹಾಗೆ ಇಲ್ಲಿಗೂ ಬಂದಿತ್ತು ವಿನಾಃ ಏನೋ ವಿಶೇಷವಾದ ಸರಣಿ ಬಾಂಬ್ ಆಂಧ್ರದಲ್ಲಿಯೋ, ಕರ್ನಾಟಕದಲ್ಲಿಯೋ ಆಗುತ್ತದೆ ಎಂದು ಹೇಳುವ ಉಲ್ಲೇಖ ಇರಲಿಲ್ಲ. ಶಾಲೆಗೆ ನಾವು ಮಕ್ಕಳನ್ನು ಕಳುಹಿಸುತ್ತೇವೆ. "ಮಗನೆ ಜಾಗ್ರತೆಯಿಂದ

ಹೋಗಿ ಬಾ" ಎಂದು ಹೇಳುತ್ತೇವೆ. ತಾಯಿ ದಿವಸ ಹಾಗೆಯೇ ಮಗನಿಗೆ ಹೇಳುತ್ತಾಳೆ. ಅದೇ ಪ್ರಕಾರ ಕೇಂದ್ರ ಕರ್ನಾಟಕದಲ್ಲಿಯೂ ಸ್ವಲ್ಪ ಜಾಗ್ರತೆಯಿಂದ ಇರಬೇಕೆಂದು ಹೇಳಿತ್ತು.

ಶ್ರೀ ಆರ್. ರೋಷನ್ ಬೇಗ್ :– ತಾವು ಇಷ್ಟು ಲೈಟ್ ಆಗಿ ಮಾತನಾಡಬಾರದು.

ಡಾ॥ ವಿ.ಎಸ್. ಆಚಾರ್ಯ :– ನೋ, ನೋ, ನಾನು ಲೈಟಾಗಿ ಅಥವಾ ಯಾರಿಗೋ harsh ಆಗಿ ಮಾತನಾಡುವಂಥದ್ದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಗೃಹ ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ, ಕೇಂದ್ರದಿಂದ ಈ ಬಗ್ಗೆ ಮಾಹಿತಿ ಬಂದಿದ್ದರೆ ನಾವು ಮುಚ್ಚಿಡುವುದಕ್ಕಾಗುತ್ತದೆಯೆ ? ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ರೀತಿಯಾದ ಮಾಹಿತಿ ಯಾವುದೂ ಬಂದಿಲ್ಲ. ವಿಶೇಷವಾದ ಯಾವುದೇ ಪತ್ರ ನಮಗೆ ಬಂದಿಲ್ಲ. ನಾವು ನೀವು ಡೆಲ್ಲಿಗೆ ಹೋದಾಗ ಮಾತನಾಡೋಣ. ಅದು ಬೇರೆ ರಾಜ್ಯಗಳ ದೃಷ್ಟಿಯಿಂದ ಹೇಳಿರಬಹುದು. ನಮಗೆ ಯಾವುದೇ ಮಾಹಿತಿ ಬಂದಿಲ್ಲ. ನಾನು ಈ ಮಾತನ್ನು ಜವಾಬ್ದಾರಿಯಿಂದ ಈ ಸ್ಥಾನದಲ್ಲಿ ನಿಂತುಕೊಂಡು ಹೇಳುತ್ತಿದ್ದೇನೆ. ಬಂದಿಲ್ಲವೆಂದು ಸತ್ಯ ಹೇಳಬೇಕಲ್ಲವೆ ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) :– ಭಯೋತ್ಪಾದನೆ ವಿಷಯದಲ್ಲಿ ಕೇಂದ್ರ ಸರ್ಕಾರದ ಸಹಕಾರ ಇಲ್ಲದೆ ಉಗ್ರರ ಸಮಸ್ಯೆ ಬಗೆಹರಿಸುವುದಕ್ಕಾಗುವುದಿಲ್ಲವೆಂದು ತಾವೆ ಹೇಳಿದಿರಿ. ಹೊರದೇಶಗಳಿಂದ ಬರತಕ್ಕಂಥ ಉಗ್ರರ ಮಾಹಿತಿ IB ಯವರಿಗೆ ಗೊತ್ತಿರುತ್ತದೆ. ತಾವು confrontationಗೆ ಹೋಗುವುದಿಲ್ಲವೆಂದು ನನಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾನು ಹೋಗುವುದಿಲ್ಲ.

ಶ್ರೀ ವಿ. ಶೀನಿವಾಸ ಪ್ರಸಾದ್ (ನಂಜನಗೂಡು) :– ನಾವು ಅವರ ಮೇಲೆ ಹೆಚ್ಚಾಗಿ ಅವಲಂಬಿಸಿದ್ದೇವೆ. ಈ ತರಹದ ಮಾಹಿತಿಗಳು ಈ ತರಹದ ಮುನ್ನೆಚ್ಚರಿಕೆ ಕೊಡುವ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಸ್ಪಂದಿಸಬೇಕು. ಕೇಂದ್ರದ ಗೃಹ ಸಚಿವರು ಹೇಳಿದ ಹೇಳಿಕೆಯನ್ನು ತಮಗೆ ಹೇಳುವುದಾದರೆ, ಇಂಟೆಲಿಜೆನ್ಸ್ ವಿಂಗ್‌ನಿಂದ ನಾವು efficient ಆಗಿ, effective ಆಗಿ ಮಾಡಬೇಕಾದರೆ, ಕೊರತೆಗಳನ್ನು ತಾವು ಯೋಚಿಸಬೇಕಾಗಿದೆ. ಇಂಟೆಲಿಜೆನ್ಸ್‌ಗೆ ನಮ್ಮಲ್ಲಿ ಸೆಪರೇಟಾದ ರೆಕ್ರೂಟ್‌ಮೆಂಟ್ ಇಲ್ಲ. ಕೇಂದ್ರದಲ್ಲಿ IB ಗೆ ಸೆಪರೇಟಾದ ರೆಕ್ರೂಟ್‌ಮೆಂಟ್ ಇದೆ. ಅವರಿಗೆ ಟ್ರೈನಿಂಗ್ ಇದೆ, ಅವರಿಗೆ ವಿಶೇಷವಾದ ಪರ್ಕ್ಸ್ ಕೊಡುತ್ತಾರೆ, ಆ ರೀತಿ ಇಲ್ಲಿ ಇಲ್ಲ. ಇಲ್ಲಿ ಏನಾಗಿದೆ ಎಂದರೆ, ಸಿಓಡಿಗೆ, ಇಂಟೆಲಿಜೆನ್ಸ್‌ಗೆ, ಲೋಕಾಯುಕ್ತಕ್ಕೆ ಟ್ರಾನ್ಸ್‌ಫರ್ ಮಾಡಿದರೆ ಪೊಲೀಸ್ ಡಿಪಾರ್ಟ್‌ಮೆಂಟ್‌ನವರು ಅದು punishment transfer ಎಂದು ತಿಳಿದುಕೊಳ್ಳುತ್ತಾರೆ. ಅವರಿಗೆ ಅದರಲ್ಲಿ ಆಸಕ್ತಿಯೇ

ಇರುವುದಿಲ್ಲ. ತಾವು ಅವರಿಂದ ಏನು ಕೆಲಸ ತೆಗೆಯುವುದಕ್ಕೆ ಸಾಧ್ಯ ? ಆದುದರಿಂದ, ತಾವು ಇದರ ಬಗ್ಗೆ ಯೋಚಿಸಬೇಕಾಗಿದೆ. ನನ್ನ ದೃಷ್ಟಿಯಲ್ಲಿ ಯಾರಾದರೂ ಇಂಟೆಲಿಜೆನ್ಸ್‌ಗೆ, ಸಿಓಡಿಗೆ, ಲೋಕಾಯುಕ್ತಕ್ಕೆ ಬರುತ್ತೇವೆಂದು ಹೇಳಿದರೆ, ಅವರು ಸ್ವಂತ ಯೋಚಿಸಿ ಇವುಗಳನ್ನು ಆಯ್ಕೆ ಮಾಡಿಕೊಂಡು ಇಲ್ಲಿಗೆ ಬರಬೇಕು. ಅವರೇ ಆಯ್ಕೆ ಮಾಡಿಕೊಂಡು ಬಂದಂಥ ಸಂದರ್ಭದಲ್ಲಿ ಅವರಿಗೆ ಹೆಚ್ಚಿಗೆ ಟ್ರೈನಿಂಗ್ ಕೊಡಿ, ವಿಶೇಷವಾಗಿ ಪರ್ಕ್ಸ್ ಕೊಡಿ, ಆಗ ಮಾತ್ರ ಈ ವಿಂಗ್‌ನಲ್ಲಿ ಕೆಲಸ ಮಡುವುದಕ್ಕೆ ಸಾಧ್ಯ. ಬಲವಂತಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ನೀವು ಹೇಳಿದಂಥ ಸಲಹೆಗಳು ಉಪಯುಕ್ತವಾಗಿದ್ದು ನಾವು ತಮ್ಮ ಸಲಹೆಗಳನ್ನು ಸ್ವೀಕರಿಸುತ್ತೇವೆ. ನಿನ್ನೆ ಮೊನ್ನೆ ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ, ಈ ಸಂದರ್ಭದಲ್ಲಿ ಈ ಘಟನೆಯ ಹಿಂದೆ ಯಾರಾರು ಇದ್ದಾರೆ ? ಯಾವ ಸಂಘಟನೆಗಳಿವೆ ? ಯಾರನ್ನು ವಿಚಾರಣೆಗೊಳಪಡಿಸಲಾಗುತ್ತಿದೆ? ಈ ಎಲ್ಲಾ ಮಾಹಿತಿ ಕೊಡುವುದಕ್ಕೆ ವ್ಯವಹಾರಿಕವಾಗಿ ಸರಿಹೋಗಲಿಕ್ಕಿಲ್ಲ. ದಯಮಾಡಿ ಸಹಕರಿಸಿ, ಹಗಲು ರಾತ್ರಿ ಅವರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆ ಮಾಹಿತಿ ಕೊಡುವುದು ಬೇಡ. ಕೊಡುವ ಮಾಹಿತಿ ಕೊಟ್ಟರೆ ಸಾಕು, ಹೇಳುವುದನ್ನೇ ಹೇಳುವುದಿಲ್ಲ ಬೇರೆಯದನ್ನು ಹೇಳುತ್ತೀರಾ? ನಮಗೆ ಏಕೆ ಸಂಶಯ ಬಂದಿದೆ ಎಂದರೆ, ಕೇಂದ್ರ ಸರ್ಕಾರದ ಶ್ರೀ ಪ್ರಕಾಶ್ ಜೈಸ್ವಾಲ್ ಆದರೂ ತಪ್ಪು ಹೇಳಿರಬೇಕು, ಇಲ್ಲಾ ನೀವು ಆದರೂ ನಮಗೆ ತಪ್ಪು ಹೇಳುತ್ತಿರಬೇಕು. ಇವೆರಡರಲ್ಲಿ ಒಂದು ಇರಬೇಕಲ್ಲವೆ ? ನಾನು ಹೇಳಿಕೆಯ ಬಗ್ಗೆ ಹೇಳುತ್ತೇನೆ "Union Minister for Home Shri Prakash Jaiswal said that the Intelligence Bureau i.e., I.B. had received inputs that Hyderabad and Bangalore could be in the hit-list of the terror outfits. The Minister said that advisories based on the IB inputs had been sent to the States of Karnataka and Andhra Pradesh. The Advisories from the Centre are routinely and regularly sent to all the States once or twice in a month depending on the urgency of the matter, Ministry Officials said." ಇದು ರೋಟೀನ್ ಆಗಿ ಎಲ್ಲರಿಗೂ ಕಳುಹಿಸುವಂಥದ್ದಲ್ಲದೆ ಹೈದರಾಬಾದ್ ಮತ್ತು ಬೆಂಗಳೂರು ಹೆಸರನ್ನು ಹೇಳಿದ್ದಾರೆ. ಹೈದರಾಬಾದ್ ಹೆಸರನ್ನು ಮೆನ್‌ಷನ್ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಹೈದರಾಬಾದ್ ಮತ್ತು ಬೆಂಗಳೂರು

ಬಗ್ಗೆ ಸ್ಪೆಸಿಫಿಕ್ ಆಗಿ IB ನವರು ಮಾಹಿತಿ ಕೊಟ್ಟಿದ್ದಾರೆಂದು ಇದೆ. ಒಂದು ಕಡೆ ರೋಟೀನ್ ಆಗಿ ಕಳುಹಿಸಿರಬಹುದು. ಅಂದರೆ, ಈಗಾಗಲೆ ಹೇಳಿದಂತೆ ಒಂದು ಕಡೆ ಮಕ್ಕಳು ಪ್ರತಿ ದಿನ ಶಾಲೆಗೆ ಹೋಗುವುದು ಮತ್ತೆ ಚೆನ್ನಾಗಿ ಹೋಗಿ ಬಾ ಎಂದು ಹೇಳತಕ್ಕಂಥದ್ದು ಇರಬಹದು. ಅದು ಅಲ್ಲದೆ ಇಂಥದ್ದೇನಾದರೂ ಬಂದಿದೆಯೇ ಎಂದರೆ ಬಂದಿದೆ ಎಂದು ಹೇಳಿ, ಒಂದು ವೇಳೆ ಬರದೇ ಇದ್ದರೆ ಬರಲಿಲ್ಲವೆಂದು ಹೇಳಿ. ಏಕೆಂದರೆ, ನಾವು ಕೇಳುವುದಕ್ಕೆ ಆಗುತ್ತದೆ. ಅಂದರೆ, ನೀವು ಈ ರೀತಿಯಾಗಿ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೀರಿ. ಆದರೆ, ಅವರ ಹತ್ತಿರ ಯಾವುದೇ ಕಾಗದಪತ್ರಗಳಿಲ್ಲವೆಂದು ಮತ್ತು ಹೈದರಾಬಾದ್ ಮತ್ತು ಬೆಂಗಳೂರಿಗೆ ವಿಶೇಷವಾದಂಥ ಮಾಹಿತಿ ಕೊಟ್ಟಿಲ್ಲ ಎನ್ನತಕ್ಕಂಥದ್ದು ಆಗಬೇಕು. ನಾವು ಒಬ್ಬರ ಮೇಲೊಬ್ಬರು ಬ್ಲೇಮ್ ಮಾಡುವುದಕ್ಕಿಂತಲೂ ಮಾಹಿತಿ ಬಂದಿದ್ದರೆ, ತಡವಾಗಿ ಮಾಹಿತಿ ಬಂತೆಂದಾದರೂ ಹೇಳಿ. ಇಲ್ಲದಿದ್ದರೆ ಮಾಹಿತಿ ಬಂದ ಪ್ರಕಾರ ನಾವು ಪ್ರಯತ್ನ ಮಾಡಿದ್ದು, ಅದರಲ್ಲಿ ನಮಗೆ ಯಶಸ್ಸು ಸಿಗಲಿಲ್ಲ, ಕಣ್ಣುತಪ್ಪಿ ಹೋಗಿದೆ ಎನ್ನತಕ್ಕಂಥದ್ದಾದರೂ ಹೇಳಿ ? ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೋಸ್ಕರ ಇಲ್ಲವೇ ಇಲ್ಲ ಎಂದು ಹೇಳುವುದಾದರೆ ಅದು ನಿಮಗೆ ಬಿಟ್ಟ ವಿಚಾರ.

ಅಧ್ಯಕ್ಷರು :– ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರು ಇದು ತುಂಬಾ ಮುಖ್ಯವಾದಂಥದ್ದು. ಆದ್ದರಿಂದ, ಮಾನ್ಯ ಗೃಹ ಸಚಿವರು ಏನು ಹೇಳುತ್ತಾರೆಂಬುದು ನಮಗೆ ಗೊತ್ತಾಗಬೇಕು.

ಅಧ್ಯಕ್ಷರು :– ಈಗಾಗಲೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ರೋಟೀನ್ ಆಗಿ ನಮಗೂ ಕೂಡ ಬಂದಿದೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಯಡಿಯೂರಪ್ಪನವರೆ, ತಾವು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ ಇದನ್ನು ತಾವು ಬಹಳ ಲಘುವಾಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ :– ನಾವೇನು ಯಾವುದನ್ನೂ ಲಘುವಾಗಿ ತೆಗೆದುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ :– ಒಂದು ನಿಮಿಷ ತಾವು ಕುಳಿತುಕೊಳ್ಳಿ. ಮಕ್ಕಳು ಪ್ರತಿ

ದಿನ ಶಾಲೆಗೆ ಹೋಗುವಾಗ ಹುಷಾರಾಗಿ ಹೋಗಿ ಬಾ ಎಂದು ಹೇಳುತ್ತಾ ಇರುತ್ತೇವೆ. ಅದೇ ರೀತಿಯಾಗಿ ಕೇಂದ್ರ ಸರ್ಕಾರದಿಂದ ಈ ತರಹದ ಸುತ್ತೋಲೆಗಳು ಬರುತ್ತಾ ಇರುತ್ತವೆಂದು ಮಾನ್ಯ ಗೃಹ ಮಂತ್ರಿಗಳು ಹೇಳಿದ್ದಾರೆ. ಇದನ್ನು ಅಷ್ಟು ಲಘುವಾಗಿ ಹೇಳುವುದಕ್ಕೆ ಆಗುವುದಿಲ್ಲ. ಕೇಂದ್ರದ ಗೃಹ ಸಚಿವರಾಗಿರುವ ಮಾನ್ಯ ಜೈಸ್ವಾಲ್‌ರವರು ಬಹಳ ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಅವರೂ ಕೂಡ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು. ಕೇಂದ್ರದ IB ರವರು ಕೊಟ್ಟಂಥ ಮಾಹಿತಿ ಆಧಾರದ ಮೇಲೆ ಹೈದರಾಬಾದ್ ಮತ್ತು ಬೆಂಗಳೂರು ಲಿಸ್ಟ್‌ನಲ್ಲಿವೆ. ಅದಕ್ಕೋಸ್ಕರ ನೀವು ಎಚ್ಚರಿಕೆಯಿಂದ ಇರಬೇಕೆಂಬ ಮಾಹಿತಿಯನ್ನು ರವಾನಿಸಿದ್ದೇವೆಂದು ಅವರು ಹೇಳಿದ್ದಾರೆ. ಇದನ್ನು ನಂಬಿಕೊಳ್ಳಲೇಬೇಕು. ಏಕೆಂದರೆ, ಅವರು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಹೇಳಿಕೆಯನ್ನು ಕೊಟ್ಟಿದ್ದಾರೆಂದು ನಾವು ನಂಬಿಕೊಂಡಿದ್ದೇವೆ. ಏಕೆಂದರೆ, 25ನೇ ತಾರೀಖಿನ ದಿವಸ ಈ ಘಟನೆ ಆದ ಮೇಲೆ ಅವರು ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಈ ರೀತಿಯಾಗಿ ಹೇಳಿದ ಮೇಲೆ ನೀವೇನು ಮಾಡಿದ್ದೀರಿ ? ಮತ್ತೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ ? ಇಂಟೆಲಿಜೆನ್ಸ್‌ನವರು ಏನು ಮಾಡಿದರು ? ಮತ್ತೆ ಸರ್ಕಾರ ಏನು ಕ್ರಮ ತೆಗೆದುಕೊಂಡಿತು ? ಪೊಲೀಸ್‌ನವರು ಏನು ಕ್ರಮ ತೆಗೆದುಕೊಂಡರು ಎನ್ನತಕ್ಕಂಥದ್ದೆಲ್ಲಾ ಗೊತ್ತಾಗಬೇಕಲ್ಲವೇ ? ಕೆಲವು ಮಾಹಿತಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅವುಗಳನ್ನು ತಾವೇ ಇಟ್ಟುಕೊಳ್ಳಿ. ಇನ್‌ವೆಸ್ಟಿಗೇಷನ್‌ಗೆ ಸಂಬಂಧಪಟ್ಟಂಥ ಕೆಲವು ಮಾಹಿತಿಗಳನ್ನು ಹೊರಗಡೆ ಹೇಳುವುದಕ್ಕೆ ಆಗುವುದಿಲ್ಲ. ಅವುಗಳ ಬಗ್ಗೆ ನಾವೇನೂ ಸಹ ಕೇಳುವುದಿಲ್ಲ. ಆದರೆ, ಸ್ಪೆಸಿಫಿಕ್ ಆಗಿ ಗೃಹ ಸಚಿವರು ಹೇಳಿರುವಾಗ ಅಂದರೆ, IB ರವರು ಮಾಹಿತಿ ಕೊಟ್ಟ ಮೇಲೆ ರಾಜಸ್ಥಾನ ರಾಜ್ಯದಲ್ಲಿ ಆದ ಮೇಲೆ ಜನರಲ್ ಆಗಿ ಎಲ್ಲಾ ರಾಜ್ಯಗಳಿಗೆ ಕೊಟ್ಟಂತೆ ನಮಗೂ ಸಹ ಕೊಟ್ಟಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಗೃಹ ಸಚಿವರೆ, ಇದನ್ನು ಅವರು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಆದ್ದರಿಂದ, you have to admit. ಇಲ್ಲದಿದ್ದರೆ ನಿಮ್ಮಲ್ಲಿ negligence ಇರಬೇಕು. ಅಂದರೆ, ಮಾಮೂಲಿಯಾಗಿ ಕಳುಹಿಸಿದ್ದಾರೆಂದು ತಾವು ಇಲ್ಲಿ ಉತ್ತರ ಹೇಳುತ್ತಿರುವ ಹಾಗೆ ಏನೋ ಬಂದಿದೆ ಎಂದು ನೀವು ಸುಮ್ಮನೆ ಇರಬೇಕು. ಅಂದರೆ, ಸ್ಕೂಲ್ ಮಕ್ಕಳಿಗೆ ಹೋಗುವಾಗ ಹೇಳಿ ಕಳುಹಿಸುವ ರೀತಿಯಲ್ಲಿರಬೇಕು. ಇಲ್ಲದಿದ್ದರೆ, ನಾವು ನೋಡಿದ್ದೇವೆ. ಆದರೆ, ನಮಗೇನು ಅದರಿಂದ ಗೊತ್ತಾಗಲಿಲ್ಲ ಎನ್ನುವ ರೀತಿಯಲ್ಲಿಯಾದರೂ ಇರಬೇಕು. ಏನೂ ಇಲ್ಲದೆ ಅದಕ್ಕೆ ಉತ್ತರವೇ ಇಲ್ಲ ಎಂದರೆ ಹೇಗೆ ? ರಾಜ್ಯದ ಜನತೆಗೆ ಗೊತ್ತಾಗಬೇಕಲ್ಲವೇ ? ರಾಜ್ಯ ಸರ್ಕಾರ ಎಲ್ಲೋ ಒಂದು ಕಡೆ

ವಿಫಲವಾಗಿದೆ ಎಂದು ರಾಜ್ಯದ ಜನತೆಗೆ ಗೊತ್ತಾಗುತ್ತದೆ. ನೀವು ಬೇಜಾರು ಮಾಡಿಕೊಂಡರೆ ಹೇಗೆ ? No, no, we are not making politics in this. Alternatively we all should know. ಆದರೆ ಇದರ ಬಗ್ಗೆ ಏನೆಂದು ಗೊತ್ತಾಗಬೇಕಲ್ಲವೇ?

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) :– ಮಾನ್ಯ ಅಧ್ಯಕ್ಷರೆ, ನಾವು ಒಂದು ಭರವಸೆಯನ್ನು ಕೊಡುತ್ತೇವೆ. ಇಂಥ ವಿಷಯಗಳನ್ನು ನಾವು ಬೆಳೆಸುವುದಕ್ಕೆ ತಯಾರಿಲ್ಲ confrontation ಗೂ ನಾವು ತಯಾರಿಲ್ಲ. ರಾಜಸ್ಥಾನದ ಘಟನೆಯಾದ ಮೇಲೆ ನಮಗೆ ಪ್ರತಿಸಾರಿ ಬರುವ ಹಾಗೆ ರೊಟೀನ್ ಆಗಿ ಬಂದಿರತಕ್ಕಂಥದ್ದು ನಿಜ. ಅದರಲ್ಲಿ ಆಂಧ್ರ ಮತ್ತು ಕರ್ನಾಟಕದ ಬಗ್ಗೆ ಉಲ್ಲೇಖ ಕೂಡ ಇರಬಹುದು. ಆದರೆ, ವಿಶೇಷವಾದಂಥದ್ದು ಏನೂ ಬಂದಿಲ್ಲ. ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :– ಆಗ, ಈಗ ಎಂದು ಹೇಳಿದರೆ ನಮಗೇನೂ ಅರ್ಥವಾಗುತ್ತಿಲ್ಲ. ಅವರು ಸ್ಪಷ್ಟವಾಗಿ ಉತ್ತರ ಹೇಳುತ್ತಿಲ್ಲ. ಇದು ನಿಜವಾಗಿಯೂ ಕೂಡ irresponsible statement.

(ಗೊಂದಲ)

ಅಧ್ಯಕ್ಷರು :– ಮಾನ್ಯ ಗೃಹ ಸಚಿವರು ಹೇಳುತ್ತಾರೆ. ಒಂದು ನಿಮಿಷ ತಾವೆಲ್ಲರೂ ಕುಳಿತುಕೊಳ್ಳಿ. ಮಾನ್ಯ ದಿನೇಶ್ ಗುಂಡೂರಾವ್‌ರವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ :– ಭಯೋತ್ಪಾದಕರ ಬಗ್ಗೆ IB ಯಿಂದ ಸದಾ ಇವರಿಗೆ ಮಾಹಿತಿ ಬರುತ್ತಿರುತ್ತದೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸಿದ್ದರಾಮಯ್ಯನವರೆ, ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಾರೆ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ, ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್ :– ಮಾನ್ಯ ಅಧ್ಯಕ್ಷರೆ, ಇಡಿ ದೇಶದಲ್ಲಿನ ಭಯೋತ್ಪಾದನೆ ಬಗ್ಗೆ ಕೇಂದ್ರ ಸರ್ಕಾರದ ಹತ್ತಿರ ಮಾಹಿತಿ ಇರುತ್ತದೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :– ಮಾನ್ಯ ಸಚಿವರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು.

(ಗೊಂದಲ)

ಡಾ॥ ವಿ.ಎಸ್. ಆಚಾರ್ಯ :– ಮಾನ್ಯ ಅಧ್ಯಕ್ಷರೆ, ನಾನು ಜವಾಬ್ದಾರಿಯಿಂದಲೇ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳುವದಕ್ಕೆ ಬಯಸುತ್ತೇನೆ. ನಮಗೆ ಈ ಘಟನೆ ಬಗ್ಗೆ ವಿಶೇಷವಾದಂಥ ಮಾಹಿತಿಗಳು ಯಾವುದೂ ಬಂದಿಲ್ಲ. ಒಂದು ವೇಳೆ ಗುಜರಾತ್‌ಗೆ ಕಳುಹಿಸಿದ್ದರೆ, ಇವೊತ್ತು 28ನೇ ತಾರೀಖು ಆಗಿದೆ. ಆದರೆ ಇದುವರೆಗೂ...

(ಗೊಂದಲ)

ಶ್ರೀ ಸಿದ್ದರಾಮಯ್ಯ :– Don't compare this incident with Ahmedabad incident. ಮಾನ್ಯ ಜೈಸ್ವಾಲ್‌ರವರು ಅಹಮದಾಬಾದ್ ಘಟನೆ ಬಗ್ಗೆ ಹೇಳಿಲ್ಲ. ಅವರು ಬೆಂಗಳೂರು ಬಗ್ಗೆ ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ :– ಮಾನ್ಯ ವಿರೋಧಪಕ್ಷದ ನಾಯಕರು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಈ ರೀತಿಯಾದ ಉತ್ತರ ಕೊಟ್ಟರೆ ಹೇಗೆ ?

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ :– ಮಾನ್ಯ ಅಧ್ಯಕ್ಷರೆ, ಆಗಬಹುದು, ಆಗಿರಬಹುದೆಂದು ಮಾನ್ಯ ಸಚಿವರು ಉತ್ತರ ಕೊಟ್ಟರೆ ಹೇಗೆ ?

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಯಾಗಿದ್ದುಕೊಂಡು ಬಹಳ ಜವಾಬ್ದಾರಿಯಾಗಿ ಹೇಳುವುದೇನೆಂದರೆ, ಈ ಸ್ಫೋಟದ ಬಗ್ಗೆ ಸ್ಪೆಸಿಫಿಕ್ ಆಗಿ ಯಾವುದೇ ಮಾಹಿತಿ ಬಂದಿಲ್ಲ. ಆದರೆ, ರೊಟೀನ್ ಆಗಿ ಬರುವಂಥ ಪತ್ರ ನಮಗೆ ಬಂದಿದೆ. ಮತ್ತೆ ನಿನ್ನೆ ದಿವಸ ಕೂಡ ಒಂದು ಪತ್ರ ಬಂದಿದೆ. ಈಗ ಆಗಿರತಕ್ಕಂಥ ಸ್ಫೋಟದ ಬಗ್ಗೆ ಮುನ್ಸೂಚನೆಯಾಗಿ ಯಾವುದೇ ಮಾಹಿತಿ ಕೇಂದ್ರ ಸರ್ಕಾರದಿಂದ ಬಂದಿಲ್ಲ. ರೆಕಾರ್ಡಲ್ಲೂ ಇಲ್ಲ.

(ಗೊಂದಲ)

ಅಧ್ಯಕ್ಷರು :– ಈಗ ಒಂದು ಪ್ರಕಟಣೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, what was the message you have received ?

ಅಧ್ಯಕ್ಷರು :- ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಗೆ ಈ ಚರ್ಚೆಯನ್ನು ಮುಗಿಸೋಣ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಮಗೆ ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ. ಅದಕ್ಕಾಗಿ ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :- ಈಗ ಪ್ರಕಟಣೆ.

ಪ್ರಕಟಣೆ

ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ ಮಾನ್ಯ ಅಶೋಕ್‌ರವರು ಹಾಗೂ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರು ಬರಬೇಕು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.48 ಗಂಟೆಗೆ ಮುಕ್ತಾಯಗೊಂಡು ಮತ್ತೆ ಸಂಜೆ 4.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 4 ಗಂಟೆ 14 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿದ್ದರಾಮಯ್ಯ : ಬೆಲ್ ಹೊಡೆಯುವುದು ಸರಿಯಾಗಿ ಕೇಳಿಸುತ್ತಿಲ್ಲ. ಕೆಂಗಲ್ ಹನುಮಂತಯ್ಯರ ಕಾಲದಲ್ಲಿ ಅದನ್ನು ಹಾಕಿದ್ದಾರೆಂದು ಕಾಣಿಸುತ್ತದೆ. ಅದನ್ನು ಬದಲಾಯಿಸುವುದಿಲ್ಲವೇ ?

ಅಧ್ಯಕ್ಷರು :- ಇಂಪಾಗಿ ಕೇಳಿಸುವಂತೆ ಅದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡೋಣ. ಈಗ ಆಯವ್ಯಯದ ಮೇಲೆ ಚರ್ಚೆಯನ್ನು ಮುಂದುವರೆಸೋಣ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುವುದಿಲ್ಲವೆ ?